
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಆಕ್ಟೋಬರ್ 31, 2007 ರೂ.10/-

ಗುಲ್ಬರ್ಗಾ

ಬಯ್ಯೋದೇ ಇವನ ಆಶೀರ್ವಾದ



ಪೋಲಿ ಸ್ವಾಮಿ

ಯಡ್ಡಿ ಸಿಎಂ ಆಗ್ತಾನೆ ಅಂದ





ಬಾಲಕೃಷ್ಣೇಗೌಡನ 1209 ಎಕರೆ ದರೋಡೆ

ಮಾರ್ಚ್‌ನಲ್ಲಿ ಚುನಾವಣೆ

ಬಂದ ಕಳ್ಳ ಕೃಷ್ಣ!



ತೆರೆಯಲ್ಲಿ ಸೂಪರ್ ಸ್ಟಾರ್ ಮನೆಯಲ್ಲಿ ದುರಂತ ನಾಯಕ



ಸೆನ್ಸೆಕ್ಸ್ 19000, ರೈತರ ಆತ್ಮಹತ್ಯೆ 1,19,000!

ಚಾರ್ವಾಕ
ಶಿವಸುಂದರ್

ಮುಂಬೈನ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಸೆನ್ಸೆಕ್ಸ್‌ನ ನಾಗಾಲೋಟವೇ ನಡೆದಿದೆ. ಮುಂಬೈ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಸೆನ್ಸೆಕ್ಸ್ ಸೂಚ್ಯಂಕ ಸಾವಿರ ಸಾವಿರ ಅಂಶಗಳಷ್ಟು ದಾಪುಗಾಲು ಹಾಕುತ್ತಿರುವುದನ್ನು ಇಂಗ್ಲಿಷ್ ಪತ್ರಿಕೆಗಳು ಮತ್ತು ಕೆಲವು ಕನ್ನಡ ಪತ್ರಿಕೆಗಳು ಕಳೆದ ಒಂದು ತಿಂಗಳಲ್ಲಿ ಕನಿಷ್ಠ ನಾಲ್ಕು ಬಾರಿಯಾದರೂ ಪ್ರಥಮ ಪುಟದಲ್ಲಿ ದಪ್ಪಕ್ಷರಗಳಲ್ಲಿ ಅಚ್ಚು ಮಾಡಿವೆ. ಮತ್ತು ಅದು ಭಾರತ ಅಭಿವೃದ್ಧಿಹೊಂದಿದ ಆರ್ಥಿಕ ಸೂಪರ್ ಪವರ್ ಆಗುತ್ತಿರುವೆಡೆ ಇಡುತ್ತಿರುವ ಮೈಲಿಗಲ್ಲು ಎಂದು ಸಂಪಾದಕೀಯಗಳನ್ನೂ ಬರೆದಿವೆ. ಯುಪಿಎ ಸರ್ಕಾರ ಬರಲಿರುವ ಚುನಾವಣೆಗಳಲ್ಲಿ ಅದನ್ನು ತನ್ನ ಸಾಧನೆಯ ಪಟ್ಟಿಯಲ್ಲೂ ಸೇರಿಸಿಕೊಳ್ಳುತ್ತಿದೆ.

ಕಳೆದ 2004ರ ಮೇ ತಿಂಗಳಲ್ಲಿ ಯುಪಿಎ ಸರ್ಕಾರ ಅಧಿಕಾರ ವಹಿಸಿಕೊಂಡಾಗ ಸೆನ್ಸೆಕ್ಸ್ ಸೂಚ್ಯಂಕ 5000ವಿತ್ತು. ಈಗ ಮೂರುವರೆ ವರ್ಷಗಳ ನಂತರ 2007ರ ಅಕ್ಟೋಬರ್‌ನಲ್ಲಿ ಅದರ ಸೂಚ್ಯಂಕ 19000ವನ್ನು ದಾಖಲಿಸಿದೆ. ಕೇವಲ ಆರು ದಿನಗಳ ಹಿಂದೆ ಅದು 18000ವಿತ್ತು. ಟ್ವೆಂಟಿ-ಟ್ವೆಂಟಿ ಮ್ಯಾಚಿನಲ್ಲಿ ಯುವರಾಜ್ ಆರು ಬಾಲಿಗೆ ಆರು ಸಿಕ್ಸರ್ ಬಾರಿಸಿದಂತೆ ಆರು ದಿನಗಳಲ್ಲಿ ಅದು 19000ವನ್ನು ಮುಟ್ಟಿದೆ. ಯುವರಾಜ್ ಸಿಕ್ಸರ್ ಬಾರಿಸಿದ್ದು ಹೇಗೆ, ದೇಶದ ಹೆಮ್ಮೆ ಎಂದು ಪತ್ರಿಕೆಗಳು ಬರೆದವೋ ಅದೇ ರೀತಿ ಇದನ್ನೂ ಬರೆಯುತ್ತಿವೆ. ಯುವರಾಜ್ ಪ್ರತಿನಿಧಿಸಿದ್ದು ದೇಶವನ್ನು, ಆದ್ದರಿಂದ ಯುವರಾಜನ ಸಾಧನೆಯಿಂದ ದೇಶವಾಸಿಗಳೆಲ್ಲಾ ಹೆಮ್ಮೆ ಪಡಬೇಕು ಎಂಬ ಲಾಜಿಕ್ಕನ್ನು ಕ್ರಿಕೆಟ್‌ನ ಭ್ರಮೆಯಲ್ಲಿ, ತುತ್ತು ಕೂಳಿಗಿಲ್ಲದಿದ್ದರೂ ಟಿವಿ ಶೋರೂಮುಗಳ ಮುಂದೆ ನೂಕುನುಗ್ಗಲಿನಲ್ಲಿ ಕ್ರಿಕೆಟ್ ನೋಡುವ ಯುವಜನತೆಯನ್ನು ನಂಬಿಸಿಬಿಡಬಹುದು. ಅದೂ ಭ್ರಾಂತಿಯೇ ಆದರೂ ಅದರಿಂದ ಈ ದೇಶದ ಬಡ ಮತ್ತು ಮಧ್ಯಮ ವರ್ಗದ ಬದುಕು ನೇರವಾಗಿ ಹಾನಿಗೊಳಗಾಗುವುದಿಲ್ಲ.

ಆದರೆ ಸೆನ್ಸೆಕ್ಸ್‌ನ ನಾಗಾಲೋಟದ ವಿಷಯ ಹಾಗಲ್ಲ. ಅದೂ ಏಕಕಾಲದಲ್ಲಿ ಈ ದೇಶದ ಶ್ರೀಮಂತರನ್ನು ಅತಿ ಶ್ರೀಮಂತರನ್ನಾಗಿ ಮಾಡಿದರೆ ಅದೇ ಸಮಯದಲ್ಲಿ ಬಡವರ ಜೀವನ ಭದ್ರತೆಯನ್ನು ಮತ್ತು ಅದನ್ನು ನೀಡಬೇಕಾಗಿದ್ದ ಈ ದೇಶದ ಆರ್ಥಿಕತೆಯನ್ನು ಅಸ್ಥಿರಗೊಳಿಸುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಈ ಸೆನ್ಸೆಕ್ಸ್ ಎಂದರೇನು? ಅದರ ಪ್ರಸ್ತುತ ನಾಗಾಲೋಟದ ಹಿಂದೆ ಇರುವ ಶಕ್ತಿಗಳು ಯಾವುವು? ಅವೇಕೆ ಭಾರತದಲ್ಲಿ ಹೂಡಲು ಆಸಕ್ತಿ ತೋರಿಸುತ್ತಿವೆ? ಅದಕ್ಕೆ ಪೂರಕವಾಗಿ ಸರ್ಕಾರ ಎಂಥ ಕಾನೂನುಗಳನ್ನು ಮಾಡಿ ಅವರನ್ನು ಆಕರ್ಷಿಸುತ್ತಿದೆ ಮತ್ತು ಅದರಿಂದ ಬಡಜನತೆಯ ಮೇಲೆ ಏನು ಪ್ರಭಾವ ಬೀರುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಈ ದೇಶದಲ್ಲಿ ಹತ್ತು ಸಾವಿರದಷ್ಟು ದೊಡ್ಡ ಖಾಸಗಿ ಮತ್ತು ಸರ್ಕಾರಿ ಕಾರ್ಪೊರೇಟ್ ಕಂಪನಿಗಳು ತಾವು ಹೂಡುವ ಬಂಡವಾಳದ ಜೊತೆಗೆ ಬಂಡವಾಳ ಮಾರುಕಟ್ಟೆಯಿಂದಲೂ ಹಣ ಸಂಗ್ರಹಿಸುತ್ತವೆ. ಅಂದರೆ ತಮಗೆ ನೂರು ಕೋಟಿ ಬಂಡವಾಳ ಬೇಕೆಂದಿದ್ದರೆ ನೂರು ರೂ.ಗಳ ಒಂದು ಕೋಟಿ ಶೇರುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಾರೆ. ಆ ಶೇರುಗಳನ್ನು ಕೊಂಡುಕೊಳ್ಳುವ ಮೂಲಕ ಶೇರುದಾರರು ಆ ಕಂಪನಿಯ ಬಂಡವಾಳದಲ್ಲಿ ಪಾಲುದಾರರಾಗುತ್ತಾರೆ. ಆದರೆ ಈ ಶೇರುಗಳನ್ನು ಸಾಮಾನ್ಯ ಸಣ್ಣ ಶೇರುದಾರರು ಕೊಂಡುಕೊಳ್ಳುವುದಕ್ಕಿಂತ ದೊಡ್ಡ ದೊಡ್ಡ ಕಂಪನಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಕೊಂಡುಕೊಳ್ಳುತ್ತವೆ. ಆ ಮೂಲಕ ಆ ಕಂಪನಿಯ ಮೇಲೆ ಸ್ವಾಮ್ಯ ಪಡೆಯುತ್ತವೆ. 1991ರಲ್ಲಿ ಈಗಿನ ಪ್ರಧಾನಿ ಮನಮೋಹನ್ ಸಿಂಗ್ ಆಗ ಹಣಕಾಸು ಮಂತ್ರಿಯಾಗಿ ಜಾರಿಗೆ ತಂದ ನೀತಿಗಳಿಂದಾಗಿ ಈ ರೀತಿಯ ಶೇರುಗಳನ್ನು ವಿದೇಶಿ ಹಣ ಹೂಡಿಕೆದಾರರೂ ಕೊಳ್ಳುವಂತಾಯಿತು.

ಈಗ ಯುಪಿಎ ಸರ್ಕಾರವೇ ಅಧಿಕಾರಕ್ಕೆ ಬಂದು ಮನಮೋಹನ್ ಸಿಂಗರೇ ಪ್ರಧಾನಿಯಾದ ಮೇಲೆ, ಜಾಗತೀಕರಣವನ್ನು ವಿರೋಧಿಸುತ್ತೇವೆ ಎಂಬ ಎಡ ಪಕ್ಷಗಳ ಬೆಂಬಲದ ಅನಿವಾರ್ಯತೆ ಇದ್ದರೂ, ವಿದೇಶಿ ಹಣಕಾಸು ಹೂಡಿಕೆದಾರರಿಗೆ ಭಾರತದಲ್ಲಿ ಇನ್ನೂ ಹಲವಾರು ರಿಯಾಯತಿಗಳನ್ನು ಮತ್ತು ಉತ್ತೇಜನಗಳನ್ನೂ ಒದಗಿಸಿದ್ದಾರೆ. ಆದ್ದರಿಂದಲೇ ಭಾರತದ ಹಣಕಾಸು ಮಾರುಕಟ್ಟೆಗೆ ದೊಡ್ಡ ಮಟ್ಟದಲ್ಲಿ ವಿದೇಶಿ ಬಂಡವಾಳ ಹರಿದು ಬರುತ್ತಿದೆ.

ಪ್ರತಿನಿತ್ಯ ಮುಂಬೈ, ದೆಹಲಿ, ಕೋಲ್ಕತ್ತ ಬೆಂಗಳೂರುಗಳಲ್ಲಿರುವ ಸ್ಟಾಕ್ ಎಕ್ಸ್‌ಚೇಂಜ್‌ಗಳಲ್ಲಿ ಬೇರೆಬೇರೆ ಕಂಪನಿಗಳ ಶೇರುಗಳನ್ನು ಕೊಳ್ಳುವುದೂ ಮತ್ತು ಮಾರುವುದೂ ನಡೆಯುತ್ತಿರುತ್ತದೆ. ಮುಂಬೈನ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ 450 ಕಂಪನಿಗಳ ಶೇರುಗಳ ವಹಿವಾಟು ನಡೆಯುತ್ತದೆ. ಅದರಲ್ಲಿ ಅತಿ ದೊಡ್ಡ 30 ಸರ್ಕಾರಿ ಹಾಗೂ ಖಾಸಗಿ ಕಂಪನಿಗಳ ಶೇರು ವ್ಯವಹಾರದ ಸೂಚ್ಯಂಕವೇ ಸೆನ್ಸೆಕ್ಸ್ ಸೂಚ್ಯಂಕ.

ಶೇರು ಮಾರುಕಟ್ಟೆ ಒಂದು ರೀತಿಯಲ್ಲಿ ಸಟ್ಟಾ ವ್ಯಾಪಾರವಿದ್ದಂತೆ. ಶೇರುಗಳ ಅಸಲಿ ಬೆಲೆ ಒಂದಿದ್ದರೆ ಆ ಶೇರಿನ ಮುಖಮೌಲ್ಯಕ್ಕಿಂತ ಹೆಚ್ಚು ಅಥವಾ ಅದಕ್ಕಿಂತ ಕಡಿಮೆ ಬೆಲೆಗೆ ಮಾರಾಟ-ಕೊಳ್ಳಾಟವಾಗುತ್ತಿರುತ್ತದೆ. ಯಾವುದಾದರೂ ಒಂದು ಕಂಪನಿಯಯ ಶೇರು ಹೆಚ್ಚು ಬೆಲೆಯಲ್ಲಿ ಮಾರಾಟವಾಗುತ್ತಿದೆಯೆಂದು ತಿಳಿದೊಡನೆ ಕುರಿಮಂದೆಯಂತೆ ಹೆಚ್ಚಿನ ಬ್ರೋಕರುಗಳು ಅದರ ಹಿಂದೆ ಬೀಳುತ್ತಾರೆ. ಆ ಶೇರಿನ ಬೆಲೆ ಊಹಿಸಲೂ ಸಾಧ್ಯವಾಗದಷ್ಟು ಹೆಚ್ಚುತ್ತದೆ. ಈ ಹೆಚ್ಚಳಕ್ಕೆ ನಿರ್ದಿಷ್ಟ ಕಾರಣಗಳಿರಬೇಕೆಂದೇನೂ ಇಲ್ಲ, ಲಾಭದಾಯಕತೆ, ಸರ್ಕಾರದ ನೀತಿ, ಮಾರುಕಟ್ಟೆ ವಾತಾವರಣ, ಮತ್ತು ರಾಜಕೀಯದ ಬಗೆಗಿನ ಯಾವುದೇ ಊಹಾಪೋಹಗಳಿಲ್ಲವನ್ನೂ ಬ್ರೋಕರುಗಳು ಕೃತಕವಾಗಿ ಶೇರು ಬೆಲೆಯನ್ನು ಇಳಿಸಲೋ ಅಥವಾ ಏರಿಸಲೋ ಬಳಸಿಕೊಳ್ಳುತ್ತಾರೆ.

ಅಂದರೆ ಒಂದು ಕಂಪನಿಯ ನಿಜವಾದ ಆರ್ಥಿಕ ಸ್ಥಿತಿಗತಿ ಅಥವಾ ಅದರ ಲಾಭದಾಯಕತೆ ಇತ್ಯಾದಿಗಳಿಗಿಂತ ಅದರ ಬಗ್ಗೆ ಬ್ರೋಕರುಗಳು ಹಬ್ಬಿಸುವ ಊಹಾಪೋಹಗಳೇ ಒಂದು ಶೇರಿಗೆ ಹೆಚ್ಚಿನ ಲಾಭ ತರುವುದು ಅಥವಾ ಕುಸಿಯುವಂತೆ ಮಾಡುವುದು ಮಾಡುತ್ತಿರುತ್ತದೆ. 1991ರವರೆಗೆ ಬಂಡವಾಳ ಮಾರುಕಟ್ಟೆಯಲ್ಲಿ ಈ ರೀತಿ ಬೇಕಾಬಿಟ್ಟಿ ಜೂಜು ಆಡುವಂತಿರಲಿಲ್ಲ, ಮತ್ತು ವಿದೇಶಿ ಬಂಡವಾಳ ಈ ಜೂಜಿನಲ್ಲಿ ಭಾಗವಹಿಸುವಂತಿರಲಿಲ್ಲ, ಹಾಗೂ ಸರ್ಕಾರಿ ಕಂಪನಿಗಳು ಭಾಗವಹಿಸುವಂತಿರಲಿಲ್ಲ, ಏಕೆಂದರೆ ಆ ರೀತಿಯ ಜೂಜಿನಿಂದ ಸಂಚಯವಾಗುವ ಬಂಡವಾಳ ಯಾವುದೇ ಸಮಯದಲ್ಲಿ ದೇಶ ಬಿಟ್ಟು ಹೊರಗಡೆ ಹೋಗಬಹುದು. ಆಗ ಆ ಬಂಡವಾಳವನ್ನು ಆಧರಿಸಿ ಸರ್ಕಾರ ತೆಗೆದುಕೊಳ್ಳಬೇಕಾಗಿದ್ದ ಅಥವಾ ಯಾವುದೇ ಖಾಸಗಿ ಕಂಪನಿ ತೆಗೆದುಕೊಳ್ಳಲು ಯೋಜಿಸಿದ್ದ ಆರ್ಥಿಕ ಕ್ರಮಗಳೆಲ್ಲಾ ಉಲ್ಟಾಪಲ್ಟಾ ಆಗುತ್ತದೆ. ಮತ್ತು ಆರ್ಥಿಕತೆಯೇ ಕಂಗೆಡುತ್ತದೆ. ಮತ್ತು ಅದರಿಂದಾಗಿ ಸರ್ಕಾರ ಹಾಗೂ ಸರ್ಕಾರಿ ಕಂಪನಿಗಳು ಮತ್ತು ಖಾಸಗಿ ಕಂಪನಿಗಳು ದಿವಾಳಿಯೇಳುವುದರಿಂದ ಅದನ್ನು ಆಧರಿಸಿದ್ದ ಉದ್ಯೋಗಿಗಳು ಮತ್ತು ಬಡಜನರ ಬದುಕು ಬೀದಿ ಪಾಲಾಗುತ್ತದೆ. 1994ರಲ್ಲಿ ಮೆಕ್ಸಿಕೋದಲ್ಲಿ, 1997ರಲ್ಲಿ ಆಗ್ನೇಯ ಏಷಿಯಾ ದೇಶಗಳಲ್ಲಿ, 2000ರಲ್ಲಿ ಬ್ರೆಜಿಲ್‌ನಲ್ಲಿ ಮತ್ತು 2001ರಲ್ಲಿ ಅರ್ಜಂಟಿನಾದಲ್ಲಿ ಆದದ್ದು ಇದೇ.

ಜಾಗತೀಕರಣ ನೀತಿಗಳನ್ನು ಅನುಸರಿಸುವ ಭಾಗವಾಗಿ 1997ರಲ್ಲೇ ಭಾರತ ಸರ್ಕಾರ ಭಾರತ ಶೇರು ಮಾರುಕಟ್ಟೆಯನ್ನು ಸಂಪೂರ್ಣವಾಗಿ ತೆರೆದಿಡುವ ಉದ್ದೇಶದಿಂದ ರಿಸರ್ವ್ ಬ್ಯಾಂಕಿನ ಡೆಪ್ಯೂಟಿ ಗವರ್ನರ್ ತಾರಾಪೂರ್ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿತ್ತು. ಅದು 1997ರಲ್ಲಿ ವರದಿ ನೀಡುವ ಸ್ವಲ್ಪ ಮುನ್ನ ಆಗ್ನೇಯ ಏಷಿಯಾ ದೇಶಗಳಲ್ಲಿ ಶೇರು ಮಾರುಕಟ್ಟೆಯಿಂದ ವಿದೇಶಿ ಬಂಡವಾಳಿಗರು ಹಿಂದೆ ಸರಿದು ಆ ಎಲ್ಲಾ ದೇಶಗಳ ಆರ್ಥಿಕತೆ ಕುಸಿದು ಬಿದ್ದು ಆ ದೇಶದ ಜನಗಳ ಪರಿಸ್ಥಿತಿ ಹೇಳತೀರದಂತಾಯಿತು. ಹೀಗಾಗಿ ಆ ಸಮಿತಿಯ ವರದಿಯನ್ನು ಬಹಿರಂಗವಾಗಿ ಅನುಷ್ಠಾನಕ್ಕೆ ತರುವ ಧೈರ್ಯವನ್ನು ಯಾವ ಸರ್ಕಾರಗಳು ತೋರಿಸಿರಲಿಲ್ಲ.

ಆದರೆ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮತ್ತೆ ಎರಡನೇ ತಾರಾಪೂರ್ ಸಮಿತಿಯನ್ನು ನೇಮಕ ಮಾಡಿತು. ಮತ್ತೆ ಇದರಲ್ಲಿ ಇದ್ದವರೆಲ್ಲಾ 1997ರಲ್ಲಿ ವರದಿಯನ್ನು ಕೊಟ್ಟಿದ್ದ ಸದಸ್ಯರೇ. ಹೀಗಾಗಿ ಅವರು ಕೊಟ್ಟ ವರದಿಯಲ್ಲಿ ವಿದೇಶಿ ದೊಡ್ಡ ಬಂಡವಾಳಿಗರು ಭಾರತದ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ಹಣ ಹೂಡುವುದಕ್ಕೆ ಇದ್ದ ಅಡ್ಡಿಯನ್ನೆಲ್ಲಾ ತೆಗೆದುಹಾಕಬೇಕೆಂದು ಸಲಹೆ ಮಾಡಿತ್ತು.

ಭಾರತದ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ಹಣ ಹೂಡಲು ವಿದೇಶಿ ಬಂಡವಾಳಿಗರಿಗೆ ಇದ್ದ ಅಡ್ಡಿಗಳೇನು? ಈವರೆಗೆ ಅವರು ಮಾಡುತ್ತಿದ್ದ ಲಾಭದ ಮೇಲೆ ನಿರ್ದಿಷ್ಟ ಪ್ರಮಾಣದ ಅಂಕುಶವಿರುತ್ತಿತ್ತು. ಮತ್ತು ಅವರು ಹೂಡುವ ಹಣದ ಒಂದಷ್ಟು ಭಾಗವನ್ನು ಮತ್ತೆ ಇಲ್ಲಿ ಮರು ಹೂಡಬೇಕೆಂಬ ಕಡ್ಡಾಯವಿರುತ್ತಿತ್ತು. ಮತ್ತು ಕೆಲವು ನಿರ್ದಿಷ್ಟ ಮತ್ತು ಸರ್ಕಾರಿ ಕಂಪನಿಗಳಲ್ಲಿ ಹಣ ಹೂಡಬಾರದೆಂಬ ನಿಯಮವಿರುತ್ತಿತ್ತು. ಈಗ ತಾರಾಪೂರ್ ಸಮಿತಿಯ ವರದಿ ಇವೆಲ್ಲವನ್ನು ತೆಗೆದುಹಾಕಬೇಕೆಂದು ಹೇಳಿದೆ. ಅದರಂತೆ ಸರ್ಕಾರ ಆ ಎಲ್ಲಾ ಅಡೆತಡೆಗಳನ್ನು ಸದ್ದಿಲ್ಲದಂತೆ ಒಂದೊಂದಾಗಿ ತೆಗೆದುಹಾಕುತ್ತಿದೆ. ಈಗ ಯಾವುದೇ ವಿದೇಶಿ ಕಂಪನಿ ನಮ್ಮ ಭಾರತದ ಕಂಪನಿಗಳ ಶೇರನ್ನು ಎಷ್ಟು ಬೆಲೆಗಾದರೂ ಕೃತಕವಾಗಿ ಕೊಂಡು ಅದರ ಶೇರುಬೆಲೆಯನ್ನು ಏರಿಸಬಹುದು. ಮತ್ತು ಆ ಜೂಜಿನಲ್ಲಿ ಮತ್ತೆ ಆ ಶೇರುಗಳನ್ನು ಮಾರಿ ತನ್ನ ಲಾಭವನ್ನು ಹೆಚ್ಚಿಸಿಕೊಳ್ಳಬಹುದು. ಹಾಗೂ ಅಷ್ಟು ಹಣವನ್ನು ಯಾವುದೇ ಪೂರ್ವ ಸೂಚನೆಯಿಲ್ಲದೆ ಏಕಾಏಕಿ ತನ್ನ ದೇಶಕ್ಕೆ ಸಾಗಿಸಬಹುದು. ಅಂದರೆ ತನ್ನ ಲಾಭಕ್ಕೆ ಭಾರತದ ಆರ್ಥಿಕತೆಯ ಜೊತೆಗೆ ಮತ್ತು ಇಲ್ಲಿನ ಜನತೆಯ ಭವಿಷ್ಯದ ಜೊತೆಗೆ ಜೂಜಾಡಿ ತನಗೆ ಅಷ್ಟು ಲಾಭವಿಲ್ಲ ಎಂದೆನಿಸಿದಾಗ ಕೂಡಲೇ ಹಣವನ್ನು ಹಿಂತೆಗೆದುಕೊಂಡು ಇಡೀ ದೇಶದ ಆರ್ಥಿಕತೆಯನ್ನು ಆಗ್ನೇಯ ದೇಶಗಳ ರೀತಿಯಲ್ಲಿ ಬಿಕ್ಕಟ್ಟಿಗೆ ದೂಡಬಹುದು.

ಆದ್ದರಿಂದಲೇ ಮೊನ್ನೆ ಐಎನ್‌ಜಿ ಇನ್ವೆಸ್ಟರ್ ಟ್ರಾಕಿಂಗ್ ಸ್ಟಡಿಯಲ್ಲಿ ಹಾಂಗ್‌ಕಾಂಗ್, ಜಪಾನ್, ಕೊರಿಯ, ಮಲೇಷಿಯಾ, ನ್ಯೂಜಿಲೆಂಡ್, ಸಿಂಗಪೂರ್, ತೈವಾನ್ ಇನ್ನಿತ್ಯಾದಿ ದೇಶಗಳ 1308 ಕಂಪನಿಗಳು ಚೀನಾ ಮತ್ತು ಭಾರತ ತಮ್ಮ ಶೇರು ಮಾರುಕಟ್ಟೆ ಹೂಡಿಕೆಗೆ ಅತ್ಯಂತ ಪ್ರಶಸ್ತವಾದ ಜಾಗ ಎಂದು ಹೇಳಿವೆ. ಇದು ಎಂಥಾ ಸಂದರ್ಭದಲ್ಲಿ ಎಂದರೆ ಅಮೆರಿಕದಲ್ಲಿ ಇದೇ ಕಂಪನಿಗಳೇ ಹೂಡಿರುವ ಕೋಟ್ಯಾಂತರ ಡಾಲರ್ ಹಣ ಶೇರು ಮಾರುಕಟ್ಟೆಯಲ್ಲಿ ನಷ್ಟ ಮಾಡಿಕೊಳ್ಳುತ್ತಿವೆ. ಏಕೆಂದರೆ ಅಲ್ಲಿನ ಆರ್ಥಿಕತೆಯಲ್ಲಿ ಈ ಕಂಪನಿಗಳು ಅಷ್ಟು ಸುಲಭವಾಗಿ ಜವಾಬ್ದಾರಿಯಿಲ್ಲದೆ ನುಣುಚಿಕೊಳ್ಳಲು ಸಾಧ್ಯವಾಗದಂತ ಕಾನೂನುಗಳಿವೆ. ಹೀಗಾಗಿಯೇ ಗೋಲ್ಡ್‌ಮ್ಯಾನ್ ಸ್ಯಾಶಸ್ ಎಂಬ ಕಂಪನಿ 1.5 ಬಲಿಯನ್ ಡಾಲರ್ ನಷ್ಟ ಅನುಭವಿಸಿದ್ದರೆ, ಭಾರತ ಸರ್ಕಾರ ಅಧಿಕೃತ ಆರ್ಥಿಕ ಸಲಹೆಗಾರನಾದ ಮೋರ್ಗನ್ ಸ್ಟಾನ್ಲಿ ಕಂಪನಿ ಅಮೆರಿಕದಲ್ಲಿ 2.4 ಬಿಲ್ಯನ್ ಡಾಲರ್ ಸಾಲ ಮಾಡಿಕೊಂಡಿವೆ. ಜರ್ಮನಿಯ ದಾಯಿಶ್ ಬ್ಯಾಂಕ್ 3.1 ಬಲಿಯನ್ ಡಾಲರ್ ನಷ್ಟವನ್ನೂ, ಭಾರತದ ಹಲವಾರು ರಾಜ್ಯಗಳಿಗೆ ಹಣಕಾಸು ಮತ್ತು ಕೃಷಿ ಸಲಹೆಗಾರನಾಗಿರುವ ಮೆರಿಲ್ ಲಿಂಚ್ ಕಂಪನಿ 5 ಬಲಿಯನ್ ಡಾಲರ್‌ನಷ್ಟು ನಷ್ಟವನ್ನು ಅನುಭವಿಸಿವೆ. ಅದರಲ್ಲೂ ಅಲ್ಲಿನ ಹಣಕಾಸು ಸಂಸ್ಥೆಗಳು ಗ್ರಾಹಕರಿಗೆ ಸಣ್ಣ ಸಾಲಗಳನ್ನು ನೀಡಿ (ಸಬ್ ಪ್ರೈಂ ಸಾಲ) ಅದು ಮರುಪಾವತಿಯಾಗದೆ ಕಳೆದ ಜೂನ್‌ನಿಂದ ಕೋಟ್ಯಾಂತರ ಡಾಲರ್ ನಷ್ಟ ಮಾಡಿಕೊಳ್ಳುತ್ತಿವೆ.

ಆಗಲೇ ಅವೆಲ್ಲ ಕಂಪನಿಗಳಿಗೆ ಲಾಭ ಮಾಡಿಕೊಳ್ಳುವ ದೊಡ್ಡ ರಹದಾರಿಯಾಗಿ ಭಾರತದ ಸ್ಟಾಕ್ ಮಾರುಕಟ್ಟೆ ಕಂಡಿದೆ. ವಾಸ್ತವವಾಗಿ ಯಾವಾಗ ಅಮೆರಿಕದಲ್ಲಿ ಸಬ್ ಪ್ರೈಂ ಸಾಲದ ಬಿಕ್ಕಟ್ಟಿನಿಂದ ಅಲ್ಲಿನ ಹಣಕಾಸು ಸಂಸ್ಥೆಗಳು ನಷ್ಟ ಅನುಭವಿಸಲು ಪ್ರಾರಂಭಿಸಿದವೋ ಆಗಿನಿಂದಲೇ ಅವು ಭಾರತದ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ಹಣ ಹೂಡುವುದೂ ಜಾಸ್ತಿಯಾಯಿತು. ಇಲ್ಲಿ ಚೀನಾಗಿಂತಲೂ ಉದಾರವಾದ ಹಣಕಾಸು ನೀತಿಗಳಿರುವುದರಿಂದ ಅವು ನಿರಾತಂಕವಾಗಿ ಭಾರತದ ಜನತೆಯ ಬದುಕಿನೊಂದಿಗೆ ಜೂಜಾಡಲು ಬರುತ್ತಿದೆ. ಆದ್ದರಿಂದಲೇ ಈ ಎಲ್ಲಾ ಕಂಪನಿಗಳು ಕಳೆದ ಮೂರು ತಿಂಗಳಿಂದ ಭಾರತದ ಶೇರು ಮಾರುಕಟ್ಟೆಯಲ್ಲಿ ದೊಡ್ಡ ರೀತಿಯಲ್ಲಿ ಹಣ ಹೂಡುತ್ತಿವೆ. ಕಳೆದ ಒಂದು ವಾರದಲ್ಲಿ ಮೇಲೆ ಹೇಳಲ್ಪಟ್ಟ ಕಂಪನಿಗಳು ಕನಿಷ್ಠವೆಂದರೆ 50,000 ಕೋಟಿ ಹಣ ಹೂಡಿ 2 ಲಕ್ಷ ಕೋಟಿಗೂ ಹೆಚ್ಚು ಲಾಭ ಮಾಡಿಕೊಂಡಿವೆ. ಆದ್ದರಿಂದಲೇ ಸೆನ್ಸೆಕ್ಸ್ ಒಂದೇ ಸಮನೆ ಏರುತ್ತಿದೆ.

ಹೀಗೆ ಸಾರಾಂಶದಲ್ಲಿ ಈ ಕಂಪನಿಗಳು ತಮ್ಮ ತವ[ರು] ದೇಶಗಳಲ್ಲಿ ಕಳೆದುಕೊಂಡ ಲಾಭವನ್ನು ಇಲ್ಲಿ ಹೀರಿಕೊಳ್ಳ[ಲು] ಧಾವಿಸುತ್ತಿವೆ. ಭಾರತ ಸರ್ಕಾರ ಭಾರತೀಯರ ಬದುಕ[ನ್ನು] ಮತ್ತು ಆರ್ಥಿಕತೆಯನ್ನು ಮುಕ್ಕಲು ಬರುತ್ತಿರುವ ಈ [...]ರಣಹದ್ದುಗಳನ್ನು ಎರಡು ಕೈಗಳಿಂದ ರೆಡ್ ಕಾರ್ಪೆಟ್ ಹಾಕಿ ಸ್ವಾಗತಿಸುತ್ತಿದೆ. ಅದನ್ನೇ ದೇಶದ ಹೆಮ್ಮೆ ಎಂದು ಬಣ್ಣಿಸುತ್ತಿದೆ.

ಆದ್ದರಿಂದಲೇ ಅತಿವೇಗವಾಗಿ ಸೆನ್ಸೆಕ್ಸ್ ಸೂಚ್ಯಂ[ಕ] 19,000ವನ್ನು ದಾಟಿತೆಂದರೆ ಅಷ್ಟು ವೇಗವಾಗಿ ಈ ದೇಶದ ಆರ್ಥಿಕತೆಯ ರಕ್ತಸ್ರಾವವಾಗುತ್ತಿದೆಯೆಂದರ್ಥ. ವೇಗದ ರಕ್ತಸ್ರಾವವೆಂದರೆ ವೇಗದಲ್ಲಿ ದೇಶದ ಸಾವ[ು] ಎಂದರ್ಥ. ಇದು ಹೆಮ್ಮೆಯೋ ಅಥವಾ ಸರ್ಕಾರಗಳ[ು] ನಮ್ಮ ಅಜ್ಞಾನದೊಂದಿಗೆ ಆಡುತ್ತಿರುವ ಸಾವಿನ ಸರಸವೋ[...]

No Comments

"ಐಪಿಎಸ್ ಅಧಿಕಾರಿಗಳೆಂದರೆ ದೇವರುಗಳೇನಲ್ಲ."

ಬಿಮನ್ ಬೋಸ್, ಪಶ್ಚಿಮ ಬಂಗಾ[ಳ] ಸಿಪಿಎಮ್ ಪಕ್ಷದ ಕಾರ್ಯದ[ರ್ಶಿ]



"ನನ್ನ ಮಗ ಪರಿಸರವಾದಿ. ಏಕೆಂದರೆ ಅವನು ತೋಟದಲ್ಲಿ ಗಿಡ ನೆಡುತ್ತಾನೆ. ಆದ್ದರಿಂದ ಅವನನ್ನು ಮಾಲಿನ್ಯ ನಿಯಂತ್ರಣ ಮಂಡಲಿ ಸದಸ್ಯನನ್ನಾಗಿ ಮಾಡಿರುವುದರಲ್ಲಿ ಏನೂ ತಪ್ಪಿಲ್ಲ."

-ಮಾಜಿ ಅರಣ್ಯ ಮಂತ್ರಿ ಚನ್ನಿ[ಗಪ್ಪ]



"ನನಗೂ ಮತ್ತು ಶೋಭಾ ಕರಂದ್ಲಾಜೆಗೂ ಮಂತ್ರಿಸ್ಥಾನ ಕೊಡಿ ಎಂದು ನಾನೇನೂ ಕುಮಾರಸ್ವಾಮಿಯನ್ನು ಅಂಗಲಾಚಿಕೊಂಡಿಲ್ಲ. ಸುಳ್ಳು ಹೇಳಿರುವ ಅವರು ಧರ್ಮಸ್ಥಳದಲ್ಲಿ ಆಣೆ ಮಾಡಿ ಹೇಳಲಿ ನೋಡೋಣ."

-ಯಡಿಯೂರ[ಪ್ಪ]

ನಂಬಿದ್ರೆನಂಬಿ ಬಿಟ್ರೆಬಿಡಿ

"ನಾನು ಅಂಜದ ಹೆಣ್ಣು."

ಬೆನಜೀರ್ ಭುಟ್ಟೊ



"ಅಂಬೇಡ್ಕರ್ ಚಿಂತನೆಯನ್ನೂ ನಿಜಕ್ಕೂ ಜಾರಿಗೆ ತರುತ್ತಿರುವ ನಾಯಕಿಯೆಂದರೆ ಮಾಯಾವತಿ."

-ಪಿಜಿಆರ್ ಸಿಂಧ್ಯಾ

ಈ ಸಮಿತಿಯ ವರದಿಯನ್ನು ಊಹಿಸಬಲ್ಲಿರಾ?

"ಭಾರತದಲ್ಲಿ ಶಾಲಾಮಕ್ಕಳಿಗೆ ಲೈಂಗಿಕ ಶಿಕ್ಷಣ ನೀಡುವುದರ ಕುರಿತಾದ ಪಾರ್ಲಿಮೆಂಟ್ ಸಮಿತಿಗೆ ಬಿಜೆಪಿಯ ವೆಂಕಯ್ಯನಾಯ್ಡು ಅಧ್ಯಕ್ಷ."

-ಪತ್ರಿಕಾ ವ[...]

ಇವರನ್ನು ಓಡಿಸಲು ಏನು ಮಾಡಬೇಕು?



"ಬಡತನ ಓಡಿಸಲು ನಮ್ಮ ಆಶ್ರಮದಿಂದ ಮೇಣದ ಬತ್ತಿ ಮೆರವಣಿಗೆ, ಸಮೂಹ ಸಂಗೀತ ಮತ್ತು ನೃತ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ."

- ರವಿಶಂಕರ ಸ್ವಾಮಿ[...]

ನಾಗರಿಕ ರಾಷ್ಟ್ರಗಳ ಅಸಲಿ ಬಣ್ಣ

"ಜನಾಂಗೀಯ ನಿಂದನೆ ಮತ್ತು ಅವಮಾನದ ಘಟನೆಗಳು ಆಸ್ಟ್ರೇಲಿಯಾ ದೇಶಾದ್ಯಂತ ಇರುವ ಎಲ[್ಲಾ] ಕ್ರೀಡೆಗಳಲ್ಲೂ ಹಾಸುಹೊಕ್ಕಾಗಿದೆ. ಹಾಗೂ ಅದರಲ್ಲಿ ವೃತ್ತಿಪರ ಕ್ರೀಡಾಪಟುಗಳು, ಕೋಚ್‌ಗಳು ಮತ್ತು ಪ್ರೇಕ್ಷಕರೂ ಶಾಮೀಲಾಗಿದ್ದಾರೆ."

-ಆಸ್ಟ್ರೇಲಿಯಾದ ಜನಾಂಗೀಯ[...] ವಿರೋಧಿ ಸಮಿತಿ ಅಧ್ಯ[ಕ್ಷ]

ವಾರದ ಘೋಷಣೆ

"ಬಿಳಿಯರ ಮೇಲಿರುವ ಚಾರಿತ್ರಿಕ ಜವಾಬ್ದಾರಿಯೆಂದರೆ ತಮ್ಮನ್ನು ತಾವು ನಾಗರಿಕರನ್ನಾಗಿಸಿಕೊಳ್ಳುವುದು"

-ಇತ್ತೀಚೆಗೆ ಅಮೆರಿಕದ[ಲ್ಲಿ] ಬಿಡುಗಡೆಯಾದ ಪುಸ್ತಕದಿ[ಂದ]

ಒಂದು ಪ್ರೀತಿಯ ಕೊಲೆ




ಕಂಡಹಾಗೆ

ನಮ್ಮ ದೇಶದಲ್ಲಿ ಇವತ್ತಿಗೂ ಜಾತಿ, ಧರ್ಮ, ವರ್ಗ ಎಂಬ ಬೇಧಭಾವದಲ್ಲಿ ಹೇಗೆ ಪ್ರೀತಿ, ಮನುಷ್ಯತ್ವ, ಮಾನವೀಯತೆ ಎಲ್ಲವೂ ಬಲಿಯಾಗುತ್ತವೆ ಎಂಬುದಕ್ಕೆ ರಿಜ್ವಾನೂರ್ ರೆಹಮಾನ್ ಎಂಬ ಯುವಕನ ದುರಂತ ಕತೆಯೇ ಸಾಕ್ಷಿ.

ರಿಜ್ವಾನೂರ್ ಒಂದು ಬಡ ಮುಸ್ಲಿಂ ಕುಟುಂಬದಲ್ಲಿ ಜನಿಸಿದ. ಕೊಲ್ಕತ್ತಾದ ಸ್ಲಂ ಒಂದರಲ್ಲಿ ಬೆಳೆದ ಈತ ಕಷ್ಟಪಟ್ಟು ಓದಿ, ಉನ್ನತ ಕಾಲೇಜಿನಲ್ಲಿ ವಿದ್ಯಾಭ್ಯಾಸ ಪಡೆದು, ಖ್ಯಾತ ಸಂಸ್ಥೆಯೊಂದರಲ್ಲಿ ಕಲಾವಿದನಾಗಿದ್ದ. ತನ್ನ ಸರಳತೆ ಮತ್ತು ಪ್ರತಿಭೆಯಿಂದ ಎಲ್ಲರಿಗೂ ಇಷ್ಟವಾಗುತ್ತಿದ್ದ ರಿಜ್ವಾನೂರ್ ಕಲಾ ಕಾಲೇಜಿನಲ್ಲೂ ಉಪನ್ಯಾಸಕನಾಗಿದ್ದ.

ಆ ಕಾಲೇಜಿಗೆ ವಿದ್ಯಾರ್ಥಿನಿಯಾಗಿ ಬಂದವಳು ಪ್ರಿಯಾಂಕಾ ಟೋಡಿ. ಆಕೆ ಹಿಂದೂ ಕುಟುಂಬದಲ್ಲಿ ಜನಿಸಿದ್ದಳಲ್ಲದೆ, ಆಕೆಯ ತಂದೆ ಅಶೋಕ್ ಟೋಡಿ ಸುಮಾರು ಮುನ್ನೂರು ಕೋಟಿ ರೂಪಾಯಿಗಳ ವಹಿವಾಟಿನ ಕಂಪನಿಯ ಒಡೆಯ.





ಒಂದೆಡೆ ಸ್ಲಂನಿಂದ ಬಂದಿದ್ದ ಮುಸ್ಲಿಮ್ ಯುವಕ. ಇನ್ನೊಂದೆಡೆ ಕೋಟ್ಯಾಧಿಪತಿಯ ಮಗಳಾದ ಹಿಂದೂ ಹುಡುಗಿ. ಆದರೆ ಪ್ರೀತಿಗೆ ಜಾತಿ, ಧರ್ಮ, ವರ್ಗ ಎಂಬುದು ಇರಲ್ಲ ಅಂತಾರಲ್ಲ, ಹಾಗೆ ರಿಜ್ವಾನೂರ್ ಮತ್ತು ಪ್ರಿಯಾಂಕಾ ನಡುವೆ ಪ್ರೇಮ ಬೆಳೆಯಿತು.

ಆಕೆಯ ಐಷಾರಾಮಿ ಬಂಗಲೆಗಿಂತ ವಿಭಿನ್ನವಾಗಿದ್ದ ತನ್ನ ಮಾಮೂಲಿ ಮನೆಯನ್ನು ನೋಡಲು ರಿಜ್ವಾನೂರ್ ಪ್ರಿಯಾಂಕಾಳನ್ನು ಕರೆದುಕೊಂಡು ಹೋದ. ಆ ಮನೆಯಲ್ಲಿ ಬಡತನದೊಂದಿಗೆ ಅವನ ತಾಯಿ, ಅಣ್ಣಂದಿರ ನಡುವೆ ಇದ್ದ ಪ್ರೀತಿಯ ಐಶ್ವರ್ಯವನ್ನು ಆಕೆ ಕಂಡಳು. ಆತನನ್ನೇ ಮದುವೆಯಾಗುವುದಾಗಿ ನಿರ್ಧರಿಸಿದ ಪ್ರಿಯಾಂಕಾ ಆತನ ಮಿತವ್ಯಯ ಬದುಕಿನೊಂದಿಗೆ ಹೊಂದಿಕೊಳ್ಳಲು ತನ್ನ ಜೀವನ ಶೈಲಿಯಲ್ಲಿ ಬದಲಾವಣೆಗಳನ್ನು ತರಲಾರಂಭಿಸಿದಳು. ತಂದೆಯ ಹಣದಿಂದ ತನಗೆ ಲಭ್ಯವಾಗಿದ್ದ ಸುಖಗಳನ್ನು ಒಂದೊಂದಾಗಿ ತ್ಯಜಿಸಲಾರಂಭಿಸಿದಳು.

ಆದರೆ ಅವರಿಬ್ಬರಿಗೂ ಚೆನ್ನಾಗಿ ಗೊತ್ತಿತ್ತು; ಯಾವುದೇ ಕಾರಣಕ್ಕೂ ಪ್ರಿಯಾಂಕಾಳ ತಂದೆ ಅವರ ಮದುವೆಗೆ ಸುತಾರಾಂ ಒಪ್ಪುವುದಿಲ್ಲವೆಂದು. ಅವರ ಅಭ್ಯಂತರಕ್ಕೆ ಕಾರಣ ರಿಜ್ವಾನೂರ್ ಬಡವ, ಕೆಳವರ್ಗದವನು, ಸ್ಲಂನಿಂದ ಬಂದವನು; ಇದೆಲ್ಲಕ್ಕಿಂತ ಮುಖ್ಯವಾಗಿ ಆತ ಮುಸ್ಲಿಂ ಧರ್ಮದವನು ಎಂಬುದೇ ಆಗಿತ್ತು.

ಕಳೆದ ನಾಲ್ಕು ವರ್ಷಗಳಿಂದ ರಿಜ್ವಾನೂರ್‌ನ ಬಗ್ಗೆ ತನ್ನ ತಂದೆಯ ಅಭಿಪ್ರಾಯವನ್ನು ಬದಲಾಯಿಸಲು, ಆತನನ್ನು ಅಳಿಯನಾಗಿ ಸ್ವೀಕರಿಸಲು, ಜಾತಿ-ಧರ್ಮ-ವರ್ಗ ಎಂಬ ಸಂಕುಚಿತ ಭಾವನೆಯಿಂದ ಹೊರಬರುವಂತೆ ಮಾಡಲು ಪ್ರಿಯಾಂಕಾ ಬಹಳಷ್ಟು ಪ್ರಯತ್ನಿಸಿದ್ದಳು. ಆದರೆ ಆತ ತನ್ನ ನಿಲುವಿನಲ್ಲಿ ಒಂದಿಷ್ಟೂ ಬದಲಾವಣೆಗಳನ್ನು ಮಾಡಿಕೊಳ್ಳಲಿಲ್ಲ. ಆಗಸ್ಟ್ 31 ರಂದು ಅಪ್ಪನ ಮನೆ ಬಿಟ್ಟು ಹೊರ ನಡೆದಳು.

ಅಂದೇ ಆಕೆಯನ್ನು ಮದುವೆಯಾದ ರಿಜ್ವಾನೂರ್ ಅವಳನ್ನು ತನ್ನ ಮನೆಗೆ ಕರೆದುಕೊಂಡು ಹೋದ. ಅವನ ತಾಯಿ, ಅಣ್ಣ ಎಲ್ಲರೂ ಆಕೆಯನ್ನು ಪ್ರೀತಿಯಿಂದ ಸ್ವಾಗತಿಸಿದರು. ಆದರೆ ಅಂದಿನಿಂದ ರಿಜ್ವಾನೂರ್ ಮತ್ತು ಪ್ರಿಯಾಂಕಾಳಿಗೆ ಪೊಲೀಸರ ಕಾಟ ಶುರುವಾಯಿತು. ತನ್ನ ಮಗಳನ್ನು ಹುಡುಕಿಕೊಂಡು ಬಂದ ಪ್ರಿಯಾಂಕಾಳ ತಂದೆ ಅಶೋಕ್ ಅವಳು ಮನೆಗೆ ಹಿಂದಿರುಗುವಂತೆ ಒತ್ತಾಯಿಸಿದ. ಆಕೆ ಒಪ್ಪದಿದ್ದಾಗ ಆತ "ಮಗಳು ನಾಪತ್ತೆಯಾಗಿದ್ದಾಳೆ. ಅವಳನ್ನು ರಿಜ್ವಾನೂರ್ ಎಂಬಾತ ಅಪಹರಿಸಿದ್ದಾನೆ" ಎಂದು ಪೊಲೀಸರಿಗೆ ದೂರು ಕೊಟ್ಟನಲ್ಲದೆ ಆತನ ವಿಳಾಸವನ್ನು ನೀಡಿದ.

ಹೇಗಿದ್ದರೂ ಕೊಲ್ಕತ್ತಾದ ಪೊಲೀಸ್ ಕಮೀಷನರ್ ಪ್ರಸುನ್ ಮುಖರ್ಜಿ ಪ್ರಿಯಂಕಾಳ ತಂದೆಯ ಸ್ನೇಹಿತ. ಕಳೆದ ವರ್ಷ ಪಶ್ಚಿಮ ಬೆಂಗಾಲ್ ಕ್ರಿಕೆಟ್ ಅಸೋಸಿಯೇಷನ್‌ನ ಅಧ್ಯಕ್ಷ ಸ್ಥಾನಕ್ಕೆ ಮುಖರ್ಜಿ ಸ್ಪರ್ಧಿಸಿದ್ದಾಗ ಪ್ರಭಾವಿ ಉದ್ಯಮಿ ಅಶೋಕ್ ಟೋಡಿ ಆತನಿಗೆ ಹಲವಾರು ರೀತಿ ಸಹಕರಿಸಿದ್ದ. ಹಲವರ ಪ್ರಕಾರ ಚುನಾವಣೆಯಲ್ಲಿ ಸ್ಪರ್ಧಿಸಲು ಸಾಕಷ್ಟು ಹಣ ಸಹಾಯವನ್ನೂ ಟೋಡಿ ಮಾಡಿದ್ದ.

ಈ ಪ್ರಸುನ್ ಮುಖರ್ಜಿ ಕೂಡ ಸಾಮಾನ್ಯ ವ್ಯಕ್ತಿಯಲ್ಲ. ಈಗಾಗಲೇ ಹಲವು ಭ್ರಷ್ಟಾಚಾರದ ಆರೋಪಗಳನ್ನು ಹೊತ್ತಿರುವ ಈತನನ್ನು ಕಂಡರೆ ಹಾಲಿ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯರಿಗೆ ಎಲ್ಲಿಲ್ಲದ ಪ್ರೀತಿ. ಎಷ್ಟು ಪ್ರೀತಿ ಎಂದರೆ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ಚುನಾವಣೆಯಲ್ಲಿ ಈತನ ವಿರುದ್ಧ ಯಾರೂ ಸ್ಪರ್ಧಿಸದಂತೆ ನೋಡಿಕೊಂಡ ಭಟ್ಟಾಚಾರ್ಯ, ಆತ ಗೆಲ್ಲುತ್ತಿದ್ದಂತೆ "ದುಷ್ಟತನದ ವಿರುದ್ಧ ಒಳ್ಳೆಯದರ ಗೆಲುವು. ಇದನ್ನು ಸಾಧ್ಯವಾಗಿಸಿದ್ದು ದೈವ ಲೀಲೆ" ಎಂದು ಘೋಷಿಸಿದ್ದರು. ಅಂದಹಾಗೆ, ಭಟ್ಟಾಚಾರ್ಯರು ಕಮ್ಯುನಿಸ್ಟ್ ಮಾತ್ರವಲ್ಲ, ನಾಸ್ತಿಕರು ಕೂಡ.


ಹೀಗೆ ಉದ್ಯಮಿಯ ಹಣ, ಪೊಲೀಸ್ ಅಧಿಕಾರಿಯ ಪ್ರಭಾವ ಮತ್ತು ಆ ಅಧಿಕಾರಿಗೆ ಮುಖ್ಯಮಂತ್ರಿಯ ಆಶೀರ್ವಾದ... ಈ ಮೂರು ಅಂಶಗಳು ಒಂದುಗೂಡಿ ರಿಜ್ವಾನೂರ್ ಮತ್ತು ಪ್ರಿಯಾಂಕಾಳರ ಬದುಕು ನರಕವಾಗಲಾರಂಭಿಸಿತು. ಪೊಲೀಸ್ ಕಮಿಷನರ್ ಕಚೇರಿಗೆ ಈ ದಂಪತಿಗಳನ್ನು ಕರೆದು ಅವರ ಮೇಲೆ ಒತ್ತಡ ತರುವ ಕಾರ್ಯ ಶುರುವಾಯಿತು. ಪ್ರಿಯಾಂಕಾಳಿಗೆ "ಇವನನ್ನು ಬಿಟ್ಟು ಮನೆಗೆ ಹಿಂದಿರುಗು" ಎಂದು ಹೇಳಿದರೆ "ಅವಳನ್ನು ಕಳುಹಿಸದಿದ್ದರೆ ನೀನು ಅಶೋಕ್ ಟೋಡಿ ಮನೆಯಿಂದ ಮೊಬೈಲ್ ಫೋನ್ ಕದ್ದಿದ್ದೀಯ ಅಂತ ಕೇಸ್ ಹಾಕ್ತೇವೆ" ಎಂದು ರಿಜ್ವಾನೂರ್‌ನನ್ನು ಬೆದರಿಸಿದರು. ಅದ್ಯಾವುದಕ್ಕೂ ಇವರು ಜಗ್ಗಲಿಲ್ಲ.

ರಿಜ್ವಾನೂರ್ ಮತ್ತು ಪ್ರಿಯಾಂಕಾ ಮದುವೆಯಾಗಿ ಒಂದು ವಾರವಾಗಿತ್ತು, ಆಗ ಮತ್ತೆ ಅವರನ್ನು ಕಮಿಷನರ್ ಆಫೀಸಿಗೆ ಕರೆಸಿ "ನಿನ್ನ ಅಪ್ಪನಿಗೆ ಹುಷಾರಿಲ್ಲ. ಒಂದು ವಾರದ ಮಟ್ಟಿಗಾದರೂ ಮನೆಗೆ ಹೋಗು" ಎಂದರು. ಇದರ ಬಗ್ಗೆ ಇವರಿಬ್ಬರು ಗುಮಾನಿ ವ್ಯಕ್ತಪಡಿಸಿದಾಗ ಅಲ್ಲಿಗೆ ಬಂದಿದ್ದ ಪ್ರಿಯಾಂಕಾಳ ಚಿಕ್ಕಪ್ಪ ಖಂಡಿತವಾಗಿಯೂ ಒಂದು ವಾರದ ನಂತರ ಆಕೆಯನ್ನು ವಾಪಸ್ಸು ಕಳುಹಿಸುತ್ತೇವೆ ಎಂದು ಪೊಲೀಸರ ಮುಂದೆ ಮುಚ್ಚಳಿಕೆ ಬರೆದುಕೊಟ್ಟ.

ಅತ್ತ ಪ್ರಿಯಾಂಕಾ ಅಪ್ಪನ ಮನೆ ಸೇರುತ್ತಿದ್ದಂತೆ, ಇತ್ತ ರಿಜ್ವಾನೂರ್‌ಗೆ ಪೊಲೀಸರಿಂದ ಬೆದರಿಕೆಗಳು ಪ್ರಾರಂಭವಾದವು. ಇದೆಲ್ಲದರಿಂದ ರಿಜ್ವಾನೂರ್ ಎಷ್ಟು ಹೆದರಿದನೆಂದರೆ ಆತ ಮನೆಯನ್ನೇ ತೊರೆದು ಎಲ್ಲೆಲ್ಲೊ ವಾಸ ಮಾಡಲಾರಂಭಿಸಿದ. ತನಗೆ ಪೊಲೀಸರಿಂದ ಅಪಾಯವಿದೆ ಎಂದು ಮಾನವಹಕ್ಕುಗಳ ಸಂಘಟನೆಗೆ ದೂರಿದ. ಆದರೂ ಮದುವೆಯಾಗಿ ಹದಿನೈದು ದಿನಕ್ಕೆ ಆತನ ಶವ ರೈಲು ಹಳಿ ಬಳಿ ಬಿದ್ದಿತ್ತು.

ಕೂಡಲೇ ಮಾನವಹಕ್ಕು ಹೋರಾಟಗಾರರು ಮತ್ತು ಪತ್ರಕರ್ತರು ಎಚ್ಚೆತ್ತುಗೊಂಡರು. ಪೊಲೀಸ್ ಕಮಿಷನರ್ ಪ್ರಸುನ್ ಮುಖರ್ಜಿಯನ್ನು ರಿಜ್ವಾನೂರ್ ಸಾವು ಕುರಿತಂತೆ ಪ್ರಶ್ನಿಸಿದರು. ರಿಜ್ವಾನೂರ್‌ನ ಹೆಣವಿನ್ನೂ ಪೋಸ್ಟ್ ಮಾರ್ಟಂಗೆ ಹೋಗಿರಲಿಲ್ಲ, ಆದರೂ "ಇದು ಆತ್ಮಹತ್ಯೆ ಅಥವಾ ಅಪಘಾತ" ಎಂದು ಮುಖರ್ಜಿ ತನ್ನ ತೀರ್ಪನ್ನು ನೀಡಿದ. "ಅಲ್ಲಾ, ನೀವು ರಿಜ್ವಾನೂರ್ ಮತ್ತು ಪ್ರಿಯಾಂಕಾಳನ್ನು ತಮ್ಮ ಆಫೀಸಿಗೆ ಕರೆಸಿ ಬೆದರಿಸಿದ್ದರಂತೆ" ಎಂದು ಕೇಳಿದರೆ ಈತ ಉಡಾಫೆಯಿಂದ ಉತ್ತರಿಸಿದ್ದು ಹೀಗೆ: "ಹೌದು. ಬೇರೆಬೇರೆ ಧ್ರುವಗಳಿಂದ ಬಂದವರ ನಡುವೆ ಮದುವೆಯಾದರೆ ಅದು ಸರಿ ಇರುವುದಿಲ್ಲ. ಅಪ್ಪ ಅಮ್ಮನ ಒಪ್ಪಿಗೆ ಇಲ್ಲದೆ ಮದುವೆಯಾಗುವುದು ನೈತಿಕತೆಯಲ್ಲ. ಇಂಥವರನ್ನು ಕರೆದು ಅವರಿಗೆ ಬುದ್ಧಿ ಹೇಳುವುದು ಪೊಲೀಸರ ಕರ್ತವ್ಯ. ನಾವಲ್ಲದೆ ಈ ಕೆಲಸವನ್ನು PWD ಇಲಾಖೆ ಮಾಡುತ್ತಾ?"

ರಿಜ್ವಾನೂರ್ ಸಾವು ಅನುಮಾನಾಸ್ಪದವಾಗಿತ್ತು. ರೈಲಿನ ಹಳಿಗಳ ಹತ್ತಿರವಿದ್ದ ಆತನ ತಲೆಯ ಹಿಂದೆ ದೊಡ್ಡದಾದ ಗಾಯವೊಂದಿತ್ತೆ ಹೊರತು ಬೇರೆಲ್ಲೂ





ಗಾಯಗಳಿರಲಿಲ್ಲ. ಅಷ್ಟೇ ಅಲ್ಲ, ಸಾಮಾನ್ಯವಾಗಿ ಹೀಗೆ ಶವಗಳು ರೈಲಿನ ಹಳಿಗಳ ಹತ್ತಿರ ಸಿಕ್ಕಾಗ ಅದನ್ನು ಪರೀಕ್ಷಿಸಲು ಪೊಲೀಸರು ಮೂರ್ನಾಲ್ಕು ಗಂಟೆಗಳ ನಂತರ ಬರುತ್ತಾರೆ. ಆದರೆ ರಿಜ್ವಾನೂರ್‌ನ ಶವವನ್ನು ಪರೀಕ್ಷಿಸಲು ಅರ್ಧ ಗಂಟೆಯಲ್ಲೇ ಆಗಮಿಸಿದ ಪೊಲೀಸರು, ಆತನ ಜೇಬಿನಲ್ಲಿದ್ದ ಮೊಬೈಲ್ ಫೋನ್ ರಿಂಗಾಗುತ್ತಿದ್ದರೂ ಅದನ್ನು ಸ್ವೀಕರಿಸಿಲ್ಲ. ಇದನ್ನು ಪ್ರತ್ಯಕ್ಷ ಕಂಡ ನಾಗರಿಕನೊಬ್ಬ "ಆ ಕರೆ ಸ್ವೀಕರಿಸಿದರೆ ಈತ ಯಾರು ಎಂದು ಕೂಡಲೇ ಗೊತ್ತಾಗುತ್ತೆ" ಎಂದಾಗಲೂ ಪೊಲೀಸರು ಸುಮ್ಮನಿದ್ದರು. ಆತ ಹೇಳಿದಂತೆ "ಆ ಶವ ಯಾರದ್ದು ಎಂದು ಪೊಲೀಸರಿಗೆ ಚೆನ್ನಾಗಿ ಗೊತ್ತಿತ್ತು ಎಂಬುದು ಆದ್ದರಿಂದಲೇ ಸಾಬೀತಾಗುತ್ತದೆ."

ಇದಕ್ಕಿಂತಲೂ ಮುಖ್ಯವಾದದ್ದು ಯಾವುದೆಂದರೆ ರಿಜ್ವಾನೂರ್‌ನ ದೇಹ ಅಲ್ಲಿ ಸಿಕ್ಕಿದ್ದಕ್ಕೂ, ಆ ಹಳಿ ಮೇಲೆ ರೈಲು ಗಾಡಿ ಹಾದು ಹೋದ ಸಮಯಕ್ಕೂ ಸಂಬಂಧ ಇರಲಿಲ್ಲ, ಮತ್ತು ಅಶೋಕ್ ಟೋಡಿಯ ಪ್ರಚೋದನೆ, ಮುಖರ್ಜಿಯ ಪೊಲೀಸ್ ತಂಡ, ಇವೆರಡು ಇಲ್ಲದಿದ್ದರೆ ರಿಜ್ವಾನೂರ್ ಕೊಲೆ ಆಗುತ್ತಿರಲಿಲ್ಲ, ಅಂದರೆ ರಿಜ್ವಾನೂರ್‌ನನ್ನು ಪೊಲೀಸರೇ ಕೊಂದು ಆತನ ಹೆಣವನ್ನು ಅಲ್ಲಿ ಬಿಸಾಡಿದ್ದರು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ ಮಾತ್ರವಲ್ಲ ರಿಜ್ವಾನೂರ್ ಮತ್ತು ಪ್ರಿಯಾಂಕಾಳನ್ನು ತಮ್ಮ ಆಫೀಸಿಗೆ ಕರೆದು ಬೆದರಿಸಿದ್ದರು ಎಂದು ಹಲವು ಪೊಲೀಸ್ ಅಧಿಕಾರಿಗಳೇ ಸಾಕ್ಷಿ ನೀಡಲು ಸಿದ್ಧರಾಗಿದ್ದಾರೆ.

ಆದರೆ ಬುದ್ಧದೇವ್ ಭಟ್ಟಾಚಾರ್ಯ ಎಂಬ ಕಮ್ಯುನಿಸ್ಟ್ ಮುಖ್ಯಮಂತ್ರಿ ತನ್ನ ಎಲ್ಲ ಸಿದ್ಧಾಂತ, ನೈತಿಕತೆಯನ್ನು ತೊರೆದು ಮುಖರ್ಜಿಯ ಬೆಂಬಲಕ್ಕೆ ನಿಂತರು. ಸಾಮಾನ್ಯ ಜನರು ರಿಜ್ವಾನೂರ್ ಸಾವನ್ನು ಕುರಿತು ಸಿಬಿಐ ತನಿಖೆಯಾಗಲಿ ಎಂದರೆ ಭಟ್ಟಾಚಾರ್ಯ ಅದನ್ನು ತನ್ನ ಹಿಡಿತದಲ್ಲಿರುವ ಸಿಓಡಿಗೆ ಒಪ್ಪಿಸಿದರು. ಕೊನೆಗೆ ಹೈಕೋರ್ಟ್ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕೆಂದು ಆದೇಶಿಸಿತು.

ಇಷ್ಟೆಲ್ಲಾ ಆದ ನಂತರ ಮುಖರ್ಜಿಯನ್ನು ಕಮಿಷನರ್ ಹುದ್ದೆಯಿಂದ ವರ್ಗಾಯಿಸಬೇಕೆಂದು ಜನರಿಂದ, ಪತ್ರಕರ್ತರಿಂದ, ಮಾನವ ಹಕ್ಕುಗಳ ಸಂಘಟನೆಯಿಂದ ಒತ್ತಡ ಬಂದರೂ ಅದಕ್ಕೆ ಭಟ್ಟಾಚಾರ್ಯ ಸಿದ್ಧರಿರಲಿಲ್ಲ. ಕೊನೆಗೆ ಅವರ ಸಿಪಿಎಂ ಪಕ್ಷದವರು ಮತ್ತು ಇತರೆ ಎಡಪಂಥೀಯ ಸಂಘಟನೆಯವರು ಪಟ್ಟು ಹಿಡಿದರು. ಆಗಲೂ ಭಟ್ಟಚಾರ್ಯ "ಕಾನೂನು ಇಲಾಖೆಯ ಅಭಿಪ್ರಾಯ ಕೇಳುತ್ತೇನೆ" ಎಂದು ತಿಪ್ಪೆ ಸಾರಿಸಲು ನೋಡಿದರು. ಸಾಧ್ಯವೇ ಇಲ್ಲ, ಈಗಲೇ ಆತನನ್ನು ವರ್ಗಾಯಿಸಿ ಎಂದು ಎಲ್ಲರು ಒತ್ತಡ ತಂದ ಕಾರಣ ಒಲ್ಲದ ಮನಸ್ಸಿನಿಂದ ಅವರು ಒಪ್ಪಿಕೊಂಡರು.

ಜಾತಿ, ಧರ್ಮ, ವರ್ಗ ಎಂಬ ಬೇಧಭಾವ ಇಲ್ಲದ ಸಿದ್ಧಾಂತದವನ್ನೇ ಆಧರಿಸಿರುವ ಕಮ್ಯುನಿಸ್ಟ್ ಪಕ್ಷದ ಮುಖ್ಯಮಂತ್ರಿಯೊಬ್ಬ ಇರುವಾಗಲೂ, ಕಳೆದ ನಾಲ್ಕು ದಶಕಗಳಿಂದ ಎಡಪಂಥೀಯ ಪಕ್ಷಗಳನ್ನೇ ಗೆಲ್ಲಿಸುತ್ತಿರುವ ಪಶ್ಚಿಮ ಬಂಗಾಳದಂತಹ ರಾಜ್ಯದಲ್ಲೂ, ಅಶೋಕ್ ಟೋಡಿ ಎಂಬ ಕೋಟ್ಯಾಧಿಪತಿ, ಸಿಪಿಎಂ ಕಮ್ಯೂನಿಸ್ಟರು, ಪ್ರಸುನ್ ಮುಖರ್ಜಿ ಎಂಬ ಪೊಲೀಸ್ ಅಧಿಕಾರಿ ಜೊತೆಗೂಡಿ ರಿಜ್ವಾನೂರ್ ರೆಹಮಾನ್ ಎಂಬ ಬಡ ಮುಸ್ಲಿಮನ ಹೆಣ ಕೆಡವುತ್ತಾರೆ ಅಂದರೆ ಇಲ್ಲಿ ಗಾಂಧಿಗೆ, ಬುದ್ಧನಿಗೆ, ಜಾತ್ಯತೀತತೆಗೆ, ಸಮಾನ ಸಮಾಜಕ್ಕೆ, ಪ್ರೀತಿಗೆ, ಮನುಷ್ಯತ್ವಕ್ಕೆ ಅರ್ಥವಿದೆಯಾ?


-ಗೌರಿ ಲಂಕೇಶ್

ನಾಲ್ಕೇ ದಿನದಲ್ಲಿ ಕುಮಾರಣ್ಣ ಮತ್ತೆ ಸಿಎಂ?
ಯಲಹಂಕದ ಮೆಂಟಲ್ ಸ್ವಾಮೀಜಿ!

ಓಬ್ಬ ಮಾಜಿ ಪ್ರಧಾನಿ, ಆತನ ಮಗ ಮಾಜಿ ಮುಖ್ಯಮಂತ್ರಿಯಂಥವರೇ ಶಂಕರಮಠದ ವಂಚಕ ಸೋಮಯಾಜಿಯ ಕಾಲಿಗೆ ಬಿದ್ದ ಮೇಲೆ ಹುಚ್ಚಾಸ್ಪತ್ರೆ ಗಿರಾಕಿಗಳೂ ದೇವರಾಗುತ್ತಾರೆ. ಅಂಥವರ ಮಾತನ್ನೇ ಸುದ್ದಿ ಮಾಡುವ ಕರ್ಮ ಪತ್ರಕರ್ತರಿಗೂ ತಪ್ಪ ಬಹುತ್ತೆ!


ಮೊನ್ನೆ ಶಾಸಕರ ಭವನದ ಮೀಡಿಯಾ ಸೆಂಟರ್‌ನಲ್ಲಿ ನಡೆದ ಇಂಥದ್ದೇ ಹುಚ್ಚಾಟವೊಂದಕ್ಕೆ ಪತ್ರಕರ್ತರು ತಲೆ ಕೊಡಬೇಕಾಯಿತು.

ಅದು ಶ್ರೀಶ್ರೀಶ್ರೀ ಜಗನ್ನಾಥ ಸ್ವಾಮೀಜಿ ಎಂಬ ತಲೆತಿರುಕನ ಪತ್ರಿಕಾಗೋಷ್ಠಿ. ಹಿಂದಿನ ದಿನವೇ ಮುಂದಿನ ಸಿಎಂ ಯಾರು? ಸರ್ಕಾರ ಯಾರದ್ದು? ಇತ್ಯಾದಿ ಭವಿಷ್ಯ ನುಡಿಯುತ್ತೇನೆಂದು ಜಗನ್ನಾಥ ಸ್ವಾಮೀಜಿಯೇ ಆಹ್ವಾನ ಪತ್ರಿಕೆ ಕಳಿಸಿದ್ದರಿಂದ ಬಂದ ವರದಿಗಾರರಿಗೂ ವಿಕೃತ ಕುತೂಹಲವಿತ್ತು. ಅದಕ್ಕೆ ತಕ್ಕಂತೆ ಬಿಟ್ಟಿ ಮನರಂಜನೆ ಕೊಟ್ಟವನು ಜಗನ್ನಾಥ ಸ್ವಾಮೀಜಿ-



"ಇನ್ನು ನಾಲ್ಕೇ ದಿನದಲ್ಲಿ ಕುಮಾರ ಸ್ವಾಮಿ ಮತ್ತೆ ಮುಖ್ಯಮಂತ್ರಿಯಾಗ್ತಾನೆ. ಮತ್ತೆ ಜೆಡಿಎಸ್-ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತೆ. ಅದೂ ಕೇವಲ ಮೂರೇ ತಿಂಗಳಲ್ಲಿ ಪತನವಾಗುತ್ತೆ. ರಾಹುಲ್‌ಗಾಂಧಿ ಯಾವತ್ತಿಗೂ ಪ್ರಧಾನಿಯಾಗೋಲ್ಲ. ಭೂಮಿ ಖಂಡಿತ ಪ್ರಳಯವಾಗುತ್ತೆ. ಆಗ ತಿರುಪತಿ ನಡುಗುತ್ತೆ....!"

ಇತ್ಯಾದಿ ಜಗನ್ನಾಥ ಸ್ವಾಮೀಜಿ ಡೈಲಾಗಿನ ಮೇಲೆ ಡೈಲಾಗ್ ಕುಟ್ಟುತ್ತಿದ್ದರೆ, ವರದಿಗೆಂದು ಬಂದ ಪತ್ರಕರ್ತರು ಹೊಟ್ಟೆ ಹಿಡಕೊಂಡು ನಕ್ಕುಬಿಟ್ಟರು. ತರಲೆ ಪ್ರಶ್ನೆಗಳು ಶುರುವಾದಂತೆ ಸ್ವಾಮೀಜಿಯ ಪಿತ್ಥವೂ ಕೆರಳುತ್ತಿತ್ತು. ಖಾವಿ ಧರಿಸಿದ್ದ ಜೊತೆಗೇ ತನ್ನ ಪತ್ನಿಯನ್ನೂ ಕೂರಿಸಿಕೊಂಡಿದ್ದ ಈ ಜಗನ್ನಾಥ್ ಸ್ವಾಮೀಜಿಯದು ಹೊಸ ಎಂಟ್ರಿ. ಯಲಹಂಕದ ಜ್ಯುಡಿಷಿಯಲ್ ಲೇಔಟನಲ್ಲಿ ಈತನಿಗೊಂದು ಮನೆಯಿದೆ. ಬೇರೆಲ್ಲ ಸ್ವಾಮಿಗಳು ತಮ್ಮನ್ನು ಗುರುಗಳೆಂದು ಘೋಷಿಸಿಕೊಂಡರೆ ಈ ಜಗನ್ನಾಥ ಸ್ವಾಮೀಜಿ ಸ್ವಯಂಘೋಷಿತ ದೇವರು!



ಈತನೇ ತಿರುಪತಿ ತಿಮ್ಮಪ್ಪನ ಅವತಾರವಂತೆ. ಈತ ಪತ್ನಿ ಆಶಾ ಎಂಬಾಕೆಯೇ ಪದ್ಮಾವತಿಯಂತೆ!

"ಇನ್ನು ನಾನೇಕೆ ಮಠ, ದೇವಸ್ಥಾನ ಕಟ್ಟಿಕೊಳ್ಳಲಿ? ನನ್ನ ಮನೆಗೇ ಭಕ್ತಾದಿಗಳು ಬರುತ್ತಾರೆ. ನನ್ನ ಕುರಿತೇ ಭಜನೆ ಮಾಡ್ತಾರೆ. ಈ ಭೂಮಿಯೇ ನನ್ನ ಸೃಷ್ಟಿಯಾಗಿರುವಾಗ ನಾನೇಕೆ ಯಾರಿಂದಲಾದರೂ ನಿರೀಕ್ಷೆ ಮಾಡಲಿ? ನಾನು ಕುಮಾರ ಸ್ವಾಮಿಗೆ ಒಲಿದಿದ್ದೇನೆ. ಇನ್ನು ನಾಲ್ಕೇ ದಿನದಲ್ಲಿ ಅವನನ್ನು ಮುಖ್ಯಮಂತ್ರಿ ಮಾಡ್ತೇನೆ.....!"

ಇದು ಜಗನ್ನಾಥ ಸ್ವಾಮಿಯ ವರಸೆ. ಯಾರೋ ವರದಿಗಾರನೊಬ್ಬ 'ಅಲ್ರೀ ಮೂರೇ ತಿಂಗಳಲ್ಲಿ ಸರ್ಕಾರವನ್ನು ಏಕೆ ಬೀಳಿಸ್ತೀರಿ? ಅದನ್ನ ನಿಮಗಿಷ್ಟ ಬಂದಷ್ಟು ದಿನ ಅಧಿಕಾರದಲ್ಲಿಡಬಹುದಲ್ಲ?' ಎಂದರೆ; ಈ ಜಗನ್ನಾಥ ಸ್ವಾಮೀಜಿ 'ಅದು ನನ್ನಿಷ್ಟ. ನೀನ್ಯಾರೋ ಕೇಳೋಕೆ?' ಎಂದುಬಿಟ್ಟ!

ಅಲ್ಲಿಗೆ ಪತ್ರಿಕಾಗೋಷ್ಠಿಗೆ ಬಂದವರಿಗೆಲ್ಲ ಇದು ನಿಮ್ಹಾನ್ಸ್ ಕೇಸು ಎಂಬುದು ಗ್ಯಾರಂಟಿಯಾಗಿತ್ತು. ಅದಕ್ಕೆ ತಕ್ಕಂತೆ ಸ್ವಾಮೀಜಿಯ ಮಹಿಮೆ ಸಾರುವ ಕರಪತ್ರವೊಂದನ್ನು ವಿತರಿಸಲಾಯ್ತು. ಅದರಲ್ಲಿ; ಯಾರೆಲ್ಲ ಸ್ವಾಮೀಜಿಗೆ ಈ ರೀತಿ ಕಾಟ ಕೊಡುತ್ತಾರೋ ಅವರೆಲ್ಲ ನಾಶವಾಗುತ್ತಾರೆಂದೂ, ಕೆಲ ಪುಂಡರು ಈ ರೀತಿ ಕಾಟ ಕೊಟ್ಟದ್ದರಿಂದಲೇ ಸುನಾಮಿ, ಚಂಡಮಾರುತ, ಭೂಕಂಪ, ಅತಿವೃಷ್ಟಿಗಳು ಸಂಭವಿಸಿತೆಂದೂ ಜಗನ್ನಾಥನೇ ಅಚ್ಚು ಹಾಕಿಸಿದ್ದ!



ಈತ ಸಿಟ್ಟಾಗಿದ್ದರಿಂದಲೇ ಬದರಿನಾಥ ಮತ್ತು ಕೇದಾರನಾಥದಲ್ಲಿ ಹಿಮಲಿಂಗ ಮೂಡುತ್ತಿಲ್ಲವಂತೆ. ಬ್ರಹ್ಮ, ವಿಷ್ಣು ಮಹೇಶ್ವರರೆಲ್ಲ ದೇವಲೋಕವನ್ನು ತೊರೆದು ಈತನ ಜ್ಯುಡಿಷಿಯಲ್ ಲೇಔಟ್ ಮನೆಯಲ್ಲೇ ತಂಗಿದ್ದಾರಂತೆ. ಆದ್ದರಿಂದ ತಿರುಪತಿಗೇಕೆ ಹೋಗ್ತೀರಿ? ಇಲ್ಲೇ ಜ್ಯುಡಿಷಿಯಲ್ ಲೇಔಟಗೆ ಬಂದು ನನ್ನ ದರ್ಶನ ಮಾಡಿ.....!

ಹಾಗೆಂದು ಅರೆಹುಚ್ಚ ಜಗನ್ನಾಥ ಸ್ವಾಮೀಜಿ ಬಡಬಡಿಸುತ್ತಲೇ ಇದ್ದರೆ ಈತ ಮಾತು ಮುಗಿಸುವ ಮೊದಲೇ ಮೀಡಿಯಾ ಸೆಂಟರ್ ಖಾಲಿಯಾಗಿತ್ತು. ಅಷ್ಟಕ್ಕೂ, ಜಗನ್ನಾಥ ಯಾರು? ಎತ್ತ? ಎಂದು ಕೆದಕ ಹೊರಟರೆ ಅದೇ ಮತ್ತೊಂದು ಇಂಟರೆಸ್ಟಿಂಗ್ ಸ್ಟೋರಿಯಾಗುತ್ತದೆ. 1999 ರ ವರೆಗೂ ಹೈಕೋರ್ಟ್ ಗುಮಾಸ್ತನಾಗಿದ್ದ ಈತ ಮೂಲತಃ ಕೇರಳದವನು. ಜ್ಯುಡಿಷಿಯಲ್ ಲೇಔಟನಲ್ಲಿ ಸೈಟು ಸಿಕ್ಕಿದ್ದೇ ಅಲ್ಲೊಂದು ಮನೆ ಕಟ್ಟಿಸಿಕೊಂಡು ಒಂದಷ್ಟು ದಿನಗಳ ಕಾಲ ಕಲಿ, ಭಕ್ತನಾಗಿದ್ದ. ಕ್ರಮೇಣ ತಲೆಕೂದಲನ್ನು ಜಡೆಯಂತೆ ಬೆಳೆಸಿ ತಾನೇ ತಿರುಪತಿ ವೆಂಕಟೇಶ್ವರನೆಂದು ರೈಲುಬಿಟ್ಟ. ಕೇಳಿದವರೆಲ್ಲ ಹುಚ್ಚರಬೇಕೆಂದು ಜಾಗ ಖಾಲಿ ಮಾಡುತ್ತಿದ್ದರೆ ಎಲ್ಲೂ ಬೋಣಿಯಾಗಲಿಲ್ಲ, ಈಗ ತನ್ನ ಹೆಂಡತಿಗೂ ಖಾವಿ ತೊಡಿಸಿ ಆಕೆಯ ತಲೆಕೂದಲನ್ನು ಜಡ್ಡುಗಟ್ಟಿಸಿದ್ದಾನೆ. ಮಿಕ್ಕಂತೆ ಬೇರೆ ಸ್ವಾಮಿಗಳ ಹಾಗೆ ಈತನಿಗೆ ಭಕ್ತರಾಗಲಿ, ಮಠವಾಗಲಿ, ದೇವಸ್ಥಾನವಾಗಲಿ ಇಲ್ಲ, ಯಾರೂ ನಂಬುತ್ತಿಲ್ಲ. ಆದಕ್ಕೇ ಕುಮಾರಸ್ವಾಮಿಯನ್ನು ಇನ್ನು ನಾಲ್ಕೇ ದಿನದಲ್ಲಿ ಮುಖ್ಯಮಂತ್ರಿ ಮಾಡ್ತೀನಿ ಎಂದು ಪತ್ರಿಕಾಗೋಷ್ಠಿ ಕರೆದಿದ್ದಾನೆ. ತಮಾಷೆಯೆಂದರೆ ಈತನೇ ಪತ್ರಿಕಾಗೋಷ್ಠಿ ಕರೆದು ಹೇಳಿದಂತೆ ಈಗಾಗಲೇ ನಾಲ್ಕು ದಿನ ಕಳೆದು ಹೋಗಿದೆ. ಕುಮಾರಸ್ವಾಮಿ ಮತ್ತೆ ಸಿಎಂ ಆಗುವುದಿರಲಿ ಜೆಡಿಎಸ್ ಪಾಲಿಗೆ ಅಧಿಕಾರ ಕೂಡ ಮರೀಚಿಕೆಯಾಗುತ್ತಿದೆ.

ಮಾಜಿ ಮುಖ್ಯಮಂತ್ರಿಯೊಬ್ಬ ಜ್ಯೋತಿಷಿ ವೇಷದ ಕಳ್ಳಕಾಕರ ಕಾಲಿಗೆ ಬೀಳುತ್ತಾನೆಂದರೆ ಹುಚ್ಚರು ದೇವರಾಗುತ್ತಾರೆ. ಖದೀಮರು ಖಾವಿ ತೊಡುತ್ತಾರೆ!

■ ರಾ. ಸೋಮನಾಥ್

ಕಂದೇಗಾಲದ ದಲಿತರು: ಕತ್ತಲಿಂದೊಂದು ಕೂಗು

ಗುಂಡ್ಲುಪೇಟೆಯಿಂದ 14 ಕಿ.ಮಿ. ದೂರವಿರುವ, ಕಸಬಾ ಹೋಬಳಿಯ ಒಂದು ಹಿಂದುಳಿದ ಗ್ರಾಮ ಕಂದೇಗಾಲ. ಇಲ್ಲಿನ ಮೇಲುಜಾತಿಯಾದ ಲಿಂಗಾಯತರದ್ದು 200 ಮನೆಗಳು, ದಲಿತರಲ್ಲಿ ಮಾದಿಗರದ್ದು 40 ಮನೆ ಹಾಗು ಹೊಲೆಯರದ್ದು ಒಂಬತ್ತು ಮನೆಗಳಿವೆ. ಗ್ರಾಮದಲ್ಲಿ ಪ್ರಧಾನವಾಗಿ ವ್ಯವಸಾಯವೇ ಕಸುಬು. ಲಿಂಗಾಯತರು ಭೂಮಾಲೀಕರಾಗಿರುವುದರಿಂದ ದಲಿತರು ಅವರ ಜಮೀನಿನಲ್ಲಿ ದಿನಗೂಲಿ ಕೆಲಸಕ್ಕೆ ಹೋಗುತ್ತಾರೆ. ಈಗ ಗಂಡಸರಿಗೆ ದಿನದ ಕೂಲಿಯಾಗಿ 50 ರೂ.ಗಳನ್ನು, ಹೆಂಗಸರಿಗೆ 30 ರೂ.ಗಳನ್ನು ನೀಡುತ್ತಾರೆ. ಮೂರು ವರ್ಷಕ್ಕೊಮ್ಮೆ ಕೂಲಿಯಲ್ಲಿ ಶೇ.1 ಒಂದರಷ್ಟು ಬಡ್ತಿ!

ಹಿಂದೆ ಇದೇ ಊರಿನ ದಲಿತರು ಎರಡರಿಂದ ಐದು ರೂಪಾಯಿಗಳಿಗೂ ಕೆಲಸ ಮಾಡಿದ್ದಿದೆ. ಅದಕ್ಕೆ ಅವರಿಗೆ ಈಗ ಸಿಗುತ್ತಿರುವ ಐವತ್ತು ರೂಪಾಯಿ ದೊಡ್ಡದಾಗಿ ಕಾಣಿಸುತ್ತಿದೆ. ಅಲ್ಪಸ್ವಲ್ಪ ಓದಿದ ದಲಿತ ಹುಡುಗರಿಗೂ ಸರಕಾರದ ಯೋಜನೆಗಳ ಬಗ್ಗೆ ಗೊತ್ತಿಲ್ಲದಿರುವುದರಿಂದ ಅವರೂ ಇಲ್ಲೇ ಕೂಲಿ ಆಳುಗಳಾಗಿ ಉಳಿದಿದ್ದಾರೆ.

ಸದಾ ಆರ್ಥಿಕ ಸಂಕಷ್ಟದಲ್ಲಿರುವ ಇಲ್ಲಿನ ಎಲ್ಲಾ ದಲಿತರು ಲಿಂಗಾಯತರಿಂದ ಸಾಲ ಪಡೆದವರಾಗಿದ್ದಾರೆ. ಈ ಸಾಲದ ಋಣ ಮತ್ತು ಕೆಲಸಕ್ಕೆ ಲಿಂಗಾಯತರನ್ನೇ ಅವಲಂಬಿಸಿರಬೇಕಾದ ಅನಿವಾರ್ಯತೆ ಇಲ್ಲಿನ ದಲಿತರನ್ನು ಜೀತದಂತಹ ಕರಾಳ ಸ್ಥಿತಿಯಲ್ಲಿ ನರಳುವಂತೆ ಮಾಡಿದೆ.

ಜೀತ ಒಂದೆಡೆಯಾದರೆ ಇನ್ನೊಂದೆಡೆ ಅಸ್ಪೃಶ್ಯತಾ ಪದ್ಧತಿ. ಇಲ್ಲಿನ ದಲಿತರು ನೀರನ್ನು ಮುಟ್ಟುವುದಿರಲಿ, ಮೇಲುಜಾತಿಯವರು ಬಸ್ಸನ್ನು ಏರಿದನಂತರವೇ ಇವರು ಏರಬೇಕು. ಅಷ್ಟೇ ಅಲ್ಲ, ಲಿಂಗಾಯತರ ಮುಂದಿನ ಸೀಟನಲ್ಲಿ ಕೂರುವಂತಿಲ್ಲ, ಅಪ್ಪಿತಪ್ಪಿಯೂ ದೇಹವನ್ನು ಸೋಂಕಿಸುವಂತಿಲ್ಲ, ಹಾಗೊಮ್ಮೆ ಆದರೆ "ಲಾಡಿ ಗಂಡ", "ಮಾದಿಗ ಮುಂಡೆ" ಎಂದೆಲ್ಲ ಬೈಸಿಕೊಳ್ಳಬೇಕು. ಇನ್ನು ದೇವಸ್ಥಾನಕ್ಕೆ ಪ್ರವೇಶವೇ ಇಲ್ಲ, ದೇವರ ಮೆರವಣಿಗೆಯಲ್ಲಿ ಇವರ ಕೇರಿಯತ್ತ ಬಿಸಾಡುವ ಹೂಗೊಂಚಲೇ ದೇವರ ಆಶೀರ್ವಾದ ಇಲ್ಲಿನ ದಲಿತರಿಗೆ. ಇಲ್ಲಿನ ಯುವ ದಲಿತರು ಒಳ್ಳೆಯ ಬಟ್ಟೆ ಹಾಕುವಂತಿಲ್ಲ, ಆಕಸ್ಮಾತ್ ಹಾಕಿದರೆ "ಇವೆಲ್ಲಾ ನಮ್ಮ ಗೌಡ್ರುಗುಟ್ಟಿದವ್ರು" ಎಂದು ಲೇವಡಿ ಮಾಡುತ್ತಾರೆ. ಒಟ್ಟಾರೆ ಪ್ರತಿ ಹಂತದಲ್ಲೂ ದಲಿತರಲ್ಲಿ ಕೀಳರಿಮೆ ಮೂಡಿಸುವ ಸಂಸ್ಕೃತಿ ಕಂದೇಗಾಲದಲ್ಲಿ ಇನ್ನೂ ಅಸ್ತಿತ್ವದಲ್ಲಿದೆ.

ಇನ್ನು ಇಂತಹ ಪರಿಸ್ಥಿತಿಯಲ್ಲಿ ದಲಿತರ ಮೇಲಿನ ದೌರ್ಜನ್ಯಕ್ಕೆ ಮಿತಿಯೇ ಇಲ್ಲದಂತಾಗಿದೆ. ಕಳೆದ ಐದು ತಿಂಗಳಿನಿಂದ ಇಲ್ಲಿನ ದಲಿತರ ಮೇಲೆ ವಿಧಿಸಿರುವ ಕಾನೂನು ಬಾಹಿರ ಸಾಮಾಜಿಕ ಬಹಿಷ್ಕಾರದಿಂದ ಇವತ್ತು ಅವರೆಲ್ಲ ಒಂದು ಹೊತ್ತಿನ ಊಟವೂ ಇಲ್ಲದ, ಕುಡಿಯುವ ನೀರು ಇಲ್ಲದಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಆದರೆ ಅವರ ನೆರವಿಗೆ ರಾಜಕೀಯ ನಾಯಕರಾಗಲಿ, ಅಧಿಕಾರಿಗಳಾಗಲಿ, ಪೊಲೀಸರಾಗಲೀ ಬಂದಿಲ್ಲ.

ಸಾಮಾಜಿಕ ಬಹಿಷ್ಕಾರಕ್ಕೆ ಕಾರಣಗಳನ್ನು ನೋಡುವ ಮುನ್ನ, ಜೀತ ಪದ್ಧತಿಗೆ ಕಾರಣಗಳೇನೆಂದು ನೋಡಬೇಕಿದೆ. ಏಕೆಂದರೆ ಇಲ್ಲಿನ ಶೋಷಣೆಯ ಆರ್ಥಿಕ ವ್ಯವಸ್ಥೆ ಹಾಗೂ ಅದಕ್ಕೆ ಪೂರಕವಾಗಿರುವ ಸಾಂಸ್ಕೃತಿಕ-ಸಾಮಾಜಿಕ ಕಟ್ಟುಪಾಡುಗಳು ಕೂಡ ಕೆಲಸ ಮಾಡಿರುತ್ತವೆ. ಇತರೆ ಕಡೆಗಳಂತೆ ಇಲ್ಲಿಯೂ ಮದುವೆಗೆಂದೋ, ಹಬ್ಬಕ್ಕೆಂದೋ, ಅನಾರೋಗ್ಯಕ್ಕೆಂದೋ ಮೇಲುಜಾತಿಯವರು ಸಾಲ ಕೊಡುತ್ತಾರೆ. ಕೆಲವೊಮ್ಮೆ ದಲಿತರು ಶೇ. 5 ರಷ್ಟು ಬಡ್ಡಿ ದರದಲ್ಲಿ ಸಾಲ ಪಡೆಯುತ್ತಾರೆ. ಸಾಲ ತೀರಿಸುವುದಿರಲಿ, ಪ್ರತಿ ತಿಂಗಳು ಬಡ್ಡಿ ನೀಡಲೂ ದಲಿತರ ಕೂಲಿ ಎಂದೂ ಸಾಕಾಗುವುದಿಲ್ಲ. ಆದ್ದರಿಂದ ಸಾಲ ಬೆಳೆಯುತ್ತಲೇ ಹೋಗುತ್ತದೆ, ಜೀತ ಮುಂದುವರೆಯುತ್ತಲೇ ಇರುತ್ತದೆ. ಹಲವೊಮ್ಮೆ ಜೀತ ಮಾಡುವುದೂ ಪಿತ್ರಾರ್ಜಿತವಾಗಿ ಪಡೆದ ಶಾಪವಾಗುತ್ತದೆ.

ಅವತ್ತೊಂದು ದಿನ ಸಿದ್ದಮ್ಮ ಎಂಬ ದಲಿತ ಮಹಿಳೆ ಬೇರೆಯವರ ಜಮೀನಿನಲ್ಲಿ ಕೂಲಿ ಮಾಡುತ್ತಿದ್ದಳು. ಆದರೆ ಆಕೆಯ ಗಂಡ ಸಿದ್ದಯ್ಯನಿಗೆ ಸಾಲ ಕೊಟ್ಟು ಆತನನ್ನು ಜೀತದಲ್ಲಿರಿಸಿಕೊಂಡಿರುವ ಲಿಂಗಾಯತ ಕುಮಾರಪ್ಪನಿಗೆ ಇದನ್ನು ಕಂಡು ರೇಗಿಹೋಯಿತು. ಆಕೆ ಇದ್ದಲ್ಲಿಗೇ ಬಂದು "ಇಲ್ಲ್ಯಾಕೆ ಕೆಲಸ ಮಾಡುತ್ತಿದ್ದೀಯಾ? 'ನನ್ ಜಮೀನಿಗೆ ಬಾರೇ. ನಿನ್ನ ಗಂಡ ಮಾಡಿರೋ ಸಾಲನ ತೀರಿಸೋರ್‍ಯಾರು?" ಎಂದೆಲ್ಲ ಹೇಳಿ ಅವಾಚ್ಯ ಶಬ್ದಗಳಿಂದ ಆಕೆಯನ್ನು ಅವಮಾನಿಸಿದ.

ಏನಾಗಿತ್ತೆಂದರೆ, ಸಿದ್ದಯ್ಯ 500 ರೂಪಾಯಿಗಳನ್ನು ಕುಮಾರಪ್ಪನಿಂದ ಸಾಲವಾಗಿ ಪಡೆದಿದ್ದ. ಅದರಲ್ಲಿ 200 ರೂ.ಗಳನ್ನು ಹಿಂತಿರುಗಿಸಿ, ಇನ್ನೂ 300 ರೂ.ಗಳ ಬಾಕಿ ಇತ್ತು. ಇದನ್ನು ತೀರಿಸಲೆಂದೇ ಸಿದ್ದಯ್ಯ ಮತ್ತು ಸಿದ್ದಮ್ಮ ಕುಮಾರಪ್ಪನ ಜಮೀನಿನಲ್ಲಿ ಹಲವಾರು ವರುಷಗಳಿಂದ ಕೂಲಿ ಮಾಡುತ್ತಾ ಬಂದಿದ್ದಾರೆ. ಆದರೆ ಅವತ್ತು ಮತ್ತೊಬ್ಬರು ಅರಿಶಿನ ನೆಡಲೆಂದು ಸಿದ್ದಮ್ಮನನ್ನು ಕರೆದಿದ್ದಾರೆ. ಆಕೆ ಅಲ್ಲಿಗೆ ಹೋಗಿದ್ದಾಗ ಅಲ್ಲಿಗೇ ಬಂದು ಕುಮಾರಪ್ಪ ಹೀಗೆಲ್ಲ ಚೀರಾಡಿದ್ದಾನೆ.

ಇದರಿಂದ ಬೇಸತ್ತ ಸಿದ್ದಮ್ಮ ಅಂದು ಗಂಡನೊಂದಿಗೆ ತಕರಾರೆತ್ತಿದ್ದಾಳೆ. "ಅವನಿಂದ ಯಾಕೆ ಸಾಲ ತಗೊಂಡ್ರಿ. ನಾನು ಇವತ್ತೇ ತವರುಮನೆಗೆ ಹೋಗ್ತೀನಿ, ಇಲ್ಲಾಂದ್ರೆ ಬಾವಿಗೆ ಬೀಳ್ತೀನಿ" ಎಂದಿದ್ದಾಳೆ. ಇದರ ಬಗ್ಗೆ ಕುಮಾರಪ್ಪನನ್ನು ಕೇಳಲು ಸಿದ್ದಪ್ಪ ಹೋದಾಗ "ನಾನ್ಯಾಕೆ



ಅವಳನ್ನ ಕೇಳಬಾರದು, ನಾನು ಕೇಳ್ತೀನಿ. ಕಳಿಸು ಅವಳನ್ನ ನನ್ನತ್ರ" ಎಂದು ಆತ ಮತ್ತೆ ಧಮಕಿ ಹಾಕಿದ್ದಾನೆ. ಮಾತಿಗೆ ಮಾತು ಬೆಳೆದು ಸಿದ್ದಯ್ಯನನ್ನು ಕುಮಾರಪ್ಪನ ಕಡೆಯವರು ಹೊಡೆದಿದ್ದಾರೆ.

ಆದರೆ ಮೇಲುಜಾತಿಯವರ ಆಕ್ರೋಶ ಇಲ್ಲಿಗೆ ತಣ್ಣಗಾಗಲಿಲ್ಲ, ಅಂದೇ ದಲಿತರ ಕೇರಿಗೆ ನುಗ್ಗಿದ ಲಿಂಗಾಯತರ ಗುಂಪು ಸಿದ್ದಯ್ಯನನ್ನು ಮತ್ತೆ ಥಳಿಸಲಾರಂಭಿಸಿದೆ. ಆತನ ರಕ್ಷಣೆಗೆ ಬಂದ ಆತನ ತಮ್ಮನನ್ನೂ ಬೇಕಾಬಿಟ್ಟಿ ಹೊಡೆದಿದ್ದಾರೆ. ಅಷ್ಟೇ ಅಲ್ಲದೆ ಅಲ್ಲಿಂದ ಹೊರಡುವಾಗ ದಲಿತರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕುವುದಾಗಿ ಬೆದರಿಸಿದ್ದಾರಲ್ಲದೆ ಮಾರನೆ ದಿನದಿಂದ ಅದನ್ನು ಜಾರಿಗೂ ತಂದಿದ್ದಾರೆ.

ಅದು ಇವತ್ತಿಗೂ ಮುಂದುವರೆದಿದೆ. ಹೀಗೆ ಬಹಿಷ್ಕಾರಕ್ಕೆ ಒಳಗಾದ ದಲಿತರು ಕೂಲಿ ಕೆಲಸವಿಲ್ಲದೆ ಕಂಗಾಲಾದರು. ಆಗ ಪಕ್ಕದ ಊರುಗಳಲ್ಲಿ ಕೆಲಸ ಹುಡುಕಿಕೊಂಡು ಹೋದರು. ಆದರೆ ಸುತ್ತೂರುಗಳಲ್ಲೆಲ್ಲ ಕಂದೇಗಾಲದ ದಲಿತರಿಗೆ ಯಾರೂ ಕೆಲಸ ಕೊಡಬಾರದೆಂದು, ಹಾಗೆ ಕೆಲಸ ಕೊಟ್ಟವರು ಐನೂರು ರೂಪಾಯಿಗಳ ದಂಡ ಕಟ್ಟಬೇಕಾಗುತ್ತದೆಂದು ಹೇಳಿದರು. ಇದಕ್ಕೆ ಹೆದರಿದ ಜನ ಇವರಿಗೆ ಕೂಲಿ ಕೆಲಸವನ್ನು ನಿರಾಕರಿಸಿದರು.

ಕೆಲವರು ಗಾರೆ ಕೆಲಸಕ್ಕೆಂದು ಗುಂಡ್ಲುಪೇಟೆಗೆ ಹೋಗಲಾರಂಭಿಸಿದರು. ಆದರೆ ಅಷ್ಟೊತ್ತಿಗಾಗಲೇ ಅವರು ಯಾರೂ ಬಸ್ ಏರಬಾರದೆಂಬ ನಿಯಮವನ್ನು ಜಾರಿಗೆ ತಂದಿದ್ದರಿಂದ ದಲಿತರೆಲ್ಲ ಆಟೋರಿಕ್ಷಾವನ್ನು ಬಾಡಿಗೆಗೆ ಪಡೆದು ತಲಾ ಐದರಿಂದ ಹತ್ತು ರೂ.ಗಳನ್ನು ಕೊಡುವಂತೆ ಒಪ್ಪಂದ ಮಾಡಿಕೊಂಡಿದ್ದರು. ಆದರೆ ಆಟೋ ಮಾಲೀಕ ಕೂಡ ಮೇಲುಜಾತಿಯವನೇ ಆಗಿದ್ದು ವಾಹನವನ್ನು ಕೊಡಬಾರದೆಂದು ಆತನ ಮೇಲೆ ಒತ್ತಡ ತಂದಿದ್ದರ ಪರಿಣಾಮವಾಗಿ ಅದೂ ನಿಂತುಹೋಯಿತು. ಆಗ ದಲಿತರು ಟ್ರ್ಯಾಕ್ಟರ್ ವ್ಯವಸ್ಥೆ ಮಾಡಿಕೊಂಡರು. ಒಂದು ದಿನ ಇದರಲ್ಲಿ ಗುಂಡ್ಲುಪೇಟೆಗೆ ಹೋಗುತ್ತಿದ್ದಾಗ ದಾರಿ ಮಧ್ಯದಲ್ಲಿ ಅದನ್ನು ತಡೆದು ಟ್ರ್ಯಾಕ್ಟರ್ ಮಾಲೀಕನನ್ನು ಬೈದು ಆತನನ್ನೂ ಅಲ್ಲಿಂದ ಒದ್ದೋಡಿಸಿದರು.

ಕೊನೆಗೆ ದಲಿತರ ಕೇರಿಗೆ ವಿದ್ಯುತ್ ಸೌಲಭ್ಯವನ್ನೂ ಕತ್ತರಿಸಿಹಾಕಿದರು. ಇದನ್ನೂ ಅವರೆಲ್ಲ ಸಹಿಸಿಕೊಂಡಿದ್ದರು. ಕೊನೆಗೆ ಕುಡಿಯುವ ನೀರಿಗೆಂದು ದಲಿತರೆಲ್ಲ ಅವಲಂಬಿಸಿದ್ದ ಬೋರ್‌ವೆಲ್ ಒಳಗೆ ಕಲ್ಲು ಮತ್ತು ಕಬ್ಬಿಣವನ್ನು ತುರುಕಿ ಅದರಿಂದ ನೀರು ಬಾರದಂತೆ ಮಾಡಿದರು. ಮೊದಲು ಬೋರ್‌ವೆಲ್‌ನ ಮೋಟರ್ ಸರಿ ಇಲ್ಲವೇನೋ ಎಂದು ಜನ ಭಾವಿಸಿದ್ದರು. ಆದರೆ ಅದನ್ನು ರಿಪೇರಿ ಮಾಡಿಸಲು ಕೆಲಸಗಾರನನ್ನು ಕರೆಸಿದಾಗಲೇ ಅದರೊಳಗೆ ಕಲ್ಲು, ಕಬ್ಬಿಣವನ್ನು ತುಂಬಿರುವುದು ಗೊತ್ತಾಯಿತು.

ನೀರಿಗೆ ಪರ್ಯಾಯವಾದ ಬೇರೆ ವ್ಯವಸ್ಥೆ ಇರಲಿಲ್ಲ. ದೇವಸ್ಥಾನದ ಬಾವಿಯಿಂದ ನೀರು ಪಡೆಯುವಂತಿಲ್ಲ, ಸಾರ್ವಜನಿಕ ನಲ್ಲಿಗಳನ್ನು ಮುಟ್ಟುವಂತಿಲ್ಲ... ಹೀಗೆ ಬದುಕಲು ಬೇಕಾದ ಎಲ್ಲ ಸೌಲಭ್ಯಗಳನ್ನು ಕಳೆದುಕೊಂಡು ಇನ್ನು ಅಲ್ಲಿರುವುದೇ ಅಸಾಧ್ಯ ಅನಿಸಿದಾಗ ಎಲ್ಲ ವಿಷಯವನ್ನು ಪೊಲೀಸರಿಗೆ ತಿಳಿಸುವುದೆಂದು ದಲಿತರು ನಿರ್ಧರಿಸಿದರು.

ಮಾರನೆ ದಿನ ದಲಿತರ ಗುಂಪೊಂದು ಗುಂಡ್ಲುಪೇಟೆಯಲ್ಲಿನ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿತು.

ಕುಮಾರಸ್ವಾಮಿಯೇ ಇವನಿಗೆ 50 ಲಕ್ಷ ಕೊಡಬೇಕಂತೆ!


ಶ್ರೀಶ್ರೀಶ್ರೀ ಜಗನ್ನಾಥ್ ಸ್ವಾಮೀಜಿ ಉರ್ಫ್ ಚೀಟರ್ ಜಗನ್ನಾಥನ ವಂಚನೆ, ತಾನು ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಎಂದು ಯಾರ್ಯಾರನ್ನೋ ನಂಬಿಸಿ ಅವರ ಆಸ್ತಿ ಕಬಳಿಸಿದ್ದ ವಿರುದ್ಧ 1994 ರಲ್ಲೇ ಲಂಕೇಶ್ ಪತ್ರಿಕೆಯಲ್ಲಿ ವರದಿಯಾಗಿತ್ತು. ಇದಾಗಿದ್ದೇ ಬಸವನಗುಡಿಯಿಂದ ಪರಾರಿಯಾದ ಜಗನ್ನಾಥ್ ಆನಂತರ ಏನಾದ? ಎಲ್ಲಿಗೆ ಹೋದ? ಎಂಬುದೇ ಅನೇಕರಿಗೆ ಗೊತ್ತಿರಲಿಲ್ಲ. ಆ ಹೊತ್ತಿಗಾಗಲೇ ಜ್ಯುಡಿಷಿಯಲ್ ಲೇಔಟಿಗೆ ತನ್ನ ಮನೆ ಬದಲಾಯಿಸಿ ಯಲಹಂಕ ಸುತ್ತಮುತ್ತ ಬಡದಲಿತರ ಭೂಮಿಗೆ ವಕ್ಕರಿಸಿದ ಜಗನ್ನಾಥ್ 2001 ರ ಹೊತ್ತಿಗೆ ಇದ್ದಕ್ಕಿದ್ದಂತೆ ಖಾವಿ ತೊಟ್ಟು ಕಲ್ಕಿ ಭಕ್ತನ ಗೆಟಪ್ಪು ಹಾಕಿದ. ಈತನನ್ನು ನಂಬಿದ ತಪ್ಪಿಗೆ ವೆಂಕಟಾಲದ ಒಂದು ಡಜನ್ ದಲಿತರು ತಮ್ಮ ಭೂಮಿ ಕಳಕೊಂಡು ಇವತ್ತಿಗೂ ಕೋರ್ಟಿಗೆ ಅಲೆಯುತ್ತಿದ್ದಾರೆ. ಜ್ಯುಡಿಷಿಯಲ್ ಲೇಔಟ್ ಮಾತ್ರವಲ್ಲ ಯಲಹಂಕ ಸುತ್ತಮುತ್ತ ಯಾರಿಗೂ ಈತನ ತಲೆ ಕಂಡರಾಗುವುದಿಲ್ಲ.

ಯಾರೆಲ್ಲ ಈತನಿಂದ ವಂಚಿತರಾಗಿ ದುಡ್ಡು ವಸೂಲಿಗೆ ಬರುತ್ತಾರೋ, ಅವರೇ ತನ್ನ ದೈವತ್ವದ ವಿರುದ್ಧ ಕೀಟಲೆ ಮಾಡುತ್ತಾರೆಂದು ಜಗನ್ನಾಥ್ ಬಂಡಲ್ ಬಿಡುತ್ತಾನೆ. ತನ್ನಿಂದ ವಂಚಿತರಾದವರ ಪರ ವಹಿಸಿ ಯಾರೇ ಬಂದರೂ ಮುಖ್ಯಮಂತ್ರಿ ಕುಮಾರಸ್ವಾಮಿಯೇ ನನಗೆ 50 ಲಕ್ಷ ಕೊಡಬೇಕು ವಸೂಲಿ ಮಾಡಿಕೊಡ್ತೀರಾ? ಎಂದು ಮರುಪ್ರಶ್ನೆ ಹಾಕುತ್ತಾನೆ. ಈಗ ಇವನೇ ಪತ್ರಿಕಾಗೋಷ್ಠಿ ಕರೆದು ಅದೇ ಕುಮಾರಸ್ವಾಮಿಯನ್ನು ಇನ್ನು ನಾಲ್ಕೇ ದಿನದಲ್ಲಿ ಮತ್ತೆ ಸಿಎಂ ಮಾಡ್ತೀವಿ ಎನ್ನುತ್ತಾನೆಂದರೆ ಈತ ದೇವರಾ ಅಥವಾ ದಗಲುಬಾಜಿಯಾ?



ಈ ದೂರಿನ ಪರಿಶೀಲನೆಗೆಂದು ಬಂದ ಪೊಲೀಸ್ ಅಧಿಕಾರಿ ಊರಿನವರನ್ನೆಲ್ಲ ಸೇರಿಸಿ ಮಾತನಾಡಬೇಕಿತ್ತು. ಆದರೆ ಊರಿಗೆ ಬಂದವನೇ ಲಿಂಗಾಯತರ ಕೇರಿಗೆ ಭೇಟಿ ನೀಡಿದ ಆತ ಇವರನ್ನು ವಿಚಾರಿಸದೇ ವಾಪಸ್ಸು ಹೋದ. ಇದಾದನಂತರ ಆಗಸ್ಟ್ ತಿಂಗಳಲ್ಲಿ ದಲಿತರು ನೇರವಾಗಿ ಎಸ್ಪಿಗೆ ದೂರು ನೀಡಿದರು. ಆದರೆ ಲಿಂಗಾಯತರೊಂದಿಗೆ ಫೋನಿನಲ್ಲೇ ಮಾತನಾಡಿದ ಆತ ದಲಿತರೇ ಲಿಂಗಾಯತರ ಮೇಲೆ ದಾಳಿ ಮಾಡಿದ್ದಾರೆಂದು ಆರೋಪಿಸಿ ಅವರನ್ನೇ ದೂಷಿಸಿದ.

ಇದೆಲ್ಲ ನಡೆದು ಹಲವು ತಿಂಗಳುಗಳಾದ ನಂತರ ಕೆಲವು ದಲಿತ ಸಂಘಟನೆಗಳು ಪೊಲೀಸರ ಮತ್ತು ರಾಜಕಾರಣಿಗಳ ಮೇಲೆ ಒತ್ತಡ ತಂದು ಕಂದೇಗಾಲದತ್ತ ಕಾಲು ಬೆಳೆಸುವಂತೆ ಮಾಡಿದರು. ಆದರೆ ಹಾಗೆ ಬಂದ ರಾಜಕಾರಣಿಗಳು ಮತ್ತು ಪೊಲೀಸ್ ಅಧಿಕಾರಿಗಳು ಕಾಟಾಚಾರದ ಒಂದು ಶಾಂತಿ ಸಭೆಯನ್ನು ನಡೆಸಿದರು. ಆದರೂ ಅಲ್ಲಿ ಸೇರಿದ್ದ ದಲಿತರು ತಮ್ಮ ಸಮುದಾಯದ ವಿರುದ್ಧ ಸಾಮಾಜಿಕ ಬಹಿಷ್ಕಾರ ಹಾಕಿದವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದೂ,



ಅವರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕೆಂದೂ ಒತ್ತಾಯಿಸಿದರು.

ಆದರೆ ಅಲ್ಲಿದ್ದವರು ಸಮಸ್ಯೆಯನ್ನು ನ್ಯಾಯಯುತವಾಗಿ ಬಗೆಹರಿಸುವುದಕ್ಕಾಗಿ ಬಂದಿರಲಿಲ್ಲ, ಆದ್ದರಿಂದ ಅಂದೂ ದಲಿತರದ್ದು ಅರಣ್ಯ ರೋದನವಾಯಿತು. ಕೆಲಸ, ನೀರು, ವಿದ್ಯುತ್ ಯಾವುದೂ ಇಲ್ಲದೆ ತಮ್ಮ ಬದುಕು ನಾಶವಾಗುತ್ತಿರುವುದರಿಂದ ಸರ್ಕಾರವೇ ತಮಗೊಂದು ಪರ್ಯಾಯ ವ್ಯವಸ್ಥೆ ಮಾಡಬೇಕೆಂದು ಈಗ ಕಂದೇಗಾಲದ ದಲಿತರು ಕೇಳುತ್ತಿದ್ದಾರೆ. ಆದರೆ ಅವರ ಅಳಲನ್ನು ಕೇಳಲು ಇವತ್ತು ಸರಕಾರವೇ ಇಲ್ಲದಂತಾಗಿದೆ.

ಸಮಾನತೆ, ಸ್ವಾಭಿಮಾನದ ಬದುಕು, ಅಸ್ಪೃಶ್ಯತಾ ನಿವಾರಣೆ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಎಂದೆಲ್ಲ ಬಡಬಡಿಸುವ ಭಾರತ್ ಮಾತಾ ಕಿ ಜೈ!

■ ಅಭಿಷೇಕ್

ನನ್ನಿಂದೆ ಐದೂವರೆ ಕೋಟಿ ಜನವುರೆ ಕಂಡ್ರೀ

ಥೂತ್ತೇರಿ

■ ಯಾಹೂ

ಒಂದಿಷ್ಟು ಫ್ಯೂಡಲ್ ಗಡವರು, ಮತ್ತೊಂದಿಷ್ಟು ಮತಾಂಧರು ಸೇರಿಕೊಂಡು ಮಾಡಿದ್ದ ಸರ್ಕಾರ ನಿಜವಾಗಿಯೂ ಹಲವು ಸ್ವಾಮಿಗಳ ಪಾಲಿಗೆ ಸುವರ್ಣಯುಗವಾಗಿ ಕಂಡು, ಈಗ ಉರುಳಿಬಿದ್ದ ಸರ್ಕಾರ ನೋಡುತ್ತಾ ಶಾನೆ ಬೇಸರವಾಗಿದ್ದಾರಂತಲ್ಲಾ. ಇನ್ನು ತಡ ಮಾಡುವದು ಬೇಡವೆಂದು ಒಕ್ಕಲಿಗರ ಸ್ವಾಮಿ ಬಾಲಗಂಗಾಧ ಮತ್ತು ಪುರೋಹಿತ ಶಾಹಿಗಳ ಸ್ವಾಮಿ ಪೇಜಾವರ ಇಬ್ಬರೂ ಸೇರಿ ಸರಿಯಾದ ದಬ್ಬಳ ಮತ್ತು ದಾರದೊಂದಿಗೆ ರೆಡಿಯಾಗಿದ್ದಾರಂತಲ್ಲಾ. ಆದರೆ ಪರಿಸ್ಥಿತಿ ಡಬ್ಬಳ ದಾರಕ್ಕೆ ಸಿಗುವಂತಹ ಸ್ಥಿತಿಯಲ್ಲಿಲ್ಲದೆ ಪದ್ಮನಾಭನಗರದ ಧೃತರಾಷ್ಟ್ರ ತೀರಾ ಮೊಂಡು ಬಿದ್ದು ಕುಳಿತಿದ್ದಾನಂತಲ್ಲಾ. ಆತನ ಪಕ್ಕವೇ ಇದ್ದು ಸಂಜಯನ ಪಾತ್ರವನ್ನು ಸುಖವಾಗಿ ನಿರ್ವಹಿಸುತ್ತಿರುವ ದತ್ತ "ಸಾರ್, ಬಾಲಗಂಗಾಧರ ಸ್ವಾಮಿ ಫೋನ್ ಮಾಡಿದ್ದಾರೆ" ಎನ್ನಲಾಗಿ, ಧೃತರಾಷ್ಟ್ರ "ಹಲ್ಲು ನೋವು, ಬಾಯಿಬಿಡಲಾಗುತ್ತಿಲ್ಲ ಎಂದು ಹೇಳು" ಎಂದರಂತಲ್ಲಾ.

ಕೆಲ ಹೊತ್ತಿನ ನಂತರ ಮತ್ತೊಂದು ಫೋನು. ಮತ್ತೆ ದತ್ತ "ಸಾರ್, ಪೇಜಾವರ ಸ್ವಾಮಿ ಫೋನ್ ಮಾಡಿದ್ದಾರೆ" ಎನ್ನಲಾಗಿ "ಇದೀಗ ತಾನೆ ಮಾತ್ರೆ ತೆಗೆದುಕೊಂಡು ಮಲಗಿದ್ದಾರೆ ಎಂದು ಬಿಡು" ಎಂದ ಧೃತರಾಷ್ಟ್ರರು ಕಾಣದ ಕಣ್ಣನ್ನೆ ಮುಚ್ಚಿಕೊಂಡರಂತಲ್ಲಾ, ಥೂತ್ತೇರಿ!

* * * * * * *

"ದೇವೇಗೌಡ ಮತ್ತು ಮಗನ ಸುಳ್ಳು ಮುನಿಸನ್ನೇ ನಿಜವೆಂದು ತಿಳಿದು ಅಪ್ಪ ಮಕ್ಕಳನ್ನು ಒಂದು ಮಾಡಿದ ಹೆಮ್ಮೆಯಿಂದ ಬೀಗುತ್ತಿದ್ದ ಶಿವರಾತ್ರಿ ಸ್ವಾಮಿಗಳು ಕುಮಾರಸ್ವಾಮಿ ಎಡೂರಪ್ಪನಿಗೆ ಮಾಡಿದ ಮೋಸವನ್ನು ಬಾಯಿಬಿಡದೆ, ಸುಮ್ಮನಿರಲೂ ಆಗದೆ, "ಹೋಗಲಿ, ಈ ಎಂ.ಪಿ. ಪ್ರಕಾಶ್‌ನಿಗೆ ಏನಾಗಿದೆ? ಈಗಲಾದರು ಎದ್ದು ದೇವೇಗೌಡರ ಒಡ್ಡೋಲಗದಿಂದ ಈಚೆ ಬಂದು, ಶೆಡ್ಡು ಹೊಡೆದು, ಶರಣ ಶಾಸಕರ ಸಂಘಟನೆ ಮಾಡಿದರೆ ನಾವೂ ಕೈಲಾದ ಸಹಾಯ ಮಾಡುವುದಿಲ್ಲವೆ, ನಿಜವಾಗಲೂ ಶರಣರನ್ನು ನಾಶ ಮಾಡಿದವನು ದೇವೇಗೌಡನಲ್ಲ, ನಮ್ಮ ಶರಣ ಮುಂದಾಳುಗಳೆ. ನಿಜಕ್ಕೂ ಈ ಸಮಯದಲ್ಲಿ ಬೊಮ್ಮಾಯಿ ಸತ್ತದ್ದು ತುಂಬ ಸಾಂಕೇತಿಕವಾದ ಘಟನೆಯಾಗಿದೆ" ಎಂದು ಮರುಗುತ್ತಿರುವ ಸುದ್ದಿ ಇನ್ನೂ ಹಬ್ಬಿಲ್ಲವಲ್ಲಾ. ಕೋಜಾ ಸರ್ಕಾರದೊಳಗೆ ಕೈ ತೂರಿಸಿಕೊಂಡು ಆಟವಾಡುತ್ತಿದ್ದ ಚಿಲ್ಲರೆ ಸ್ವಾಮಿಗಳು, ಕಡೆಗೆ ಮೂತಿಯನ್ನು ತೂರಿಸಿ ಮಾನ ಕಳೆದುಕೊಂಡು ಕಾದಿ ಕಾವಿನಲ್ಲಿ ಕುಳಿತಿರಬೇಕಾದರೆ, ಚಿತ್ರದುರ್ಗದ ಶರಣರು ಯಾರ ತಂಟೆಗೂ ಹೋಗದೆ ದಸರಾ ಆಚರಿಸುತ್ತ, ಸ್ವಾಮಿ ಅಗ್ನಿವೇಶ ಎಂಬ ಬಿಜೆಪಿ ಪಾಲಿನ ಅಗ್ನಿಗೆ ಬಸವಶ್ರೀ ಪ್ರಶಸ್ತಿ ಕೊಟ್ಟುಕೊಂಡು, ಹೊನ್ನಾಳಿ ಕಡೆ ಸಿಕ್ಕಿದ ಮಗುವೊಂದಕ್ಕೆ ಹಾಲು ಕುಡಿಸುತ್ತ ಬಾಣಂತನ ಮಾಡಿಕೊಳ್ಳುತ್ತಿದ್ದಾರಂತಲ್ಲಾ, ಥೂತ್ತೇರಿ!!



* * * * * * *

ಅರ್ಧ ರಾತ್ರಿ ಕೊಡೆಯನ್ನು ಇಳಿಸಿ ಅಪ್ಪನ ಪಕ್ಕದಲ್ಲಿ ಆರಾಮವಾಗಿ ಕುಳಿತಿರುವ ಕುಮಾರಣ್ಣನನ್ನು ಮಾತನಾಡಿಸಬೇಕೆನಿಸಿತಲ್ಲಾ ಫೋನ್ ಮಾಡಿದರೆ ಕೂಡಲೇ ಸಿಕ್ಕರು.

"ಹಲೋ ಸಾರ್, ನಾನು ಪತ್ರಕರ್ತ, ಯಾಹೂ ಅಂತ ಸಾರ್."

"ಗೊತ್ತು, ಎಲ್ಲಿದಿರಿ? ಬನ್ನಿ ಮನೆ ಕಡೆ ಮಾತಾಡನ."

"ಟೈಮಿಲ್ಲ ಸಾರ್, ಪತ್ರಿಕೆ ಪ್ರಿಂಟಿಗೋಗಬೇಕು, ನಂತರ ಬತ್ತಿನಿ."

"ಏನ್ ಸಮಾಚಾರ ಹೇಳಿ?"

"ಅಲ್ಲ ಸಾರ್ ನೀವು ರಾಜೀನಾಮೆ ಕೊಟ್ಟು ಆರಾಮಾಗಿದ್ದಿರಿ. ಆ ಎಡೂರಪ್ಪ ತರಿಡಿಗೇಟು ಬಿದ್ದೊನಂಗೆ ಕೂಗಾಡಿಕಂಡೋಯ್ತಾ ಅವುನೆ. ಈ ನಡುವೆ ಹೊಂದಾಣಿಕೆ ಮಾತು ನ್ಡಿತಾ ಅವೆ, ಯಂಗೆ ಸಾರ್?"

"ಬಿಜೆಪಿ ಮತ್ತೆ ನಮ್ಮ ನಡುವೆ ಏನು ಹೊಂದಾಣಿಕೆ ಮಾತು ನೆಡಿತಾಯಿವೆ ಆ ಒಂದು ಪರಿಣಾಮವನ್ನು ಎಲ್ಲರೂ ಕುಳತಕೊಂಡು ಚರ್ಚೆ ಮಾಡತಕ್ಕಂತ ವಿಷಯ ಏನಿದೆ, ಏನು ನಮ್ಮ ಪಾರ್ಟಿ ಇಪ್ಪತ್ತು ತಿಂಗಳ ಹಿಂದೆ ಮಾಡಿಕೊಂಡ ಒಪ್ಪಂದ ಏನಿದೆ. ಆ ಒಂದು ಒಪ್ಪಂದದ ಪ್ರಕಾರವೇ ಅವ್ರುರು ನಡಕೊಂಡಿದ್ದೆ, ಇವತ್ತು ಈ ಒಂದು ಪರಿಸ್ಥಿತಿ ಬರ್ತಿರಲಿಲ್ಲ ಅಂತ ಜನಗಳೆ ತೀರ್ಮಾನಿಸ್ತರೆ."

"ಅಂತೂ ಜನಗಳ ಕಡೆ ಹೊಂಟಿದ್ದಿರಿ?"

"ಹೌದು ನಾನಾಗ್ಲೆ ಮಾಧ್ಯಮದವರಿಗೆ ಬಿಡುಗಡೆ ಮಾಡಿರತಕ್ಕಂತಹ ಏಳಿಕೆ ಏನಿದೆ ಇವತ್ತು ಕಾಂಗ್ರೆಸ್ಸಿನವ್ರುರಿರಬವ್ರುದು ಅಥವಾ ಬಿಜೆಪಿಯವರಿರಬಹುದು, ಇವ್ರುರಿಬ್ರು ಸಹವಾಸದಿಂದ ಬಿಡುಗಡೆ ಪಡೆದು ಜನರ ಸಹವಾಸ ಮಾಡಬೇಕು ಅಂತ ನಾವೇನು ತೀರ್ಮಾನ ತಗೊಂಡಿದ್ದಿವಿ. ಅದರ ಪರಿಣಾಮವಾಗಿ ಸದ್ಯದಲ್ಲೇ ನೀವೇ ನೋಡ್ತಿರಿ."

"ಏನು ಪರಿಣಾಮ ಸಾರ್?"

"ನೋಡಿ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದ್ರು ಕಾಂಗ್ರೆಸ್ಸಿನ ಮುಖ್ಯಮಂತ್ರಿಗಳು ಯಾರ ಮನೆ ಬಾಗಿಲಿಗೂ ಹೋಗಿರಲಿಲ್ಲ, ನಾನು ಹೋಗಿದ್ದೆ. ಇವತ್ತು ಇಡೀ ಕರ್ನಾಟಕದ ಐದೂವರೆ ಕೋಟಿ ಜನ ಕುಮಾರಣ್ಣ ನಮ್ಮ ಮನೆಯವರು ಅಂತ ಏನು ತಿಳಕೊಂಡಿದಾರೆ ಇವತ್ತು ಪ್ರತಿಯೊಬ್ಬರೂ ನಮ್ಮ ಮನೆಗೆ ಬಂದು ಮಲಗಿ ಅಂತ ಏನು ಒಂದು ಆಶ್ವಾಸನೆಯನ್ನು ಕೊಡ್ತಾಯಿದಾರೆ. ಆ ಒಂದು ಬೇಡಿಕೆಯನ್ನು ನಾನು ಈ ಜನ್ಮದಲ್ಲಿ ತೀರಸಕ್ಕಾಗದೆ ಇರೊ ಅಂತ ಪರಿಸ್ಥಿತಿ ಇವತ್ತು ನಿರ್ಮಾಣ ಆಗಿದೆ ಅದಕ್ಕೆ ಕಾರಣ ಯಾರು ಅಂತ ಐದೂವರೆ ಕೋಟಿ ಜನಗಳಿಗೆ ತಿಳಸತಕ್ಕಂತ ಸಂದರ್ಭ ಹತ್ರ ಬರ್ತಾ ಇದೆ."

"ನಿಮ್ಮ ವಚನಭ್ರಷ್ಟತೆಗೆ ಧೈರ್ಯ ಕೊಟ್ಟವರ್ಯಾರು ಸಾರ್?"

"ನಮ್ಮ ತಂದೆಯವರೆ. ನಾವು ಇನ್ಯಾರಿಂದಲೂ ಸಲಹೆ ಸೂಚನೆ ತಗೊಳಲ್ಲ, ಪ್ರತಿಯೊಂದು ವಿಷಯದಲ್ಲೂ ಅವರ ಮಾರ್ಗದರ್ಶನ ಮುಖ್ಯ. ಇವತ್ತು ನಾನು ಏನು ಈ ಒಂದು ರಾಜ್ಯದ ಯುವ ಮುಖ್ಯಮಂತ್ರಿಯಾಗಿ ಮಾಡಿದ ಸಾಧನೆ ಕೀರ್ತಿ ನಮ್ಮ ತಂದೆಯವರಿಗೇ ಸಲ್ಲಬೇಕು."

"ನಿಜಕ್ಕೂ ತಂದೆಗೆ ತಕ್ಕ ಮಗ ಸಾರ್ ನೀವು. ಗೌಡರು ಹೇಳಿದ ಕೂಡ್ಲೆ ಆಣೆ, ಪ್ರಮಾಣ, ಸ್ವಾಮಿಗಳ ಎದುರು ಕೊಟ್ಟ ವಚನ ಯಲ್ಲಾನು ತಗದು ಯಸ್ತು ಬುಟ್ರಲ್ಲಾ, ರಿಯಲಿ ಗ್ರೇಟ್."

"ಅವ್ರುಕ್ಕೆಲ್ಲಾ ಶಕ್ತಿಬೇಕು, ಧೈರ್ಯಬೇಕು."

"ನಿಜ ಸಾರ್, ಬಂಡತನಕ್ಕೂ ಧೈರ್ಯ ಬೇಕು. ಇಲ್ದೆಯಿದ್ರೆ ಆ ಎಂ.ಪಿ. ಪ್ರಕಾಶನ ಮಗನ ಥರ ಇರೊ ನೀವು ಅವ್ರುರನ್ನ ಕೇವಲ ಉಪಮುಖ್ಯಮಂತ್ರಿ ಮಾಡಿ ಮನೆಗೆ ಕಳಸಕ್ಕಾಗತ್ತಿತ್ತೆ?"

"ಪ್ರಕಾಶು ಮುಖ್ಯಮಂತ್ರಿಯಾಗಬೇಕು ಅಂತ ಹೇಳಬೇಕಾಗಿತ್ತು ಕಂಡ್ರೀ, ನಾವೇ ಮಾಡಕ್ಕಾಗಲ್ಲ, ಆಮೇಲೆ ಅವ್ರುರೊಬ್ಬರೆ ಬಂದು ಕೇಳಿದ್ರೆ ಮಾಡಕ್ಕಾಗಲ್ಲ, ಅವ್ರುರ ಜೊತೆ ಶಾಸಕರಿರಬೇಕು, ಕಾಲ ಬದ್ಲಾಗಿದೆ, ಯಾರೊ ನಿಮ್ಮನ್ನ ಮುಖ್ಯಮಂತ್ರಿ ಮಾಡಲ್ಲ ನಾವೇ ಆಗಬೇಕು."

"ಹಿಂಗಾದ್ರೆ ಮುಂದೆ ಒಳ್ಳೆ ನಾಯಕರ ಕತೆಯೇನು ಸಾರ್?"

"ಕತೆಯೇನು, ಸುಮ್ಮನೆ ಮನೆಗೋಗಬೇಕು ಅಷ್ಟೆ."

"ನಿಜ ಸಾರ್, ಈಗಾಗ್ಲೆ ಒಬ್ಬೊಬ್ಬರೆ ಗಂಟುಮೂಟೆ ಕಟ್ಟತಾ ಅವ್ರುರೆ."

"ಕಟ್ಟಲಿಲ್ಲಾ ಅಂದ್ರೆ, ಕಟ್ಟುಸ್ತಿವಿ."

"ನಿಮ್ಮ ಜೊತೆ ಯಾರೊ ಕೆಂಪು ಶರಟಕ್ಕಂಡು ಕಮ್ಯುನಿಸ್ಟರು ಓಡಾಡ್ತವಲ್ಲ ಯಾರು ಸಾರ್ ಅವ್ರುರು?"

"(ನಗು) ಅವರು ನಮ್ಮ ಚೆಲುವರಾಯಸ್ವಾಮಿ ಕಂಡ್ರಿ. ಅವ್ರುನಿಗದೇನು ಹಳೆ ಕೆಎಸ್ಆರ್‌ಟಿಸಿ ಬಸ್ ಕಲರ್ ಇಷ್ಟ ಆಗಿದೆಯೋ ಗೊತ್ತಿಲ್ಲ, ನೋಡಕ್ಕಾಗದೆಯಿರೊ ಅಂಗಿ ಇಕ್ಕಳತನೆ. ಮುಖ್ಯಮಂತ್ರಿಯಾಗಿದ್ದು ನಾನೆ ಅಂತ ಡ್ರೆಸ್ ಹಾಕಲಿಲ್ಲ, ಇವ್ರುನಾಕ್ತನೆ."

"ಅವ್ರುನ ಮೇಲಾಗ್ಲೆ ಗೌಡ್ರು ಕಣ್ಣು ಬಿದ್ದವಂತೆ?"

"ನನಿಗೊತ್ತಿಲ್ಲ."

"ಥೂತ್ತೇರಿ!!! ■


ಯಡ್ಡಿ ಪಿಎಂ ಆಗ್ತಾನ ಅಂದ ಕಚ್ಚೆಹರುಕ ಸ್ವಾಮಿ

ಕಲಬುರ್ಗಿಯಿಂದ ಸರಾಸರಿ ಮೂವತ್ತು ಕಿ.ಮೀ ದೂರದಲ್ಲಿರುವ ಕವಲಗಿ ಗ್ರಾಮದ ಸಿದ್ದೇಶ್ವರ ಗುಡಿಗೆ ತಗುಲಿಕೊಂಡಿರುವ ನಾಗಲಿಂಗ ಎಂಬ ನಟೋರಿಯಸ್ ಸ್ವಾಮಿಯ ದುರ್-ದರ್ಶನವನ್ನು ನಮ್ಮ ಪತ್ರಿಕೆಯ ಓದುಗರಿಗೆ ಮಾಡಿಸಲೇಬೇಕೆಂದು ಬಹಳಷ್ಟು ಜನ ಪತ್ರ ಬರೆದು ಒತ್ತಾಯಿಸುತ್ತಲೇ ಇದ್ದರು. ಆ ಪತ್ರಗಳಲ್ಲಿನ ಮಾಹಿತಿ ನಮ್ಮ ಕುತೂಹಲನ್ನು ಕೆರಳಿಸಿತ್ತು.

ಏಕೆಂದರೆ ಇತರೆ ಸ್ವಾಮಿಗಳು ತಮ್ಮ ಭಕ್ತಾದಿಗಳಿಗೆ ಹಿತವಚನ ಮತ್ತು ಆಶೀರ್ವಾದ ನೀಡಿದರೆ ಈ ಸ್ವಾಮಿ ತನ್ನ ಭಕ್ತರಿಗೆ ಬೈಗುಳ ಮತ್ತು ಹೊಡೆತಗಳನ್ನು ನೀಡುತ್ತಾನೆ. ಆತ ಹೆಚ್ಚು ಹಲ್ಕಾ ಪದಗಳಿಂದ ತಮ್ಮನ್ನು ಹೆಚ್ಚು ಬೈದಷ್ಟು ತಮಗೆ ಒಳ್ಳೆಯದಾಗುತ್ತೆ ಎಂದು ಜನ ನಂಬಿದ್ದಾರೆ ಮತ್ತು ಈ ಕಚ್ಚೆಹರುಕ ಸ್ವಾಮಿಯಿಂದ ಬೈಸಿಕೊಳ್ಳಲು ಗುಲ್ಬರ್ಗಾ ಸೇರಿದಂತೆ ಸುತ್ತಮುತ್ತಲಿನಿಂದ ಬಿಜೆಪಿ ಪಕ್ಷದ ನಾಯಕರೆಲ್ಲಾ ಬರುತ್ತಾರೆ ಎಂದೆಲ್ಲ ಮಾಹಿತಿ ಇತ್ತು. ಇಂತಹ ಸ್ವಾಮಿಯೂ, ಭಕ್ತರೂ ಇರುತ್ತಾರೆಯೇ ಎಂದು ನೋಡುವ ಆಶೆಯಾಯಿತು.

ಕೊನೆಗೊಂದು ದಿನ ಕಲಬುರ್ಗಿಯಲ್ಲಿದ್ದ ಸ್ನೇಹಿತನಿಗೆ ಫೋನ್ ಮಾಡಿ ಬೆಂಗಳೂರಿನಿಂದ ಹೊರಟೇಬಿಟ್ಟೆ. ಕಲಬುರ್ಗಿಯಲ್ಲಿ ಕಾದಿದ್ದ ಗೆಳೆಯನನ್ನು ಕೂಡಿಕೊಂಡು ಫರಹತಾಬಾದ ಮೂಲಕ ಕವಲಗಿ ಕಡೆ ದಾರಿ ಹಿಡಿದೆ. ಅಂದು ಅಮಾವಾಸ್ಯೆ ಕತ್ತಲು ಬೇರೆ. ಕವಲಗಿಗೆ ಹೋಗುವುದಕ್ಕೆ ಆ ರಾತ್ರಿ ಯಾವುದೇ ಸರಕಾರಿ ಬಸ್ಸಿನ ಸೌಕರ್ಯ ಇಲ್ಲದಿದ್ದರಿಂದ ಅನಿವಾರ್ಯವಾಗಿ ಟ್ರ್ಯಾಕ್ಟರ್ ಹತ್ತಿಕೊಂಡು ಹೊರಡಬೇಕಾಯ್ತು.

ಫರಹತಾಬಾದ್‌ದಿಂದ ಸುಮಾರು 20 ಕಿ.ಮೀ. ದೂರವಿರುವ ಕವಲಗಿಗೆ ಹೋಗುವುದೆಂದರೆ ಹರಸಾಹಸ ಮಾಡಿದಂತೆಯೇ ಸೈ. ಇಂತಹ ಬಗ್ಗಡ ರಸ್ತೆಯಲ್ಲಿ ಅಮಾವಾಸ್ಯೆ ಕಾಳರಾತ್ರಿಯಲ್ಲಿ ಜನ ಗುಂಪುಗುಂಪಾಗಿ ವೆಹಿಕಲ್‌ಗಳನ್ನು ಮಾಡಿಕೊಂಡು ಹೊರಟದ್ದು ನನಗೆ ಇನ್ನಷ್ಟು ಸೋಜಿಗವನ್ನುಂಟು ಮಾಡಿತ್ತು. ಕವಲಗಿ ಇನ್ನು ಅರ್ಧ ಕಿ.ಮೀ ಇದೆ ಎನ್ನುವಾಗಲೇ ಕವಲು ರಸ್ತೆಯೊಂದು ಕಾಣಸಿಗುತ್ತದೆ. ಆ ರಸ್ತೆಯಲ್ಲಿ ಇಳಿದು ನಾನು ನನ್ನ ಮಿತ್ರ ನಡೆಯುತ್ತ ಹೊರಟೆವು. ಸುಮಾರು ರಾತ್ರಿ



ಯಡಿಯೂರಪ್ಪನ ಮಗ ವಿಜಯೇಂದ್ರ ಕಣ್ಣಿಗೆ ಕಾಣಿಸಿದ್ದೆ ತಡ ನಾಗ್ಯಾ 'ಮಿಂಚಲಾರಂಭಿಸಿದ'. "ಲೇ ಬೋಸುಡಿ ಮಗ್ಯಾ. ಈಗ್ಯಾಕ ಕಿಸಿಲ್ಯಾಕ ಬಂದೇನು? ಹಲ್ಕಟ್ ಸೂ.... ಮಗನ್ಯಾ...... ನಿಮ್ಮಪ್ಪಗ ನೂರು ಕೋಟಿ ರೂಪಾಯಿ ನನಗ ಕೊಡಲಿಕ್ಕ ಹೇಳು. ಈ ಏಳು ಅಳ್ಳ (ಚಿಕ್ಕ ಚಿಕ್ಕ ಹರಳು) ಒಯ್ಯಿ.... ವಿಧಾನಸೌಧದ ಸುತ್ತ ಊಳಿಡು. ದೇವೇಗೌಡ ಮತ್ತವನ ಮಕ್ಕಳಾದ ಕುಮಾರಸ್ವಾಮಿ, ರೇವಣ್ಣ ಎಲ್ಲರೂ ಮನಿ ಮನ್ಯಾಗೆ ಹೊಡದಾಡಿ ಸಾಯ್ಬೇಕು. ನಾನ ಹೇಳಿದಂಗ ನೀನು ಮಾಡಿದ್ರ ನೀನು ಸಿಎಂ ಆಗ್ತಿ, ನಿನ್ನಪ್ಪ ಪಿಎಂ ಆಗ್ತಾನ ನೋಡು ಲೌಡಿ ಮಗನೆ" ಎಂದೆಲ್ಲ ಅನಿಸಿಕೊಂಡ ಯಡ್ಡಿ ಮಗ ವಿಜಯೇಂದ್ರ ತುಟಿಪಿಟಿಕ್ ಅನ್ನಲಿಲ್ಲ!



ನಾಗಲಿಂಗ ಎಂಬ ಹಲ್ಕಟ್ ಸ್ವಾಮಿ

ಹನ್ನೊಂದು ಗಂಟೆ ಆಗಿರಬಹುದು. ನಾವು ಸಿದ್ದೇಶ್ವರ ಗುಡಿ ತಲುಪುವ ಹೊತ್ತಿಗೆ ಆ ಗುಡಿಯ ಅಂಗಳದ ತುಂಬಾ ಜನ ನೆರೆದಿದ್ದರು. ಲಕ್ಷಾಂತರ ರೂಪಾಯಿ ಬೆಲೆಬಾಳುವ ಎಲ್ಲಾ ನಮೂನೆಯ ಕಾರುಗಳು, ಜೀಪುಗಳು ಅಲ್ಲಿ ಜಮಾಯಿಸಿದ್ದವು. ಶ್ರೀಮಂತ ವ್ಯಕ್ತಿಗಳಷ್ಟೇ ಅಲ್ಲದೆ ಮಧ್ಯಮ ವರ್ಗದ ಜನರೂ ಸಾಕಷ್ಟು ಸಂಖ್ಯೆಯಲ್ಲಿ ನೆರೆದಿದ್ದರು.

ಸುಮಾರು 40-45 ವಯಸ್ಸಿನ ಆಜಾನುಬಾಹು ಮನುಷ್ಯನೊಬ್ಬ ಬಿಳಿ ಧೋತರ, ಅದೇ ಬಣ್ಣದ ಲಂಡ ಅಂಗಿ ತೊಟ್ಟು ನಡೆದಾಡುತ್ತಿದ್ದ. ಮೂರ್ನಾಲ್ಕು ಜನ ಆತನನ್ನು ಹಿಂಬಾಲಿಸುತ್ತಿದ್ದರು. ಅಷ್ಟೇನು ಆಕರ್ಷಕವಲ್ಲದ ಆದರೆ ತುಂಬಾ ಹಳೆಯ ಕಾಲದ್ದೆಂದು ಸ್ಪಷ್ಟವಾಗಿ ಗೋಚರಿಸುವ ಮಠದ ಪ್ರಾಂಗಣದಲ್ಲಿ ಜನ ಕೂತಿದ್ದರು. ಆಲದ ಗಿಡದ ಸಮೀಪ, ಬನ್ನಿ ಗಿಡದ ಕೆಳಗಡೆ ಕುಳಿತ ಅವರೆಲ್ಲರೂ ತುಟಿಗಳನ್ನು ಎರಡು ಮಾಡದೆ, ತದೇಕಚಿತ್ತದಿಂದ ಆ ವ್ಯಕ್ತಿಯನ್ನೇ ನೋಡುತ್ತಿದ್ದರು. ಚಂಚಲ ಚಂಚಲವಾಗಿ ತಿರುಗಾಡುತ್ತಿದ್ದ ಆತ ತನ್ನ ಬಾಯಿಗೆ ಬಂದ 'ಹಲ್ಕಟ್' ಪದಗಳನ್ನು ಬತ್ತರಿಸುತ್ತಲೇ ಸಾಗಿದ್ದ. ಕೆಲವರಿಗಂತೂ ಕಲ್ಲು ತೆಗೆದುಕೊಂಡು ಹೊಡೆಯುತ್ತಿದ್ದ. ಆದರೆ ಜನ ಮಾತ್ರ ಈತನ ಮಾತು ಮತ್ತು ಕ್ರಿಯೆಗಳನ್ನು ಸಹಿಸಿಕೊಂಡು ಕೂತಿದ್ದು ದಿಗ್ಭ್ರಮೆ ಹುಟ್ಟಿಸುವಂತಿತ್ತು. ನಾನು ನೋಡಲೆಂದು ಬಂದಿದ್ದ ನಾಗಲಿಂಗನೇ ಈತನೆಂದು ನಿರ್ಧರಿಸುವುದಕ್ಕೆ ಹೆಚ್ಚು ಸಮಯ ಹಿಡಿಯಲಿಲ್ಲ.

ಕಲಬುರ್ಗಿ

ಅಲ್ಲಿ ನೆರೆದಿದ್ದ ನೂರಾರು ಜನಗಳ ಎದುರುಗಡೆ[illegible] ಈ ಕಚ್ಚೆಹರುಕ ಸ್ವಾಮಿ ಹೆಣ್ಣುಮಕ್ಕಳನ್ನು ಕಾಣುತ್ತ[illegible] ತನ್ನ ಹೊಲಸು ಮಾತುಗಳನ್ನು ಹರಿಯಬಿಟ್ಟ. ಇನ್[illegible] ಮೈನೆರೆಯದ ಇಬ್ಬರು ಯುವತಿಯರ[illegible] ನೋಡಿ ಜೊಲ್ಲು ಸುರಿಸುತ್ತ "ಈ ಮಕ್ಕ[illegible] ಯಾರವು? ಇವರ ಮೊಲೆ ಎ[illegible] ಪಸಂದಾಗಿವೆ? ಇನ್ನು ಇವರ... ಹೇಗಿರಬೇಕು?" ಎಂದು ಎಲ್ಲರೆದುರಿ[illegible] ಈತ ಹೇಳಿದಾಗಲೂ ಆ ಯುವತಿ[illegible] ತಂದೆ-ತಾಯಿಯಾಗಲೀ, ಅಲ್ಲಿ ನೆರೆದಿದ್ದ ಬೇರೆ ಯಾ[illegible] ಆಗಲೀ ಚಕಾರವೆತ್ತಲಿಲ್ಲ. ಮೊದಲೇ ಹೇಳಿದಂತೆ ಈ[illegible] ಹೀಗೆ ಕೆಟ್ಟದಾಗಿ ಮಾತನಾಡಿದರೇನೇ ತಮಗೆ ಒಳ್ಳೆ[illegible]ದೆಂದು ಅವರೆಲ್ಲ ಭಾವಿಸಿದಂತಿತ್ತು. ಆದರೆ ಅ[illegible] ಅಶ್ಲೀಲತೆ ನನ್ನಲ್ಲಿ ಕೋಪ ಉಕ್ಕಿಸುತ್ತಿತ್ತು.

ನಾಗಲಿಂಗನ ತಾಯ್ಗಂಡಗಿರಿಯೂ ಕಲಬುರ್ಗಿಯ ಜನವಾದಿ ಮಹಿಳೆಯರೂ

ಚಾಲುಕ್ಯರ ಕಾಲದಲ್ಲಿ ಕಟ್ಟದ್ದೆಂದು ಹೇಳಲಾಗುವ ರೇವಣಸಿದ್ದೇಶ್ವರ ಗುಡಿಯ ಹಿಂಭಾಗದಲ್ಲಿ ಬೃಹತ್ ಬಿಳಲುಗಳನ್ನು ಹೊಂದಿರುವ ವಿಶಾಲವಾದ ಆಲದ ಮರವೊಂದಿದೆ. ಆ ಮರ ಬಹುಶಃ ಯಾವುದೋ ಗುಡಿಯ ನೆತ್ತಿನ ಮೇಲೆ ಬೆಳೆದಿರಬೇಕು ಎಂಬ ಪ್ರತೀತಿಯೂ ಇದೆ. ಇದನ್ನೆಲ್ಲ ಸಮರ್ಥಿಸುವಂತೆ ಆ ಮರದ ಬುಡಕ್ಕೆ ಆನಿಸಿ ದೇವಸ್ಥಾನದ ಕಳಸ ಕಾಣಿಸಿದಂತೆ ಕಾಣಿಸುವ ಕರಿಯ ಕಲ್ಲೊಂದು ಗೋಚರವಾಗುತ್ತದೆ.

"ಇಲ್ಲಿ ಅಪಾರವಾದ ಸಂಪತ್ತಿದೆ. ಇದನ್ನು ಕಾಯಲೆಂದೇ ಆ ದೇವಾನುದೇವರು ತನ್ನನ್ನು ಭುವಿಗೆ ಕಳಿಸಿದ್ದಾನೆ" ಎಂದು ನಾಗಲಿಂಗ ಸುತ್ತಮುತ್ತಲ ಜನರನ್ನು ನಂಬಿಸಿದ್ದಾನೆ. ಸೇಡಂ ತಾಲೂಕಿನ ಉದ್ದಿ ಗ್ರಾಮದ ಈ ನಾಗಲಿಂಗ ಮೊದಲು ಹೆಂಡರು ಮಕ್ಕಳನ್ನು ಹೊಂದಿದ್ದ ಸಂಸಾರಿ ಆಗಿದ್ದ ಮತ್ತು ವಾಸವದತ್ತಾ ಸಿಮೆಂಟ್ ಫ್ಯಾಕ್ಟರಿಯಲ್ಲಿ ನೌಕರನಾಗಿದ್ದ. ಆಗ ಕಮ್ಯುನಿಸ್ಟ್ ಪಕ್ಷದಲ್ಲಿದ್ದು ಹಲವು ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದನಂತೆ.

ಆದರೆ ಅದ್ಯಾವಾಗ ಪಿಸಾಯಿತೋ, ಈತ ಒಮ್ಮಿಂದೊಮ್ಮೆಗೆ ಸಂಸಾರ, ಕೆಲಸ, ಮನೆ ಮಕ್ಕಳು ಎಂಬ ಜಂಜಾಟಗಳನ್ನೆಲ್ಲ ತೊರೆಯುವುದಕ್ಕೂ, ಈ ಗುಡಿಗೆ ಸ್ವಾಮಿ ತರುವ ತರಾತುರಿಯಲ್ಲಿ ಕವಲಗಿ ಗ್ರಾಮದ ಜನತೆ ಇದ್ದದ್ದಕ್ಕೂ ಸರಿಹೋಯಿತು. ಈ ಮಠದಲ್ಲಿ ಒಕ್ಕರಿಸಿದ ನಾಗಲಿಂಗ ತನ್ನ



ಕೆ. ನೀಲಾ

ಖಲುತನದಿಂದಲೇ ಜನರನ್ನು ಆಕರ್ಷಿಸಿ ಅವರ ಮುಂಡಾಮೋಚುತ್ತಿದ್ದಾನೆ.

ಮಠಕ್ಕಿರುವ ಸುಮಾರು ಮೂವತ್ತು ಎಕರೆ ಹೊಲವನ್ನು ಉಳುಮೆ ಮಾಡಿಸುತ್ತ, ಹಲ್ಕಟ್ ಬೈಗುಳ ಹಾಗೂ ವಿಚಿತ್ರ ವರ್ತನೆಗಳಿಂದ ತಾನೊಬ್ಬ 'ಅವಧೂತಿ' ಎಂಬಂತೆ ಪೋಸು ಕೊಡುತ್ತಾ ಎಲ್ಲರ ಕಣ್ಣಿಗೆ ಮಣ್ಣೆರಚುತ್ತಿದ್ದಾನೆ. ಹೀಗೆ ಬೂಸಿ ಹೊಡೆದೇ ಗುಲ್ಬರ್ಗಾ ಸಮೀಪದ ಇವಣಿಯಲ್ಲೂ ಇನ್ನೊಂದು ಠಿಕಾಣಿ ಹೂಡಿದ್ದಾನೆ. ಎಲ್ಲಾ ದೇವಾನು ದೇವತೆಗಳು ತನ್ನ ಜೊತೆ ಮಲಗಿದ್ದಾರೆ ಎಂದು ಚೀರಾಡುವ ಈತ 'ವಿಕೃತ ಕಾಮಿ' ಎಂಬುದರ ಬಗ್ಗೆ ಸಂಶಯವಿಲ್ಲ.

ಇವನ ಮತ್ತೊಂದು ವಿಶಿಷ್ಟ ಗುಣ ಯಾವುದೆಂದರೆ, ಬೈಗುಳದ ಮಾತು ಮತ್ತು ಹೊಡೆತ. ಇವೆರಡಲ್ಲದೆ ವಿಶೇಷ ಆಶೀರ್ವಾದ ಬೇಕೆಂದರೆ ಈತನಿಗೆ ನಗ್ನ ಸ್ನಾನ ಮಾಡಿಸಬೇಕಂತೆ. ಈತನ ಇಂತಹ ವಿಶಿಷ್ಟ 'ಗುರುಕಾಣಿಕೆ'ಗೆ ಅದೆಷ್ಟು ಮಹಿಳೆಯರು ಬಲಿಯಾಗಿದ್ದಾರೋ. ಇನ್ನು ಪುರುಷ ಭಕ್ತರನ್ನು ತನ್ನ ತೋಟದಲ್ಲಿ ಕೂಲಿಗಳಂತೆ ದುಡಿಸುವ ಈತ ಅವರು ಬೆವರು ಸುರಿಸಿದಷ್ಟೂ 'ಸದ್ಗತಿ' ಸಿಗುತ್ತದೆಂದು ಭೋಂಗಿ ಬಿಡುತ್ತಾನೆ. ಹೊಲ ಗದ್ದೆಗಳಲ್ಲಿ ದುಡಿಯುವ ಜನರು ಸಿಗುವುದೇ ಕಷ್ಟವಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಬಿಟ್ಟಿ ಕೆಲಸದವರನ್ನು ಈತ ಈ ಮಾರ್ಗದಲ್ಲಿ ಕಂಡುಕೊಂಡಿರುವುದು ಆತನ ಅಪಾರ ಬುದ್ಧಿಗೆ ಸಾಕ್ಷಿಯಂತಿದೆ.

ನಾಗಲಿಂಗನ ಪ್ರಕಾರ ಹೆಣ್ಣು ಮಕ್ಕಳೆಂದರೆ "ಮಲಗಲಿಕ್ಕೆ ಮಾತ್ರ[illegible] ಲಾಯಕ್ಕಾದ ಸೂಳೇರೂ....." ಇವನ ಇಂತಹ ಬುದ್ಧಿ ಗೊತ್ತಿಲ್ಲದ[illegible] ಮುಗ್ಧರು ತಮ್ಮ ಹೆಂಡಿರು ಮತ್ತು ಹೆಣ್ಣು ಮಕ್ಕಳನ್ನೇ ಇವನ ಪಾದದಡಿ[illegible] ಬೀಳಿಸಿ ಆತನ ಪಾಪದ ಕೆಲಸಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆ. ಕೆಲವು ನೀಚ ರಾಜಕಾರಣಿಗಳು ಹಿಂದೂಮುಂದೂ ನೋಡದೆ ಈ ಐನಾತಿಯ ಮುಂದೆ ನಿಂತು ಜನರ ಮನಸ್ಸಿನಲ್ಲಿ ಈತನ ಬಗ್ಗೆ ಗೌರವ ಮೂಡುವಂತೆ ಮಾಡುತ್ತಿದ್ದಾರೆ.



ಡಾ. ಮೀನಾಕ್ಷಿ ಬಾಳಿ

ಕೂಡಲೇ ರಾಜ್ಯದ ಪ್ರಜ್ಞಾವಂತ ನಾಗರಿಕರು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷರಾದ ಶ್ರೀಮತಿ ಕೆ. ನೀಲಾ, ಡಾ. ಮೀನಾಕ್ಷಿ ಬಾಳಿ ಮುಂತಾದವರು ಇವನ ವಿರುದ್ಧ ಸಿಡಿದೇಳಬೇಕಿದೆ. ಯಾವುದೋ ಒಬ್ಬ ನಗರದ ಮಹಿಳೆಯ ಮೇಲೆ ದೌರ್ಜನ್ಯ ನಡೆದರೆ ಪತ್ರಿಕೆ ಹೇಳಿಕೆ ನೀಡಿ ಖಂಡಿಸುವ ಇವರು ಈ ಸ್ವಾಮಿಯ ಹಲ್ಕಟ್ ಕೆಲಸಗಳಿಂದ ಅದೆಷ್ಟೋ ಮಹಿಳೆಯರ ಮಾನ ದಿನನಿತ್ಯ ಹರಾಜಾಗುತ್ತಿರುವುದನ್ನು ತಡೆಯಬೇಕಿದೆ.

ನಾಗಲಿಂಗನ ಅಂಗಳದಲ್ಲಿ ಯಡ್ಡಿ


ವಿಜಯೇಂದ್ರ

ಮೊನ್ನೆ ತಮ್ಮ ಧರ್ಮಯಾತ್ರೆಗೆಂದು ಕಲಬುರ್ಗಿಗೆ ಹೋಗಿದ್ದರಲ್ಲಾ ಮಾಜಿ ಉಪ ಮುಖ್ಯಮಂತ್ರಿ ಯಡಿಯೂರಪ್ಪನವರು. ಅವರ ಮಗ ವಿಜಯೇಂದ್ರ ಈ ನಾಗಲಿಂಗನ ಬಗ್ಗೆ ಅಪ್ಪನಿಗೆ ಹೇಳಿರಬೇಕು. ಅದಕ್ಕೆ ಇವರು ಧರ್ಮಯಾತ್ರೆ ಮುಗಿಸಿಕೊಂಡು ಈ ಕಚ್ಚೆಹರುಕ 'ಧರ್ಮ ಗುರು'ವಿನ ಮಠಕ್ಕೆ ರಾತ್ರೋರಾತ್ರಿ ಧಾವಿಸಿದರು.

ಇವರನ್ನು ನೋಡುತ್ತಿದ್ದಂತೆ ಪುಲಕಿತನಾದ ನಾಗಲಿಂಗ "ನೀನು ಸಿಎಂ ಆಗ್ತಿಯಾ, ಆಮೇಲೆ ಪಿಎಂ ಆಗ್ತಿಯಾ" ಎಂದೆಲ್ಲಾ ವದರಿದ್ದಾನೆ.

ರಾಜ್ಯದ ಇತರೆ ಜ್ಯೋತಿಷಿಗಳು ಯಾವುದೇ ಕಾರಣಕ್ಕೂ ಯಡ್ಡಿ ಮುಖ್ಯಮಂತ್ರಿ ಆಗುವುದಿಲ್ಲ ಎಂದಿರುವಾಗ ಈ ತಲೆ ಕೆಟ್ಟ ವಿಕೃತ ಕಾಮಿ 'ಸ್ವಾಮಿ'ಯಾದರೂ ತನಗೆ ಸಿಎಂಗಿರಿ ಮಾತ್ರವಲ್ಲ, ಪಿಎಂಗಿರಿಯೂ ಪ್ರಾಪ್ತಿಯಾಗುತ್ತದೆ ಎಂದು ಹೇಳಿದರೆ ಯಡ್ಡಿಗೆ ಸಂತೋಷವಾಗದೆ ಇರುತ್ತದೆಯಾ?

ನಾಗಲಿಂಗನ ಮಾತು ಕೇಳಿ ಯಡ್ಡಿಗೆ ಅಪಾರ ಸಂತೋಷವಾಗಿದೆ. "ಧನ್ಯವಾದಗಳು ಸ್ವಾಮಿ" ಎಂದು ಯಡ್ಡಿ ಹೇಳಿ ಹೊರಟಾಗ ನಾಗಲಿಂಗ ಒಂದು ಮಾತು ಹೇಳಿದ್ದಾನೆ. "ನೀನು ಪಿಎಂ ಆಗಬೇಕೆಂದರೆ ನನಗೆ ನೂರು ಕೋಟಿ ರೂಪಾಯಿ ಕೊಡಬೇಕು" ಎಂದಿದ್ದಾನೆ.

ಯಡ್ಡಿ ಈಗ ಆ ಹಣವನ್ನು ಎಲ್ಲಿಂದ ಎತ್ತೋದು ಎಂಬ ಚಿಂತೆಯಲ್ಲೇ ಇದ್ದರೆ ಅಚ್ಚರಿ ಏನು?

ಯಾವುದೋ ಶಾಲೆಯಲ್ಲಿ ಶಿಕ್ಷಕನಾಗಿರುವ ಭಕ್ತನೊಬ್ಬ ತನ್ನ ಹೆಂಡತಿಯನ್ನು ಕರೆತಂದು ನಾಗಲಿಂಗನ ಮುಂದೆ ಕೂಡ್ರಿಸಿದ. "ಅಪ್ಪಾವರೇ, ಈಕೆಗೆ ಯಾರೋ ಮಾಟ ಮಾಡಿಸಿರಬೇಕು. ಚಿಂತ್ಯಾನ ಮೈ ಒಡಿತಾದ, ಕೈ ಒಡಿತಾದ ಅಂತಾಳ. ಯಾವ ಕೆಲಸಾನೂ ನೆಟ್ಟಗ ಮಾಡೋದಿಲ್ಲ, ಹೇಳಿದ ಕೆಲಸಾನ ಬಿಲ್‌ಕುಲ್ ಮಾಡೋದಿಲ್ಲ..... ಇಂಥಾಕೀನ ಕಟಗೊಂಡು ಸಾಕ ಸಾಕ ಆಗ್ಯಾದ.... ಲಗ್ನ ಆಗಿ ಐದಾರು ವರ್ಷ ಆದರೂ ನಮಗ ಮಕ್ಕ ಆಗಿಲ್ಲ... ನೀವ ನನಗೊಂದು


ಬೋಜಲಿಂಗ ಮುತ್ಯಾ

ದಿಕ್ಕ ತೋರಸಬೇಕು..." ಎಂದು ಆ ಶಿಕ್ಷಕ ತನ್ನ ಗೋಳನ್ನು ತೋಡಿಕೊಂಡ. ಆಗ ಈ ಲಫಂಗ ಸ್ವಾಮಿ ಮಾಡಿದ್ದೇನು ಗೊತ್ತಾ?

ಇದ್ದಕ್ಕಿದ್ದಂತೆ ಎಲ್ಲರೆದುರಿಗೆ ಆ ಶಿಕ್ಷಕನ ಹೆಂಡತಿಯನ್ನು ತನ್ನತ್ತ ಎಳೆದುಕೊಂಡು ಆಕೆಯನ್ನು ಅಪ್ಪಿಕೊಂಡ. ಹಾಗೆ ಅಪ್ಪಿಕೊಂಡವನು ಅವಳಿಗೆ ಲೊಚ ಲೊಚ ಅಂತ ಮುತ್ತನ್ನೂ ಕೊಟ್ಟ. ಇದೆಂತಹ ಅಧ್ವಾನ ಎಂದು ನಾನು ಚಿಂತಿಸುತ್ತಿರುವಾಗಲೇ "ರಾತ್ರಿ ಈ ಸೂಳಿನ ನನ್ನ ಜೊತೆ ಮಲಗಾಕ ಕಳ್ಸು..... ಈಕೆ ಮೈಯಾಗ ಯಲ್ಲವ್ವ ಕುಂತಾಳ. ಆಕಿ ಜೊತಿ ನಾನು ಮಲಗಿ ಬಹಳ ದಿನಾ ಆಯ್ತು, ಅದಕ್ಕ ಈ ಬೋಸುಡಿ, ಚಿನಾಲಿ ಹಿಂಗೆಲ್ಲ ಹಗಮಾಲಿತನ ಮಾಡತಾಳ......!" ಎಂದು ಆತ ಉದ್ಗಾರವೆತ್ತಿದ. ಆಗಲೂ ಯಾರೂ ಏನನ್ನೂ ಹೇಳಲಿಲ್ಲ, ಆ ಮಹಿಳೆಯ ಗಂಡ ಎಂಬ ಗಂಡಸೂ ಸುಮ್ಮನೆ ನಿಂತಿದ್ದನ್ನು ಕಂಡು ನನಗೆ ನಗಬೇಕೋ? ಅಳಬೇಕೋ? ಒಂದೂ ಗೊತ್ತಾಗಲಿಲ್ಲ.

ಗುಟ್ಕಾ ಪಾಕೇಟ್‌ಗಳನ್ನು ಹರಿದು ಎಲೆಯ ಜೊತೆ ಬಾಯಿಗೆ ತುರುಕುತ್ತ, ಆಗಾಗ್ಗೆ ಪಿಚುಕುಪಿಚುಕು ಅಂತ ಬೆಳ್ಳಿಯ ಪೀಕದಾನಿಯಲ್ಲಿ ಉಗುಳುತ್ತಾ ಸಾಗಿದ್ದ ಈತನ ಸುತ್ತ ಜನ ಭಕ್ತಿಯಿಂದ ನೆರೆದಿದ್ದರು. ಅವರಲ್ಲಿ ಹೊಸಬರ ಮುಖ ಕಂಡಕೂಡಲೇ ಈ ಸ್ವಾಮಿಯ ಬಾಯಿಂದ 'ಸಂಸ್ಕೃತ' ಪದಗಳ ಸರಮಾಲೆಯೇ ಪ್ರಾರಂಭವಾಗುತ್ತಿತ್ತು. "ಬೋಸೂದಿ, ಯಾವನಲೆ ನೀನು? ಯಾಕ ಬಂದಿದಿ ಇಲ್ಲಿ?" ಎಂದು ಶುರುವಾದ ಅವನ 'ಆಶೀರ್ವಚನ' ಅಪರಿಚಿತನ ತಂದೆ ತಾಯಿ ಎಲ್ಲರನ್ನು ಆಹುತಿ ತೆಗೆದುಕೊಂಡಿತು. ಅದರಲ್ಲೂ ತನ್ನ ಸುತಲೂ ಇದ್ದ ಮಹಿಳೆಯರತ್ತ ನೋಡುತ್ತಾ "ಹಲ್ಕಟ್ ಸೂಳೇರು, ಹಲ್ಕಟ್ ರಂಡೇರು. ನನ್ನ ಕಡಿಗೆ ಹ..... ಬಂದಾರ. ಇವತ್ ಇವರ ಬಸ್ವಾನಿ ಮಾಡಿಸಿ ಕಳಿಸ್ತೀನಿ?!" ಎಂದೆಲ್ಲ ಮಾತನಾ ಡುತ್ತಿದ್ದ. ಹೀಗೆ ಮಾತನಾಡುತ್ತಲೇ ತನ್ನ 'ಮಹಾತ್ಮೆ' ಕುರಿತು ಒಂದು ಕತೆಯನ್ನೂ ಉದುರಿಸಿದ:

"ಇದೇ ಊರಿನ ಕಮಲಿ (ಹೆಸರು ಬದಲಿಸಲಾಗಿದೆ) ಇನ್ನೂ ಮೈ ನೆರೆತಿರಲಿಲ್ಲ, ಆಗಲೇ ಆವರಪ್ಪಗ ಹೇಳಿದೆ. 'ಲೇ ಬಸ್ಯಾ ನಿನ್ ಮಗಳಿಗೆ ಮುಂದ ಗಂಡನದೊಂದ ಮಗ ಇದ್ರ ನನ್ನದೂ ಒಂದು ಬೀಜ ಈಗಲೇ ಬಿತ್ತಿನಲೆ' ಎಂದೆ. ನೆರೆಯ ಊರಿಗೆ ಲಗ್ನವಾಗಿ ಹೋದ ಕಮಲಿ ಈಗ ಮತ್ತೆ ಊರಿಗೆ ಬಂದಿದ್ದಾಳ. ಅವಳ ಹೊಟ್ಟೆಯಾಗ ಎರಡು ಕೂಸಿವೆ. ಡಾಕ್ಟರೇ ಹೇಳಿದ್ದಾರೆ. ಅದರಾಗ ರೋದು ಒಂದು ಅವಳ ಗಂಡಂದು, ಇನ್ನೊಂದು ನಂದು" ಎಂದು ನಾಗ್ಯಾ ತನ್ನ ಪುಂಗಿ ಊದುತ್ತಿದ್ದರೆ ಜನ ತಲೆ ತೂಗುತ್ತಿದ್ದರು, ಇನ್ನು ಕೆಲವರು ಅವಾಕ್ಕಾಗಿ ನೋಡುತ್ತಿದ್ದರು.

ನಾನು ಅಂದು ಅಲ್ಲಿದ್ದಾಗ ಕಲಬುರ್ಗಿ ಜಿಲ್ಲೆಯ ಬಿ.ಜೆ.ಪಿ.ಯ ಯುವ ಮುಖಂಡ ದಿಲೀಪನೂ ಅಲ್ಲಿಗೆ ಬಂದಿದ್ದ. ಅಷ್ಟೇ ಅಲ್ಲ, ತನ್ನ ಜೊತೆಗೆ ಯಡಿಯೂರಪ್ಪನ ಮಗ ವಿಜಯೇಂದ್ರನನ್ನೂ ಕರೆತಂದಿದ್ದ.

ಯಡಿಯೂರಪ್ಪನ ಮಗ ವಿಜಯೇಂದ್ರ ಕಣ್ಣಿಗೆ ಕಾಣಿಸಿದ್ದೆ ತಡ ನಾಗ್ಯಾ 'ಮಿಂಚಲಾರಂಭಿಸಿದ'. "ಲೇ ಬೋಸುಡಿ ಮಗ್ಯಾ, ಈಗ್ಯಾಕ ಕಿಸಿಲ್ಯಾಕ ಬಂದೇನು? ಹಲ್ಕಟ್ ಸೂ.... ಮಗನ್ಯಾ...... ನಿಮ್ಮಪ್ಪಗ ನೂರು ಕೋಟಿ ರೂಪಾಯಿ ನನಗ ಕೊಡಲಿಕ್ಕ ಹೇಳು. ಇಲ್ಲಂದ್ರ ಅಂವ್ನ ಮುಖ್ಯಮಂತ್ರಿ ಆಗೋದು ಅವನ ನಸೀಬನ್ಯಾಗೆ ಬರದಿಲ್ಲ, ತಿಳಕೋ. ಈ ಏಳು ಅಳ್ಳ (ಚಿಕ್ಕ ಚಿಕ್ಕ ಹರಳು) ಒಯ್ಯಿ.... ವಿಧಾನಸೌಧದ ಸುತ್ತ ಊಳಿಡು. ಮಜಾ ಹೆಂಗಿರತ ನೋಡು. ದೇವೇಗೌಡ ಮತ್ತವನ ಮಕ್ಕಳಾದ ಕುಮಾರಸ್ವಾಮಿ, ರೇವಣ್ಣ ಎಲ್ಲರೂ ಮನಿ ಮನ್ಯಾಗೆ ಹೊಡದಾಡಿ ಸಾಯ್ತೇಕು. ಕತ್ತಿ ಸೂಳೆ ಮಕ್ಕಳ್ನ ಹಂಗ ಮಾಡಿಬುಡತ್ತೀನಿ....... ಕಳ್ಳ ದೇವೇಗೌಡ ತಮಿಳ್ನಾಡಿಗೆ ಹೋಗಿ ಏನೇನೋ ಮಾಟ ಮಂತ್ರ ಕಟ್ಟಿಸಿಸ್ಗಂಡ ಬಂದಾನ.... ನನ್ನ ಮುಂದೇನೂ ಅವರು ಕಿಸಿಯಾದಿಲ್ಲ......! ನಾನ ಹೇಳಿದಂಗ ನೀನು ಮಾಡಿದ್ರ ನೀನು ಸಿಎಂ ಆಗ್ತಿ, ನಿನ್ನಪ್ಪ ಪಿಎಂ ಆಗ್ತಾನ ನೋಡು ಲೌಡಿ ಮಗನೆ" ಎಂದೆಲ್ಲ ಅನಿಸಿಕೊಂಡ ಯಡ್ಡಿ ಮಗ ವಿಜಯೇಂದ್ರ ತುಟಿಪಿಟಿಕ್ ಅನ್ನಲಿಲ್ಲ! ಬದಲಾಗಿ ಕೈ ಮುಗಿಯುತ್ತಾ ಮತ್ತಷ್ಟು ಇಂತಹದ್ದೇ 'ಆಶೀರ್ವಾದ'ವನ್ನು ಸ್ವೀಕರಿಸುವ ಭಕ್ತನಂತೆ ನಿಂತಿದ್ದ.

ಅವರು ಅತ್ತ ಹೋದಮೇಲೆ ಬಂದ ಫರತಾಬಾದ್ ಪೊಲೀಸ್ ಠಾಣೆಯ ಮಹಾದೇವಪ್ಪ ಎಂಬ ಹೆಡ್‌ಕಾನ ಸ್ಟೇಬಲ್ 'ಸ್ವಾಮಿ'ಯ ಕಾಲಿಗೆ ಬಿದ್ದ. "ಈ ಕತ್ತಿ ಸೂ..... ಮಗ, ತನ್ ಮಗನ ಕೆಲ್ಸಾ ಆಗಲಿ ಅಂತ ಈಗ ಬಂದಾನ. ಕೆಲ್ಸ ಆದ ಮ್ಯಾಲ ಹಿಡಿನನ್ನ ಗೆಂ..... ಅಂತಾನ. ಹೌದಲ್ಲಲೇ?" ಎಂದು ನಾಗಲಿಂಗ ಅವನತ್ತ ಕೇಳಿದ. ಆದರೆ ಹಾಗೆ ಬೈಸ್ಕಿಕೊಂಡ ಮಹಾದೇವಪ್ಪ ತನಗ್ಯಾವ ಅವಮಾನವೂ ಆಗಿಲ್ಲ ಎಂಬಂತೆ ನಸುನಗುತ್ತ "ಮುತ್ಯಾರ, ಹಂಗ್ಯಾಕ ಅಂತೀರಿ. ನಾ ಅಂತಾ ಮನಿಸ್ಯಾ ಕಾಣಸ್ತಿನೇನು?" ಎಂದು ಉತ್ತರಿಸಿದ.

ಅಷ್ಟರಲ್ಲೇ ಅದೇ ಮಠದಲ್ಲಿಯೇ ಇರಬಹುದಾದ ಹದಿನೆಂಟು ಇಪ್ಪತ್ತರ ವಯಸ್ಸಿನ ನಾಲ್ಕಾರು ಹುಡುಗಿಯರು ಕಾಣಿಸಿಕೊಂಡರು. ಇಂತ ಹಲ್ಕಟ್ ಸ್ವಾಮಿಯ ಮಠದಲ್ಲೂ ಹೆಣ್ಣು ಮಕ್ಕಳೆ?! ಎಂದು ನನಗೆ ಕೊಂಚ ದಿಗಿಲಾಯಿತು. ನನ್ನ ದಿಗಿಲನ್ನು ಅರ್ಥಮಾಡಿಕೊಂಡವನಂತೆ ನಾಗಲಿಂಗ "ಇವಳು ಮಠಕ್ಕ ಬರೋದಕ್ಕಿಂತ ಮೊದಲು ನಾಯಿ, ಹಂದಿ .... ಮಾಡಿಸ್ಕೊಂಡಾಂಗ......... ಮಾ..... ಇದ್ಲು, ಇವಳ್ನ ಕರಕೊಂಡು ಬಂದು ಮಠದಾಗ ಹಾಕಿ ತಿಂಗಳಾನ ಗಟ್ಟೆ........... ಈಗ ಬರೋಬರೀ ಆಗ್ಯಾಳೆ. ಇವ್ಳ ಮೈಯ್ಯಾಗ ಪಂಡರಾಪುರ ಅಂಬಾಭವಾನಿ ಇದ್ಲು, ಅವ್ಳುನೂ ನನ್ನ ಸೂಳೀನೆ...... ಹಲ್ಕಟ್ ಸೂಳೇರಿಗೆಲ್ಲಾ ನಾನೇ ಮಿಂಡಗಾರ...." ಎಂದು ತನ್ನ ಕಚ್ಚೆಹರುಕತನದ ಬಗ್ಗೆ ಬಹಿರಂಗವಾಗಿ ಹೇಳಿಕೊಂಡ.

ಈತ ಯಾವ ಕಾರಣಕ್ಕೂ ಸ್ವಾಮಿ ಅಲ್ಲ, ಬದಲಾಗಿ ತಲೆ ಕೆಟ್ಟ ಹುಚ್ಚ ಎಂಬುದು ಸ್ಪಷ್ಟ. ಆದರೆ ಇಂತಹವನ 'ಆಶೀರ್ವಾದ' ಪಡೆಯಲು ರಾಜಕಾರಣಿಗಳು, ಉದ್ಯೋಗಸ್ಥರು, ಸರಕಾರಿ ನೌಕರರು ಮತ್ತು ಇತರರು ಬರುತ್ತಾರೆಂದರೆ ಇನ್ನು ಅಮಾಯಕ ಮುಗ್ಧರು ಸುಮ್ಮನಿರುತ್ತರೆಯೇ? ಅವರೂ ಬಂದು ಈತನಿಂದ ವಾಚಾಮಗೋಚರ ಬೈಸಿಕೊಂಡು ಹೋಗುತ್ತಿದ್ದಾರೆ.

ಇಂತಹ ಅವಿವೇಕತನಕ್ಕೆ ಏನನ್ನಬೇಕು ಎಂದು ಚಿಂತಿಸುತ್ತಾ ಬೆಂಗಳೂರಿಗೆ ಹಿಂದಿರುಗಿದೆ.....

– ವರದಿಗಾರ

ರಾಜಕಾರಣಿಗಳ ನಂಟು

ಈ ನಾಗಲಿಂಗನ ಪೂರ್ಣ ಹೆಸರು ನಾಗೇಂದ್ರ ಮಾಂಚಿ ಎಂದು. ಈತ ಶರಣ ಪ್ರಕಾಶ ಪಾಟೀಲನ ದೂರದ ಸಂಬಂಧಿ. ಆ ಕಾರಣಕ್ಕೊ ಏನೋ ಹಿಂದೊಮ್ಮೆ ಈತ ಜನತಾದಳದಲ್ಲೂ ಹಲವು ದಿನ ಇದ್ದು ಕೆ.ಬಿ. ಶರಣಪ್ಪನವರ ಪಕ್ಕಾ ಪುಢಾರಿಯಾಗಿದ್ದ.

ಆನಂತರ ಆಂಧ್ರಕ್ಕೆ ಹೋದ ಈತ ಅದೆಲ್ಲೋ ಮಾಟಮಂತ್ರ ಕಲಿತನಂತೆ. ಈಗ ಕಲಬುರ್ಗಿಗೆ ಹಿಂದಿರುಗಿ ತನ್ನ ಹಲ್ಕಟ್ ಕೆಲಸಗಳನ್ನು ಮಾಡಿ ಕೊಂಡಿದ್ದಾನೆ. ಇವತ್ತು ಇವನಿಗೆ ರಾಜಕಾರಣಿಗಳೇ ಬಂದು 'ಕಾಣಿಕೆ' ನೀಡುತ್ತಿದ್ದಾರೆ!

ಬೋಜಲಿಂಗ ಮುತ್ಯಾನ ಹಾದರದ ಅಡ್ಯಾಗಳು

ಚಿತ್ತಾಪುರ ತಾಲೂಕಿನ ನಾಲವಾರದಲ್ಲಿ ಬೋಜಪ್ಪ ಮುತ್ಯಾ ಎಂಬುವನು ಹಲವು ವರ್ಷಗಳ ಹಿಂದೆ ಜೀವಿಸಿದ್ದಾಗಿ ಹೇಳುತ್ತಾರೆ. ಆತನೂ ಕೂಡ ತನ್ನ ವಿಲಕ್ಷಣ ಚಟುವಟಿಕೆಗಳ ಮೂಲಕ ಜನರನ್ನು ತನ್ನತ್ತ ಸೆಳೆಯುತ್ತಿದ್ದನೆಂಬ ಪ್ರತೀತಿ ಇದೆ. ಈ ಮಹಾಶಯ ತಾನು ಸಾಯುವಾಗ "ನನ್ನ ಶಿಷ್ಯಮಕ್ಕಳು ಈ ಭಾಗದಲ್ಲಿ ನಾಲ್ಕಾರು ಕಡೆ ಹುಟ್ಟುತ್ತಾರೆ" ಎಂದು ಹೇಳಿದ್ದನಂತೆ.

ಅಂದಂತೆ ಈಗ ಕಲಬುರ್ಗಿ ಜಿಲ್ಲೆಯ ನಾಲ್ಕಾರು ಕಡೆ ತಾವು ಬೋಜಪ್ಪ ಮುತ್ಯಾನ ಶಿಷ್ಯಂದಿರು ಎಂದು ಹೇಳಿಕೊಳ್ಳುವ, ಅಥವಾ ಆತನ ಅನುಗ್ರಹ ತಮ್ಮ ಮೇಲೆ ಆಗಿದೆ ಎಂಬಂತೆ ಪೋಸು ಕೊಡುವ ಘಟಿಂಗ ಸ್ವಾಮಿಗಳು ಇದ್ದಾರೆ. ಬಹುತೇಕ ಇವರೆಲ್ಲರ ಪ್ರಮುಖ ಕಾಯಕವೆಂದರೆ ಹಾದರತನ ಮಾಡುವುದು. ಸುಳ್ಳುಗಳ ಸೂಡು ಕಟ್ಟಿ ಸತ್ಯವೆಂಬಂತೆ ಪ್ರತಿಪಾದಿಸುವುದು. ಎಂತಹ ಹಲ್ಕಟ್ ಬೈಗುಳ ಬೈಯ್ಯಲು ಸಾಧ್ಯವೋ ಅಂತಹ ಮಾತುಗಳನ್ನಾಡುವುದು. ಮಟ್ಕಾದಂಥ ವಿನಾಶಕಾರಿ ಚಟದಿಂದ ಹಿಡಿದು ಹೆಂಡದ ದಾಸರನ್ನಾಗಿಸುವ ಕಾರ್ಯಗಳಿಗೆ ಇವರೆಲ್ಲರ ಕುಮ್ಮಕ್ಕು ಇದ್ದದ್ದೇ. ಇಂತಹ ಹೀನ ಕಾರ್ಯಗಳಿಗೆ ಈ ನಕಲಿ ಸ್ವಾಮಿಗಳು ತಮ್ಮ ಸುತ್ತ ಲಂಪಟರ ಗುಂಪೊಂದನ್ನು ಸಾಕಿಕೊಂಡಿರುತ್ತಾರೆ. ಇದೆಲ್ಲದಕ್ಕೆ ತಕ್ಕಂತೆ ತಮ್ಮ ಮಠಗಳನ್ನೇ ಹಾದರದ ಅಡ್ಡೆಗಳನ್ನಾಗಿರಿಸುತ್ತಾರೆ.

ಜನತೆಯ ಮುಗ್ಧ ಧಾರ್ಮಿಕ ನಂಬಿಕೆಗಳನ್ನೇ ಬಂಡವಾಳ ಮಾಡಿಕೊಂಡು ಕೊಳ್ಳೆ ಹೊಡೆಯುತ್ತಿರುವ ಇವರನ್ನು ಸೀದಾ ಕೃಷ್ಣನ ಜನ್ಮಸ್ಥಾನಕ್ಕೆ ಕಳಿಸಬೇಕಾದುದು ಪ್ರಜ್ಞಾವಂತರೆಲ್ಲರ ಕರ್ತವ್ಯವಾಗಿದೆ.

ಕರಾವಳಿ: ಹಳಿ ತಪ್ಪಿದ ರೈಲು!

ಕೇಂದ್ರ ಮಂತ್ರಿ ಆಸ್ಕರ್ ಫರ್ನಾಂಡಿಸ್, ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಯೋಜನಾ ಆಯೋಗದ ಅಧ್ಯಕ್ಷ ವೀರಪ್ಪ ಮೊಯ್ಲಿ, ಮಾಜಿ ಕೇಂದ್ರ ಮಂತ್ರಿ ಮತ್ತು ಹಾಲಿ ರಾಜ್ಯಸಭಾ ಸದಸ್ಯ ಜನಾರ್ದನ ಪೂಜಾರಿ, ಸಂಸದ ಡಿ. ವಿ. ಸದಾನಂದ ಗೌಡ, ಸಂಸದೆ ಮನೋರಮಾ ಮಧ್ವರಾಜ್... ಹೀಗೆ ದಕ್ಷಿಣ ಕನ್ನಡದ ದೌರ್ಭಾಗ್ಯಕ್ಕೆ ಮೂಕ ಸಾಕ್ಷಿಗಳು ಎಂಬಂತೆ ಈ ನಾಯಕಮಣಿಗಳೆಲ್ಲಾ ಇದ್ದಾರೆ. ಇದ್ದರೇನು ಪ್ರಯೋಜನ? ಕರಾವಳಿಯ ಜನತೆಗೆ ರೈಲಿನ ವಿಚಾರದಲ್ಲಿ ಅನ್ಯಾಯವಾಗುತ್ತಿದ್ದರೂ, ಇವರೆಲ್ಲ ಮೌನ ವಹಿಸಿ ಸುಮ್ಮನೆ ಕೂತಿರುವುದು ಹೇಗಿದೆ ಎಂದರೆ ನಾಯಿ ಮೊಲೆಯಲ್ಲಿ ಯಥೇಚ್ಛವಾಗಿ ಹಾಲಿದ್ದರೂ ಏನು ಪ್ರಯೋಜನ ಎಂಬಂತಿದೆ!

ಮಂ-ಬೆಂ ರೈಲು ಎಂಬ ತಿರುಕನ ಕನಸು

ಉದ್ಯಾನನಗರಿ ಬೆಂಗಳೂರು-ಮತ್ಸ್ಯನಗರಿ ಮಂಗಳೂರನ್ನು ರೈಲ್ವೇ ಹಳಿಯ ಮೂಲಕ ಬೆಸೆಯುವ ಮಹತ್ಕಾರ್ಯಕ್ಕೆ ಚಾಲನೆ ದೊರೆತದ್ದು 1978 ರಲ್ಲಿ. ಆನಂತರ 19 ವರ್ಷಗಳ ಕಾಲ ಯಾವುದೇ ಎಗ್ಗಿಲ್ಲದೆ ಈ ನಗರಗಳ ನಡುವೆ ರೈಲು ಓಡಾಡಿಕೊಂಡಿತ್ತು. ಆಗಿನ್ನೂ ಮಂಗಳೂರು ಈ ಪರಿ ಬೆಳೆದಿರಲಿಲ್ಲ. ಎಂ.ಆರ್.ಪಿ.ಎಲ್. ನಂತರ ಬೃಹತ್ ಉದ್ದಿಮೆಗಳಾಗಲೀ, ಕೊಂಕಣ ರೈಲ್ವೇ ಆಗಲೀ ನಿರ್ಮಾಣಗೊಂಡಿರಲಿಲ್ಲ. ಒಂದಕ್ಕೊಂದು ಸ್ಪರ್ಧಿಯಂತೆ ಆಕಾಶದತ್ತ ಚಾಚಿರುವ ಗಿರಿ-ಶಿಖರಗಳು, ಈ ಶಿಖರಗಳ ಹೊಟ್ಟೆಯನ್ನೇ ಬಗೆದು ನಿರ್ಮಿಸಿರುವ 65 ಸುರಂಗ ಮಾರ್ಗಗಳು, ಅಗಾಧ ವನರಾಶಿ, ಪಶ್ಚಿಮ ಘಟ್ಟದ ಸಕಲೇಶಪುರ-ಸುಬ್ರಹ್ಮಣ್ಯ ನಡುವಿನ 51 ಕಿ.ಮೀ. ರೈಲು ಸವಾರಿ ಎಂದರೆ ಭೀಕರತೆ, ರುದ್ರತೆ, ರಮಣೀಯತೆಗಳ ಪ್ರಕೃತಿಯೊಂದಿಗೆ ಕಣ್ಣಾಟದ ಅನೂಹ್ಯ ಅನುಭವ!

1992ರಲ್ಲಿ ಆಗಿನ ಪ್ರಧಾನಿ ಪಿ.ವಿ. ನರಸಿಂಹರಾಯರ ಸರ್ಕಾರವು ದೇಶದ ಎಲ್ಲಾ ರೈಲು ಮಾರ್ಗಗಳು ಯೂನಿಗೇಜ್‌ಗೆ ಪರಿವರ್ತನೆಯಾಗಬೇಕೆಂದು ನಿರ್ಧರಿಸಿತು. ಈ ನಿರ್ಧಾರ ಹಾಸನ-ಮಂಗಳೂರು ರೈಲು ಮಾರ್ಗವನ್ನೂ ಒಳಗೊಂಡಿತ್ತು. 1997 ರಲ್ಲಿ ಮೀಟರ್ ಗೇಜ್‌ನಲ್ಲಿದ್ದ ಹಾಸನ-ಮಂಗಳೂರು ನಡುವಿನ 189 ಕಿ.ಮೀ. ಉದ್ದದ ಹಳ್ಳಿಯನ್ನು ಬ್ರಾಡ್‌ಗೇಜ್‌ಗೆ ಪರಿವರ್ತಿಸಲು ಅಂದು ಅಂದಾಜಿಸಿದ್ದ ಮೊತ್ತ 217.82 ಕೋಟಿ ರೂಪಾಯಿ. ಆನಂತರ ರೈಲ್ವೇ ಬಜೆಟ್‌ನಲ್ಲಿ ಕೇಂದ್ರ ಸರಕಾರವು ಮಲತಾಯಿ ಧೋರಣೆ ತೋರುತ್ತಾ ಹೋಗಿದ್ದರಿಂದ ಈ ಯೋಜನೆಯ ವೆಚ್ಚವೂ ಹೆಚ್ಚಾಗುತ್ತಾ ಹೋಯಿತು.

ಹಳಿ ಆಯ್ತು ರೈಲು ಇಲ್ಲ


ಕೊನೆಗೂ ಹತ್ತು ವರ್ಷಗಳ ದೀರ್ಘ ಕಾಯುವಿಕೆಯ ನಂತರ ರೈಲ್ವೇ ಹಳಿಯಂತೂ ರೆಡಿಯಾಯಿತು. ಗೂಡ್ಸ್ ರೈಲು ಓಡಲೂ ಶುರುವಾಯಿತು. ಆದರೆ ಪ್ಯಾಸೆಂಜರ್ ರೈಲು ಓಡಾಟಕ್ಕೆ ರೈಲ್ವೇ ಇಲಾಖೆಯೇ 'ಸುರಕ್ಷಿತತೆ'ಯ ಹೆಸರಿನ ವಿಘ್ನ ಒಡ್ಡಿ ಕೂತಿತು.

ಕಳೆದ ಹತ್ತು ವರ್ಷಗಳಲ್ಲಿ ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದ ಅಪಘಾತಗಳ, ಅವುಗಳಲ್ಲಿ ಹರಿದ ರಕ್ತ, ಸತ್ತ ಜನರ ಬಗ್ಗೆ ಯಾರೂ ಸರಿಯಾಗಿ ಲೆಕ್ಕ ಬರೆದಿಟ್ಟಿಲ್ಲ. ಆದರೂ ಒಂದು ಸರ್ಕಾರಿ ಲೆಕ್ಕಾಚಾರದ ಪ್ರಕಾರ ಸುಮಾರು 4971 ರಸ್ತೆ ಅಪಘಾತಗಳು ಸಂಭವಿಸಿ, 2765 ರಸ್ತೆಗಳು ಜಖಂಗೊಂಡು, 3189 ಜನರ ಪ್ರಾಣವನ್ನು ರಾಷ್ಟ್ರೀಯ ಹೆದ್ದಾರಿ 48 ಬಲಿ ತೆಗೆದುಕೊಂಡಿದೆ. ಪ್ರತಿ ವರ್ಷ ರಸ್ತೆ ದುರಸ್ತಿಗಾಗಿ 4.5 ಕೋಟಿ ಖರ್ಚಾಗಿದೆ. ಎಷ್ಟೇ ಖರ್ಚಾದರೂ ಮಳೆರಾಯನ ಅವಕೃಪೆಯಿಂದಾಗಿ ಕಳೆದ 33 ವರ್ಷಗಳಲ್ಲಿ ಸಂಚಾರಕ್ಕೇ ಸಂಚಕಾರದಂತಿದ್ದ ಶಿರಾಡಿಘಾಟ್‌ನ ರಸ್ತೆ ಈಗ ಸಂಪೂರ್ಣವಾಗಿ ಬಂದ್ ಆಗಿದೆ. ಇದೀಗ ರಾಜಧಾನಿಗೆ ಸಂಚರಿಸುವ ಮಂಗಳೂರಿನ ಜನತೆ ಮೈಸೂರು ಮೂಲಕ ಸುತ್ತು ಬಳಸಿ ಪ್ರಯಾಣಿಸಬೇಕಾದ ಪರಿಸ್ಥಿತಿ ಇದೆ. ಪ್ರಯಾಣಿಕರ ಪರದಾಟ ಒಂದೆಡೆಯಾದರೆ, ಹಾಸನ-ಮಂಗಳೂರು ನಡುವೆ ವಾಹನಗಳ ಓಡಾಟವನ್ನೇ ಅವಲಂಬಿಸಿ ರಸ್ತೆಬದಿ ವ್ಯಾಪಾರ ನಡೆಸುತ್ತಿದ್ದ ನೂರಾರು ಕುಟುಂಬಗಳು ನಿರ್ಗತಿಕರಾಗಿರುವುದು ಇನ್ನೊಂದೆಡೆ.

ಈ ಎಲ್ಲಾ ಬದುಕು-ಬವಣೆಗಳಿಗೆ ಏಕೈಕ ಪರಿಹಾರವಾಗಿದ್ದ ಮಂಗಳೂರು-ಬೆಂಗಳೂರು ಪ್ಯಾಸೆಂಜರ್ ರೈಲು ಯೋಜಿಸಿದ್ದಂತೆ ಕಳೆದ ಅಕ್ಟೋಬರ್ ತಿಂಗಳಲ್ಲೇ ತನ್ನ ಸಂಚಾರವನ್ನು ಆರಂಭಿಸಬೇಕಿತ್ತು. ಈ ರೈಲು ಆರಂಭದ ನಂತರವೇ ಶಿರಾಡಿ ಘಾಟ್‌ನ ಎಕ್ಕುಟ್ಟಿ ಹೋದ ರಸ್ತೆಗೆ ಕಾಂಕ್ರಿಟೀಕರಣ ಮಾಡುತ್ತೇವೆಂದು ಡಿ. ವಿ. ಸದಾನಂದ ಗೌಡರು ಪತ್ರಿಕಾ ಹೇಳಿಕೆ ಕೂಡಾ ನೀಡಿದ್ದರು. ಇದೀಗ ಅಕ್ಟೋಬರ್ ಕಳೆದು ನವೆಂಬರ್ ಬರುತ್ತಿದೆ. ಆದರೆ ಎಲ್ಲಾ ಭರವಸೆಗಳೂ ಬರೀ ಬುರುಡೆಗಳಾಗಿವೆ. ರೈಲುಯಾನವೆಂಬುದು 'ಗಣಪತಿ ಮದುವೆ'ಯಾಗಿಯೇ ಉಳಿದಿದೆ.

ಲಾಭ ಬಡುಕ ರೈಲ್ವೇ ಇಲಾಖೆ

2006-07ರ ರೈಲ್ವೆ ಬಜೆಟ್‌ನಲ್ಲಿಯೇ ಮಂಗಳೂರು-ಬೆಂಗಳೂರು ಸೇರಿದಂತೆ ನಾಲ್ಕು ರೈಲ್ವೆ ಸಂಚಾರವನ್ನು ರೈಲ್ವೆ ಸಚಿವರು ಪ್ರಕಟಿಸಿದ್ದರು. ಮಂಗಳೂರು-ಹಾಸನ ನಡುವೆ ರೈಲ್ವೆ ಟ್ರ್ಯಾಕ್ ಸಿದ್ಧಗೊಂಡು ಇಂದಿಗೆ ಒಂದು ವರ್ಷ ಸಂದಿದೆ. 2007 ಮೇ 5 ರಂದು ರೈಲ್ವೆ ಸುರಕ್ಷತಾ ಆಯುಕ್ತರು ರೈಲು ಸಂಚಾರಕ್ಕೆ ಯಾವುದೇ ತಾಂತ್ರಿಕ ತೊಂದರೆಗಳಿಲ್ಲವೆಂದು ಸರ್ಟಿಫಿಕೇಟು ಕೂಡಾ ನೀಡಿದ್ದಾರೆ. ಈ ನಡುವೆ ಹಾಸನ-ಮಂಗಳೂರು ನಡುವೆ ಮಳೆಗಾಲದಲ್ಲಿ ದಿನಕ್ಕೆ ಮೂರು, ಬೇಸಿಗೆಯಲ್ಲಿ 6 ರಿಂದ 7 ಗೂಡ್ಸ್ ರೈಲುಗಳು ಕಳೆದೊಂದು ವರ್ಷದಿಂದ ನಿರಾತಂಕವಾಗಿ ಓಡಾಡುತ್ತಲೇ ಇವೆ. ಇದರಿಂದ ಪ್ರತಿದಿನ ಎರಡು ಕೋಟಿ ರೂಪಾಯಿಗಳ ಆದಾಯ ಬರುತ್ತಿದೆ. ಈ ಮಾರ್ಗದಲ್ಲಿ ರೈಲ್ವೆ ಗೂಡ್ಸ್‌ಗಳ ಮೂಲಕ ಸರಕು ಸಾಗಾಣಿಕೆಗೆ ಎಷ್ಟು ಬೇಡಿಕೆ ಇದೆಯೆಂದರೆ 25 ವರ್ಷಗಳ ಒಪ್ಪಂದಕ್ಕೆ ಸಹಿ ಮಾಡಲು ಉದ್ಯಮಿಗಳು ತುದಿಗಾಲಲ್ಲಿ ನಿಂತಿದ್ದಾರೆ. ಈ ಒಂದು ಮಾರ್ಗದಲ್ಲಿಯೇ ರೈಲ್ವೆ ಇಲಾಖೆಗೆ ವಾರ್ಷಿಕ ರೂ. 250 ಕೋಟಿ ಆದಾಯವಿದ್ದು, ಮುಂದಿನ ದಿನಗಳಲ್ಲಿ ಅದು 300-400 ಕೋಟಿಗೆ ಏರಿಕೆ ಆಗುವುದರಲ್ಲಿ ಅನುಮಾನವಿಲ್ಲ. ಈ ಒಂದು 'ಲಾಭ'ದ ಮೇಲೆ ಆಸೆಯಿಟ್ಟಿರುವ ರೈಲ್ವೆ ಇಲಾಖೆಗೆ ಸದ್ಯ ನಷ್ಟದ ಬಾಬತ್ತಿನ ಪ್ಯಾಸೆಂಜರ್ ರೈಲು ಓಡಾಡಬೇಕಾಗಿಲ್ಲ.



ರೈಲ್ವೆ ಸುರಕ್ಷತಾ ಆಯುಕ್ತರು ಸಕಲೇಶಪುರ-ಸುಬ್ರಹ್ಮಣ್ಯ ನಡುವೆ ರೈಲು ಸಂಚರಿಸುವಾಗ ಸುರಕ್ಷತೆಯ ದೃಷ್ಟಿಯಿಂದ ಯಾವುದೇ ರೈಲು ಕ್ರಾಸಿಂಗ್ ಪಡೆಯಬಾರದು (ರೈಲ್ವೆ ಸುರಕ್ಷತೆಯ ದೃಷ್ಟಿಯಿಂದ) ಎಂಬ ಷರತ್ತನ್ನು ವಿಧಿಸಿದ್ದಾರೆ. ಆದರೆ ವಾಸ್ತವವಾಗಿ ಪ್ಯಾಸೆಂಜರ್ ರೈಲು ಓಡಾಡಿಸಿದರೆ ಲಾಭದಾಯಕ ಗೂಡ್ಸ್ ರೈಲುಗಳ ಸಂಚಾರಕ್ಕೆ ಸಂಚಕಾರ ಒದಗಲಿದೆ ಎಂಬ ಕಾರಣಕ್ಕೇ ಪ್ಯಾಸೆಂಜರ್ ರೈಲಿಗೆ ಸುರಕ್ಷತತೆಯ ನೆಪವೊಡ್ಡಿ 'ಗಣಪತಿ ಮದುವೆ' ಮಾಡುತ್ತಾ ದಿನದೂಡುತ್ತಿದ್ದಾರೆ.

ಇವತ್ತು ಸುಮಾರು 5,000 ಟನ್ ಅದಿರನ್ನು ಈ ಮಾರ್ಗದಲ್ಲಿ ಗೂಡ್ಸ್ ರೈಲುಗಳು ಎಗ್ಗಿಲ್ಲದೇ ಹೊತ್ತು ಸಾಗಿಸುತ್ತಿರಬೇಕಾದರೆ, 1,200 ಟನ್ ಸಾಮರ್ಥ್ಯದ ಪ್ಯಾಸೆಂಜರ್ ರೈಲುಯಾನಕ್ಕೆ ತೊಂದರೆಯಾದರೂ ಹೇಗೆ? ಕಳೆದ ಒಂದು ವರ್ಷದ ಅವಧಿಯಲ್ಲಿ ಒಂದು ಸಲ ಗೂಡ್ಸ್ ರೈಲಿನ ಒಂದು ಬೋಗಿ ಹಳಿತಪ್ಪಿದ ಸಣ್ಣ ಅವಘಡದ ಹೊರತಾಗಿ ಬೇರೇನೂ ಅಪಘಾತ ಸಂಭವಿಸಿಲ್ಲ.

ಹಾಸನ-ಮಂಗಳೂರು ನಡುವೆ ಗೇಜ್ ಪರಿವರ್ತನೆಯಿಂದ ಗೂಡ್ಸ್ ರೈಲುಗಳು ಓಡಾಡುವಂತಾಗಿದೆ. ಸರಕು ಸಾಗಾಣಿಕೆ ವೆಚ್ಚದಲ್ಲಿ 40% ಉಳಿತಾಯವಾಗಿ, ರೈಲ್ವೆ ಇಲಾಖೆಗೂ ಲಾಭವಾಗುತ್ತಿರುವುದು ನಿಜ. ಆದರೆ ಮೀಟರ್‌ಗೇಜ್ ಇದ್ದಾಗ ಪ್ರಯಾಣಿಕರ ಪಾಲಿಗೆ ಇದು ವರದಾನವಾಗಿದ್ದು ಈ ರೈಲು ಮಾರ್ಗ ಇವತ್ತು ಗಗನಕುಸುಮವಾಗಿಯೇ ಉಳಿದಿದೆ. ಇಲ್ಲಿ ರೈಲ್ವೆ ಇಲಾಖೆಗೆ ಪ್ರಯಾಣಿಕರ ಹಿತದೃಷ್ಟಿಗಿಂತಲೂ ಸರಕು ಸಾಗಾಣಿಕೆಯ ಲಾಭವೇ ಮುಖ್ಯವಾಗಿರುವುದು ಒಂದು ದುರಂತ.

ಇದ್ದ ಒಂದು ಮತ್ಸ್ಯಗಂಧಕ್ಕೂ ಕತ್ತರಿ

ಕರಾವಳಿಯ ಜನತೆಗೆ ಒಗ್ಗದ ರೈಲ್ವೆ ಸಂಸ್ಕೃತಿಯೋ, ಜನಪ್ರತಿನಿಧಿಗಳ ಇಚ್ಛಾ ಶಕ್ತಿಯ ಕೊರತೆಯೋ, ಕೇಂದ್ರ ಸರ್ಕಾರದ ಮಲತಾಯಿ ಧೋರಣೆಯ ಫಲವೋ.....

ಮಂಗಳೂರು-ಬೆಂಗಳೂರು ರೈಲ್ವೇ ಯಾನ ಗಗನ ಕುಸುಮವಾಗಿ ಉಳಿದಿರುವಾಗಲೇ ಕರಾವಳಿಯ ಪಾಲಿಗಿದ್ದ ಏಕೈಕ ಮತ್ಸ್ಯಗಂಧ ಎಕ್ಸ್‌ಪ್ರೆಸ್‌ಗೂ ಕತ್ತರಿ ಹಾಕಿರುವ ರೈಲ್ವೆ ಇಲಾಖೆಯು ಗಾಯದ ಮೇಲೆ ಬರೆ ಎಳೆದಿದೆ. ಆ ಮೂಲಕ ರೈಲ್ವೆ ಮಂತ್ರಿ ಲಾಲೂ ಮತ್ತು ರಾಜ್ಯ ಮಂತ್ರಿ ವೇಲು ಸೇರಿ ಕರಾವಳಿಯ ಕನ್ನಡಿಗರ ತಾಳ್ಮೆಯನ್ನು ಪರೀಕ್ಷೆಗೆ ಒಡ್ಡಿದ್ದಾರೆ. ಮಂಗಳೂರು-ಮುಂಬಯಿ ನಡುವಿನ ಏಕೈಕ ಸಂಪರ್ಕ ಸೇತು ಮತ್ಸ್ಯಗಂಧ ರೈಲು ಮಧ್ಯಾಹ್ನ 2.40 ಕ್ಕೆ ಹೊರಟು ಮರುದಿನ ಬೆಳಗ್ಗೆ 6 ಗಂಟೆಗೆ ಮುಂಬಯಿ ತಲುಪುತ್ತಿತ್ತು. ಕಡಿಮೆ ವೆಚ್ಚ ಮತ್ತು ಸಮಯದಲ್ಲಿ ಮುಂಬೈಯನ್ನು ತಲುಪಲಾಗುತ್ತಿದ್ದರಿಂದ, ಬಸ್ಸಿನ ಪ್ರಯಾಣದ ಕಷ್ಟಗಳಿಗೆಲ್ಲಾ ಈ ರೈಲು ಏಕೈಕ ಪರಿಹಾರವಾಗಿತ್ತು.

ಇದೀಗ ರೈಲಿನ ವಿಚಾರದಲ್ಲಿ ಮಾತಿನ ರೈಲು ಬಿಡುತ್ತಲೇ ಬಂದಿರುವ ರಾಜಕಾರಣಿಗಳ 'ಬಚ್ಚಾಸ್'ತನವನ್ನು ನಗದೀಕರಿಸಿರುವ ರೈಲ್ವೆ ಇಲಾಖೆ ಮತ್ಸ್ಯಗಂಧವನ್ನು ತಿರುವಂತಪುರಕ್ಕೆ ವಿಸ್ತರಿಸಿದೆ. ಇದರಿಂದಾಗಿ ಮಂಗಳೂರಿಗೆ ಅದರಲ್ಲಿ 30 ಸೀಟುಗಳ ಪಾಲು ಮಾತ್ರ ಉಳಿದಿದೆ. ಸಾಲದ್ದಕ್ಕೆ, ಮಂಗಳೂರು ಪ್ರದೇಶವು ಕೇರಳ ಅಥವಾ ತಮಿಳುನಾಡಿನ ಒಂದು ಭಾಗವೋ ಎಂಬಂತೆ ಅದರ ನಾಮಫಲಕದಲ್ಲೂ ಮಂಗಳೂರನ್ನು 'ಮಂಗಳಪುರಂ' ಮಾಡಲಾಗಿದೆ. ಇಂತಹ ಅನ್ಯಾಯ ಕೇರಳ ಅಥವಾ ತಮಿಳುನಾಡಿನಲ್ಲಾಗಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು?!

ಕರಾವಳಿಯಲ್ಲಿನ 'ದೇಶಭಕ್ತ' ಸಂಘಟನೆಗಳು ಜಾತಿ-ಧರ್ಮದ ಹೆಸರಲ್ಲಿ ಕಿತ್ತಾಡಿ ರಕ್ತ ಹರಿಸುತ್ತವೆ. ಅದೇ ಬರಬೇಕಾಗಿದ್ದ ರೈಲು ಬಾರದಿದ್ದಾಗ, ಇದ್ದ ಒಂದು ರೈಲನ್ನೂ ಕಿತ್ತುಕೊಂಡಾಗ ಗಟ್ಟಿ ಧ್ವನಿಯಲ್ಲಿ ಪ್ರತಿಭಟಿಸೋದಕ್ಕೆ ಇವರ್‍ಯಾರಿಗೂ ಪುರುಸೊತ್ತೇ ಇಲ್ಲ. ಇಲ್ಲಿನ ಜನಪ್ರತಿನಿಧಿಗಳಂತೂ ಈ ರೈಲು-ಫೈಲುಗಳ ವಿಚಾರದಲ್ಲಿ ನಾಯಿ ಮೊಲೆಯಲ್ಲಿನ ಹಾಲಿನಂತಾಗಿ ಬಿಟ್ಟ ಮೇಲೆ ಇನ್ನು ಕೇಳೋರು ಯಾರು?

ಮಾತಾಡಿ ಸಿಗೇಬೀಳುವ ಯಡ್ಡಿ

ಯಡಿಯೂರಪ್ಪಗೆ ಮಾತು, ಮನಸ್ಸು ಎರಡೂ ಕಂಟ್ರೋಲು ತಪ್ಪಿರುವಂತೆ ಕಾಣುತ್ತಿದೆ. ಅಧಿಕಾರ ರಾಜಕಾರಣದಲ್ಲಿ ಮಾತೇ ಮುತ್ತು, ಕೊಂಚ ಲೆಕ್ಕ ತಪ್ಪಿದರೆ ಮಾತೇ ಮೃತ್ಯುವಾಗಲೂಬಹುದು. ಯಡ್ಡಿ ಈಗ ಮಾತೇ ಮೃತ್ಯುವಾಗುವ ಹಾದಿ ಹಿಡಿದಿದ್ದಾರೆ.



ಮೊನ್ನೆ ಏನಾಯಿತು ನೋಡಿ.

"ಶೋಭಾ ಕರಂದ್ಲಾಜೇನ ಮಂತ್ರಿ ಮಾಡಿ ಅಂತ ನಾನು ದೇವರಾಣೆಗೂ ಕುಮಾರಸ್ವಾಮಿನ ಕೇಳಿರಲಿಲ್ಲ. ಹಾಗಂತ ಧರ್ಮಸ್ಥಳಕ್ಕೆ ಬಂದು ಕುಮಾರಸ್ವಾಮಿ ಆಣೆ ಮಾಡಲಿ ನೋಡೋಣ" ಅಂದರು ಯಡ್ಡಿ.

ಕುಮಾರಸ್ವಾಮಿ ಏನಂದಿದ್ದರು ಎಂಬುದು ನಿಮಗೂ ನೆನಪಿರಬೇಕು!

"ಯಡಿಯೂರಪ್ಪ ಒಂದು ಸಾರಿ ಸೀಕ್ರೆಟಾಗಿ ಬಂದು ಭೇಟಿ ಮಾಡಿ ನನಗೆ ಬಜೆಪಿಲಿದ್ದು ಸಾಕಾಗಿ ಹೋಗಿದೆ. ನಾನು ಪಾರ್ಟಿ ಬಿಟ್ಟು ಬರ್ತೀನಿ, ನನಗೆ ಒಂದು ಮಂತ್ರಿ ಪದವಿ ಕೊಡಿಸಿಬಿಡಿ, ಹಾಗೆ ಈ ಹೆಣ್ಣುಮಗು ಶೋಭಾ ಕರಂದ್ಲಾಜೆಗೂ ಮಿನಿಸ್ಟರ್ ಮಾಡಿ" ಅಂತ ಕೇಳಿದ್ದರೂಂತ.

ಅವತ್ತಿನ ಈ ಸೀಕ್ರೆಟನ್ನ ಇವತ್ತು ಕುಮಾರಸ್ವಾಮಿ ಪ್ರೆಸ್‌ಮೀಟ್‌ನಲ್ಲೇ ಹೇಳಿ ಜನರಿಗೆ ತಲುಪುವಂತೆ ನೋಡಿಕೊಂಡರು.

ರಾಜಕೀಯ ತಂತ್ರಗಾರಿಕೆ ಏನೇನಿರುತ್ತೆ ಅನ್ನೋದು ಯಡ್ಡಿಗೆ ಹೇಗೆತಾನೆ ಅರ್ಥವಾಗಬೇಕು. ಇದನ್ನು ನಿರ್ಲಕ್ಷಿಸಿದಿದ್ದರೆ ಯಡ್ಡಿ ಬಗ್ಗೆ ಇದ್ದ ಜನರ ಸಿಂಪಥಿ ಹಾಗೇ ಉಳಿದಿರುತ್ತಿತ್ತೇನೋ ಆದರೆ ಯಡ್ಡಿ ಕುಮಾರಸ್ವಾಮಿ ಒಡ್ಡಿದ ಬಲೆಗೆ ಮತ್ತೆಮತ್ತೆ ಬೀಳುತ್ತಲೇ ಇದ್ದಾರೆ. ಶೋಭಾ ಬಗ್ಗೆ ಯಡ್ಡಿ ಈಗ ಏನೇ ಸಮಜಾಯಿಷಿ ಕೊಟ್ಟರೂ ಜನ ಅದನ್ನೇ ಮನರಂಜನೆ ರೀತಿ ಮಾತಾಡಿ ಆನಂದಿಸುತ್ತಾರೆ. ಸಿಂಪಥಿ ಇದ್ದ ಜಾಗದಲ್ಲಿ ಗೇಲಿ ಮಾತು ಬರುತ್ತದೆ.

ಇಷ್ಟಕ್ಕೂ ಕುಮಾರಸ್ವಾಮಿಗೆ ಬೇಕಿರುವುದು ಇದೇ ತಾನೆ?

ಇಲ್ಲಿ ಇನ್ನೊಂದು ಮಜಾ ವಿಚಾರವೂ ಇದೆ.

ಯಡ್ಡಿ ಶೋಭಾರ ಮಂತ್ರಿಗಿರಿ ಬೇಡಿಕೆ ಬಗ್ಗೆ ಜನರಿಗೆ ಮಾಹಿತಿ ಸರಬರಾಜು ಮಾಡುತ್ತಿರುವ ಕುಮಾರಸ್ವಾಮಿ ತಾನೇ ಸ್ವತಃ ನಟ ರಾಧಿಕಾಳ ಅನೇಕ ಬೇಡಿಕೆಗಳನ್ನು ಈಡೇರಿಸಿದ್ದಾರೆ. ಇದು ರಾಜ್ಯದ ಜನರಿಗೆಲ್ಲಾ ಗೊತ್ತು. ಮುಖ್ಯವಾಗಿ ಕಸ್ತೂರಿ ಟಿವಿ ಚಾನಲ್‌ನವರಿಗಂತೂ ಗೊತ್ತೇಗೊತ್ತಿರುತ್ತದೆ. ಹೀಗಿರುವಾಗ ಬಜೆಪಿಯ ತುಂಡು ಲೀಡರ್ ಒಬ್ಬ ಪ್ರತಿದಾಳಿ ನಡೆಸಲೋ ಇಲ್ಲ ಕುಮಾರಸ್ವಾಮಿ ಬಾಯಿ ಮುಚ್ಚಿಸಲೋ ಈ ವಿಚಾರವನ್ನು ಹೇಗೋ ಉಪಾಯವಾಗಿ ಪ್ರಸ್ತಾಪಿಸಬಹುದಿತ್ತು. ಆದರೆ ಬೆಪ್ಪುತಕ್ಕಡಿ ಬೋಳೆಶಂಕರ ಯಡ್ಡಿಗೆ ಇಂಥ ಟ್ರಿಕ್ಕುಗಳು ಹೊಳೆಯುವುದಿಲ್ಲ, ಬದಲಾಗಿ ಕುಮಾರಸ್ವಾಮಿ ಶೋಭಾ ಬಗ್ಗೆ ಬರೀ ಎರಡು ಮಾತಾಡಿದರೆ ಈ ಯಡ್ಡಿ ಅದಕ್ಕೆ ಇಪ್ಪತ್ತು ಮಾತಿನ ಸಮಜಾಯಿಷಿ ಕೊಡಲು ಹೋಗಿ ನಗೆಪಾಟಲಿಗೀಡಾಗುತ್ತಿದ್ದಾರೆ.





ಅಷ್ಟೇ ಅಲ್ಲ, ಬಜೆಪಿಯ ಬೇರೆ ಯಾವ ನಾಯಕರೂ ಈಗ ಶೋಭಾ ವಿಚಾರಬಂದರೆ ಯಡ್ಡಿ ಬೆಂಬಲಕ್ಕೆ ನಿಲ್ಲುತ್ತಿಲ್ಲ. ಯಡ್ಡಿ ಪಾರ್ಟಿ ಬಿಟ್ಟು ಬರಲು ರೆಡಿಯಾಗಿದ್ದರೆಂದು ಕುಮಾರಸ್ವಾಮಿ ಗೇಲಿ ಮಾಡಿದಾಗಲೂ ಬಜೆಪಿ ಲೀಡರ್‌ಗಳು ಯಡ್ಡಿ ರಕ್ಷಣೆಗೆ ಬಂದಿರಲಿಲ್ಲ. ಪಾಪ ಕೊನೆಗೆ ಯಡ್ಡಿಯೇ "ಹೌದು ನನ್ನಿಂದ ಮಹಾಪರಾಧವಾಯ್ತು" ಎಂದು ಒಪ್ಪಿಕೊಂಡಿದ್ದರು.

ಈ ಯಡ್ಡಿ ಒಂದು ಕಡೆ ಸರಿಯಾಗಿ ನಿಂತರೆ ತಾನೆ ಅವರಿಗೆ ಸಾಲಿಡ್ಡಾದ ಬೆಂಬಲ ಸಿಗುವುದು. "ನನಗೆ ಮೋಸ ಮಾಡಿಬಿಟ್ಟರು, ಇಗೋ ಈಗಲೇ ಧರ್ಮಯುದ್ಧ ಯಾತ್ರೆಗೆ ಹೊರಟೆ" ಅಂತ ತುಮಕೂರಿನವರೆಗೂ ಹೋಗಿ ಜೆಡಿಎಸ್‌ನ ಯಾವನೋ ತುಂಡು ಲೀಡರ್ ಫೋನ್ ಮಾಡಿದನೆಂದು ಬೆಂಗಳೂರಿಗೆ ಓಡಿಬಂದಿದ್ದರು. ಜೊತೆಗಿದ್ದ ಇನ್ನೊಬ್ಬ ಅವಿವೇಕಿ ಸದಾನಂದಗೌಡರಿಗೂ ಕುಮಾರಸ್ವಾಮಿಯ ಈ ಕುತಂತ್ರ ಗೊತ್ತಾಗಿರಲೇ ಇಲ್ಲ.

ಆಮೇಲೇನಾಯಿತು ನೋಡಿ.

ಯಡ್ಡಿ ಇವತ್ತಿಗೂ "ನಾನು ತುಮಕೂರಿನಿಂದ ಅಧಿಕಾರದ ಆಸೆಗಾಗಿ ಬೆಂಗಳೂರಿಗೆ ಓಡಿಬರಲಿಲ್ಲ" ಅನ್ನೋ ಸಮಜಾಯಿಷಿ ಕೊಡುತ್ತಲೇ ಇದ್ದಾರೆ.

ಆದರೆ ಜನ ನಂಬುತ್ತಾರಾ?

ಈಗ ಮತ್ತೆ ಕುಮಾರಸ್ವಾಮಿ 'ಶೋಭಾಗೆ ಮಂತ್ರಿ ಮಾಡಿ ಅಂತ ಯಡ್ಡಿ ಬಂದಿದ್ದರು' ಎಂದಿದ್ದಾರೆ. ಹಾಗೆ ನೋಡಿದರೆ ಇದೇನು ಭ್ರಷ್ಟಾಚಾರವೋ, ವಂಚನೆಯಂಥ ಆರೋಪವೂ ಅಲ್ಲ, ಕೇವಲ ಯಡ್ಡಿಯನ್ನು ಇಕ್ಕಟ್ಟಿಗೆ ಸಿಕ್ಕಿಸುವ ಮಾತಿನ ಬಲೆ ಅಷ್ಟೇ.

ಇಷ್ಟೂ ಗೊತ್ತಾಗದ ಯಡ್ಡಿ ಕಂಡಕಂಡ ದೇವರ ಮೇಲೆಲ್ಲಾ ಆಣೆ ಮಾಡಿ 'ನನ್ನ ನಂಬಿ' ಅಂದರೆ ಜನ ಯಾಕೆ ನಂಬುತ್ತಾರೆ, ಅವರೇನು ಯಡ್ಡಿ ಥರ ಬೆಪ್ಪುತಕ್ಕಡಿಗಳಾ?

ಯಡ್ಡಿಗೆ ಈಗ ಒಂದು ಉದ್ರಿ ಸಲಹೆ ಕೊಡಬೇಕೆಂದರೆ ಸದ್ಯದಲ್ಲೇ ರವಿ ಬೆಳಗೆರೆಯ 'ಮುಖ್ಯಮಂತ್ರಿ ಇನ್ ಲವ್-ರಾಧಿಕ ನಿನ್ನ ಸರಸವಿದೇನೆ' ಎಂಬ ಸಿನಿಮಾ ಶೂಟಿಂಗ್ ಶುರುವಾಗಲಿದೆ.

ಸೇಡು ತೀರಿಸಿಕೊಳ್ಳುವ ಆಸೆ ಇದ್ದರೆ, ಯಡ್ಡಿಗೆ **sense of humour** ಇರೋದೆ ನಿಜವಾದರೆ, ಕುಮಾರಣ್ಣ ಮುಟ್ಟಿನೋಡಿಕೊಳ್ಳುವಂಥ ಪ್ರತಿ ಏಟು ನೀಡುವುದಾದರೆ....

ಯಡ್ಡಿ ಈ ಸಿನಿಮಾ ಕ್ಲಾಪ್ ಮಾಡಿ ಅದಕ್ಕೆ ಭಾರಿ ಪ್ರಚಾರ ಗಿಟ್ಟಿಸಿಕೊಳ್ಳಬಹುದು.

ಏನಂತೀರಾ?


-ಈಶ

ಚಿಗಟೇರಿ ಆಸ್ಪತ್ರೆ ಅಧಿಕಾರಿಗಳ ನಾಯಿಜಗಳ

ದಾವಣಗೆರೆ

ಚಿಗಟೇರಿ ಆಸ್ಪತ್ರೆಗೆ ಈಗಾಗಲೇ ಅಂಟಿಕೊಂಡಿರುವ ರೋಗಗಳೇ ಈ ಅಸ್ಪತ್ರೆಗೆ ಬಂದ ರೋಗಿಗಳನ್ನು ಕಿತ್ತು ತಿನ್ನುತ್ತಿದ್ದವು. ಅಂತಾದ್ದರಲ್ಲಿ ಆಸ್ಪತ್ರೆಯ ಅಧೀಕ್ಷಕ ಕುರ್ಚಿಗಾಗಿ ನಡೆಯುತ್ತಿರುವ ಕದನದಿಂದಾಗಿ ರೋಗಿಗಳಷ್ಟೇ ಅಲ್ಲ ಸಿಬ್ಬಂದಿ ಕೂಡ ಕಷ್ಟಗಳನ್ನು ಅನುಭವಿಸುವಂತಾಗಿದೆ. ಈಗ ನಡೆಯುತ್ತಿರುವ ಎರಡನೇ ಇನ್ನಿಂಗ್ಸ್ ಕುರ್ಚಿ ಕಾದಾಟದಿಂದಾಗಿ ಸಾರ್ವಜನಿಕರೂ ಎದ್ದು ಬಿದ್ದು ನಗುವಂತಾಗಿದೆ. ಪೊಲೀಸ್ ಅಧಿಕಾರಿಯೊಬ್ಬ ಕುರ್ಚಿ ಬಿಟ್ಟು ಕೊಡದಿದ್ದರೆ ಬಂಧಿಸುತ್ತೇನೆಂದು ಬೆದರಿಸಿರುವ ಘಟನೆಯೂ ನಿನ್ನೆ (ದಿನಾಂಕ 17-10-2007) ಬೆದರಿಕೆಗೊಳಗಾದ ಅಧೀಕ್ಷಕ ಜಿಲ್ಲಾದಿಕಾರಿ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ದೂರು ಸಲ್ಲಿಸುವವರೆಗೂ ಮುಂದುವರೆದಿದೆ. ಈಗ ಅಧೀಕ್ಷಕ ಕುರ್ಚಿಯಲ್ಲಿ ಕುಳಿತಿರುವ ಶೀತಲ್ .ಬಿ. ಹಿರೇಗೌಡರ್ ಈ ಹಿಂದೆ ಅಧೀಕ್ಷಕನಾಗಿದ್ದಾಗ ಜಿಲ್ಲಾಧಿಕಾರಿಯೊಂದಿಗೆ ಅಲಿಖಿತ ಒಪ್ಪಂದ ಮಾಡಿಕೊಂಡು ರೋಗಿಗಳಿಂದ ಹಣ ಸಂಗ್ರಹಿಸುವ ಟೆಂಡರ್ ಅನ್ನೇ ಖಾಸಗಿಯವರಿಗೆ ಕೊಡಲು ಮುಂದಾಗಿದ್ದು ಮತ್ತು ಆರೋಗ್ಯ ರಕ್ಷಾ ನಿಧಿಯ ಹಣವನ್ನ ಆಸ್ಪತ್ರೆಯ ಕಾಂಪೌಂಡ್ ಕಟ್ಟಿಸಿ ಕಮೀಷನ್ ಹೊಡೆಯಲು ಬಳಸಿದ್ದರ ಬಗ್ಗೆ ಈಗಾಗಲೇ ಲಂಕೇಶ್ (ಈ ವರ್ಷದ ವಿಶೇಷ ಸಂಚಿಕೆಯಲ್ಲಿ) ವಾರಪತ್ರಿಕೆಯಲ್ಲಿ ವರದಿಯಾಗಿದೆ. ಕುರ್ಚಿಯನ್ನು ಮರಳಿ ಪಡೆಯಬೇಕೆನ್ನುವ ಮರೆಕ್ಕನವರ ತನ್ನ ಜಾತಿಯ ಬಲದಿಂದ ಹಿರೇಗೌಡನ ಹುದ್ದೆಯ ಬುಡ ಅಲ್ಲಾಡಿಸಲು ಇನ್ನಿಲ್ಲದ ಕಸರತ್ತು ನಡೆಸಿದ್ದಾನೆ. ಒಟ್ಟಿನಲ್ಲಿ ದಾವಣಗೆರೆ ಈ ಇಬ್ಬರ ಕಿತ್ತಾಟದ ಬಗ್ಗೆ ಒಸುಗುಡುತ್ತಿದೆ.

ಈಗ್ಗೆ ನಾಲ್ಕು ತಿಂಗಳ ಹಿಂದೆ, ಚಿಗಟೇರಿ ಆಸ್ಪತ್ರೆಯ ಅಧೀಕ್ಷಕನಾಗಿದ್ದ ಶೀತಲ್ ಬಿ. ಹಿರೇಗೌಡರ್ ಎಂಬಾತ ಕುಟುಂಬ ಕಲ್ಯಾಣ ಇಲಾಖೆಗೆ ವರ್ಗವಾಗಿದ್ದರೂ ಅಧೀಕ್ಷಕ ಕುರ್ಚಿ ಬಿಡುವುದಿಲ್ಲವೆಂದು ರಂಪಮಾಡಿದ್ದ, ಹಾಲಿ ಈಗ ಅಧೀಕ್ಷಕನಾಗಿರುವ ಡಾ. ಮರೆಕ್ಕನ್ನವರ್ ಎಂಬಾತ ಸರ್ಕಾರಿ ಆದೇಶ ಪಡೆದು ಶೀತಲ್ ಬಿ. ಹಿರೇಗೌಡರ್‌ರನ್ನು ಅಧೀಕ್ಷಕ ಕುರ್ಚಿಯಿಂದ ಬಿಡುಗಡೆಗೊಳಿಸಿಕೊಂಡು ತಾನು ಅಧೀಕ್ಷಕ ಕುರ್ಚಿಯನ್ನೇರಿದ್ದ, ಅಧೀಕ್ಷಕ ಕುರ್ಚಿಗಾಗಿ ಮೊದಲ ಇನ್ನಿಂಗ್ಸ್ ಕಾದಾಟ ವಾರಗಟ್ಟಲೇ ನಡೆದು ಸಾರ್ವಜನಿಕರಿಗೆ ಸಾಕೆನ್ನಿಸುವಷ್ಟು ತೊಂದರೆ ನೀಡಿತ್ತು. ಇದಾದ ಕೇವಲ ನಾಲ್ಕೇ ತಿಂಗಳಲ್ಲಿ ಎರಡನೇ ಇನ್ನಿಂಗ್ಸ್ "ಕುರ್ಚಿ ಕುಸ್ತಿ" ಪ್ರಾರಂಭವಾಗಿದೆ. ನ್ಯಾಯಾಲಯ ತನಗೆ ಆದೇಶ ನೀಡಿದೆಯೆಂದು ಶೀತಲ್ ಬಿ. ಹಿರೇಗೌಡನೇ ಈಗ ಅಧೀಕ್ಷಕನಾಗಿರುವ ಮರೆಕ್ಕನ್ನವರ್‌ರನ್ನು ಕುರ್ಚಿಯಿಂದೆಬ್ಬಿಸಿ ತಾನು ಕುಳಿತಿದ್ದಾನೆ. ಆದರೆ ಸರ್ಕಾರದ ಆದೇಶ ಬರುವವರೆಗೂ ತಾನು ಇಲ್ಲಿಂದ ಕದಲುವುದಿಲ್ಲವೆಂದು ಮರೆಕ್ಕನವರ್ ಹಿರೇಗೌಡನ ಪಕ್ಕದಲ್ಲೇ ತಾನು ಒಂದು ಕುರ್ಚಿ ಹಾಕಿಸಿಕೊಂಡು ಕುಳಿತಿದ್ದಾನೆ. ಈ ಇಬ್ಬರನ್ನೂ ಮಾತನಾಡಿಸಲು ಹೋದ ಈ ವರದಿಗಾರರ ಹತ್ತಿರ ಸ್ಪರ್ಧೆಗಿಳಿದವರೆಂಬಂತೆ ಶೀತಲ್ ಬಿ. ಹಿರೇಗೌಡರ್ ಮತ್ತು ಮರೆಕ್ಕನ್ನವರ್ ಇಬ್ಬರೂ ತಮ್ಮ ಅಭಿಪ್ರಾಯ- ಭಿನ್ನಾಭಿಪ್ರಾಯಗಳನ್ನು ಮಂಡಿಸಿದರು. "ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆ.ಎ.ಟಿ)ಯ ನ್ಯಾಯಾದೇಶ ನನ್ನ ಪರವಾಗಿದೆ- ಇದಕ್ಕೆ ಬೆಲೆ ನೀಡಬೇಕು" ಎಂದು ನಾಲ್ಕೈದು ಸಾಲುಗಳನ್ನು ಓದಿ ಅದನ್ನು ಕೈಗೆ ಕೊಡದೇ ಗಾಳಿಯಲ್ಲೇ ಆಡಿಸಿ ಹಿರೇಗೌಡರ ತೋರಿಸುತ್ತಾರೆ.



ಕುರ್ಚಿಯ ಆಸೆಗಾಗಿ ಕಚ್ಚಾಡುತ್ತಿರುವ ಅಧಿಕಾರಿಗಳು

"ಈ ಬಗ್ಗೆ ನನಗೆ ಸರ್ಕಾರದ ಆದೇಶ ಬಂದಿಲ್ಲ, ಆದೇಶ ಬಂದರೆ ನಾನು ಇಲ್ಲಿಂದ ಹೊರಗೆ ಹೋಗುತ್ತೇನೆ... ಕೋರ್ಟು ನನ್ನನ್ನು ಅಪಾಯಿಂಟ್ ಮಾಡಿಕೊಂಡಿಲ್ಲ, ಸರ್ಕಾರದ ಆದೇಶ ಬರಬೇಕು" ಎಂದು ಮುಂತಾಗಿ ಮರೆಕ್ಕನ್ನವರ್ ಹೇಳುತ್ತಾರೆ. ಇಲ್ಲಿ ಕಂಡ ವಿಚಿತ್ರಗಳೇನೆಂದರೆ, ಇಲ್ಲಿನ ಕೆಲಸಗಾರರು ಮತ್ತು ರೋಗಿಗಳ ಫಜೀತಿಯ ಕುರಿತಾದದ್ದು-ಒಬ್ಬ ಗುಮಾಸ್ತ ಫೈಲು ತೆಗೆದುಕೊಂಡು ಸಹಿಗಾಗಿ ಬಂದರೆ ಹಿರೇಗೌಡ ಮತ್ತು ಮರೆಕ್ಕನ್ನವರ್ ಇಬ್ಬರೂ ಅದನ್ನು ಪಡೆದುಕೊಳ್ಳಲು ಯತ್ನಿಸಿದ್ದು ಯಾರಿಗೆ ಫೈಲ್ ಕೊಡಬೇಕೆಂಬ ಗೊಂದಲದಲ್ಲಿ ಒದ್ದಾಡಿ ಆತ ಮರೆಕ್ಕನ್ನವರಿಗೆ ಆ ಫೈಲನ್ನು ನೀಡಿ ಹಿರೇಗೌಡನ ಕೋಪಕ್ಕೆ ಗುರಿಯಾಗಿದ್ದು, ಕುರ್ಚಿಯಿಂದೆದ್ದರೆ ಕಷ್ಟ ಎಂದು ಈ ಇಬ್ಬರೂ ಅಧಿಕಾರಿಗಳು ಕುರ್ಚಿಗಂಟಿಕೊಂಡೇ ಕುಳಿತಾಗ ಊಟಕ್ಕೆ ಹೋಗಲೂ ಆಗದೇ ನಾಲ್ಕನೇ ದರ್ಜೆ ನೌಕರರು ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದುದು! ಸಹಿ ಮಾಡಲು ಹಾಜರಿ ಪುಸ್ತಕ ಕೊಡುವುದನ್ನು ತಡ ಮಾಡುತ್ತಿದ್ದುದರಿಂದ ಸಿಬ್ಬಂದಿ ವರ್ಗ ಅಸಮಾಧಾನಗೊಳ್ಳುತ್ತಿದ್ದುದು ಮತ್ತು ಆಸ್ಪತ್ರೆಯ ರೋಗಿಗಳು ದಿಕ್ಕೇ ಇಲ್ಲದವರೆಂಬಂತೆ ವಿಕಾರವಾಗಿ ಅರಚಿಕೊಳ್ಳುತ್ತಿದ್ದುದು.

ಜವಾಬ್ದಾರಿ ಯಾರು?

ಹಿರೇಗೌಡರ ಮತ್ತು ಮರೆಕ್ಕನ್ನವರ್ ಅಧೀಕ್ಷಕ ಕುರ್ಚಿಗಾಗಿನ ಕಾದಾಟದಿಂದಾಗಿ ಈ ಇಬ್ಬರ ಬೇಕು-ಬೇಡಗಳ ಆದೇಶದಿಂದಾಗಿ ನಾಲ್ಕನೇ ದರ್ಜೆ ನೌಕರರು ರೋಸಿಹೋಗಿದ್ದಾರೆ. ಫೈಲುಗಳಿಗೆ ಮುಕ್ತಿ ಸಿಗದೇ ಸಿಬ್ಬಂದಿವರ್ಗ ತೊಂದರೆಗೊಳಗಾಗುತ್ತಿದ್ದಾರೆ. ಆಸ್ಪತ್ರೆಯ ಅಧಿಕಾರಿಗಳೇ ಹೀಗೆ ನಾಯಿ-ನರಿಗಳಂತೆ ಕಿತ್ತಾಡುತ್ತಿರುವ ಪರಿಸ್ಥಿತಿಯಿಂದಾಗಿ ವೈದ್ಯರು ಹಾಗೂ ದಾದಿಯರ ಅಲಕ್ಷ್ಯಗೊಳಗಾಗುತ್ತಿರುವ ರೋಗಿಗಳು ಪಡಬಾರದ ಬಾಧೆ ಪಡುತ್ತಿದ್ದಾರೆ. 'ಕೋರ್ಟ್ ಆದೇಶವಿದೆ' ಎಂದು ಒಬ್ಬ ಹೇಳುತ್ತಿದ್ದರೆ, ಇನ್ನೊಬ್ಬ 'ಸರ್ಕಾರದ ಆದೇಶವಿಲ್ಲ' ಎನ್ನುತ್ತಿದ್ದಾನೆ. ಒಟ್ಟಾರೆ ಇಷ್ಟು ದಿನಗಳ ಕಾಲ ಚಿಗಟೇರಿ ಆಸ್ಪತ್ರೆಗೆ ಹಿಡಿದಿದ್ದಕ್ಕಿಂತ 'ದೊಡ್ಡ ರೋಗ' ಈ ಆಸ್ಪತ್ರೆಗೆ ಈಗ ಬಡಿದುಕೊಂಡಿದೆ. ಸರ್ಕಾರವೇ ಇಲ್ಲದ ಈ ಪರಿಸ್ಥಿತಿಯಲ್ಲಿ 'ಪ್ರಿನ್ಸಿಪಲ್ ಸೆಕ್ರೆಟರಿ' ಆದೇಶವನ್ನು ಮರೆಕ್ಕನ್ನವರ್ ಕಾಯುತ್ತಿದ್ದಾನೆ, 'ಕೆ.ಎ.ಟಿ. ಆದೇಶದ ಮುಂದುವರಿಕೆ' ಯನ್ನು ಹಿರೇಗೌಡರ್ ಕಾಯುತ್ತಿದ್ದಾನೆ. ರೋಗಿಗಳು ಮಾತ್ರ ತೊಂದರೆಗೊಳಗಾಗುತ್ತಲೇ ಇದ್ದಾರೆ. ಇದನ್ನು ಸರಿಪಡಿಸುವ ಜವಾಬ್ದಾರಿ ಯಾರದು? ಸರ್ಕಾರವಿಲ್ಲದಿದ್ದರೂ ಆಡಳಿತ ನಡೆಸುವವರು ಇದ್ದಾರಲ್ಲ? ಅವರು ಈ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಾರೆಯೇ?

-ಚಂದ್ರಶೇಖರ ತೋರಣಘಟ್ಟ


ಕರ್ನಾಟಕದ ಜನರಿಗೆ ಇಲ್ಲಿ ಎರಡು ಸುದ್ದಿಗಳಿವೆ. ಒಂದು, ಮುಂದಿನ ಜೂನ್ ವೇಳೆಗೆ ವಿಧಾನಸಭಾ ಚುನಾವಣೆ ಬರಲಿದೆ. ಇದು ತೀರಾ ಒಳ್ಳೆಯ ಸುದ್ದಿ ಅಲ್ಲವಾದರೂ ಕೆಟ್ಟ ವಿಚಾರವಂತೂ ಅಲ್ಲ. ಆದರೆ ಪೂರಾ ಕೆಟ್ಟ ಸುದ್ದಿ ಇನ್ನೊಂದಿದೆ.

ಅದು,

ಎಸ್.ಎಂ. ಕೃಷ್ಣ ರಾಜ್ಯ ರಾಜಕೀಯಕ್ಕೆ ಮರಳಿ ಬರಲು ರೆಡಿಯಾಗುತ್ತಿದ್ದಾರೆ. ಈ ಕಡು ಭ್ರಷ್ಟ, ನಾಟಕ ಸುಬ್ಬ ಅರೆ ಕೋಮುವಾದಿಯೇನಾದರೂ ಮತ್ತೆ ಕರ್ನಾಟಕದ ರಾಜಕೀಯಕ್ಕೆ ಕಾಲಿಟ್ಟರೆ ಕಾಂಗ್ರೆಸ್ ಪಾಲಿಗೆ ಅದೇ ಶಾಪವಾಗಲಿದೆ. ಹಾಲಿ ಮಹಾರಾಷ್ಟ್ರ ರಾಜ್ಯಪಾಲರಾಗಿರುವ ಕೃಷ್ಣ ತಿಂಗಳಿಗೆ ನಾಲ್ಕು ಬಾರಿ ಬೆಂಗಳೂರಿಗೆ ಬಂದು ಇಲ್ಲಿನ ರಾಜಕೀಯದಲ್ಲಿ ಕಡ್ಡಿ ಆಡಿಸಿ ಹೋಗುತ್ತಿದ್ದಾರೆ. ತನ್ನ ಹುದ್ದೆಯ ಬೆಲೆ, ಗೌರವ ಹಾಗೂ ಮಿತಿಗಳನ್ನು ಲೆಕ್ಕಿಸದ ಈ ಅವಿವೇಕಿ ನಾಯಕನನ್ನು ಕಾಂಗ್ರೆಸ್ ಹೈಕಮಾಂಡ್ ಸದ್ಯಕ್ಕೆ ಉತ್ತೇಜಿಸದೆ ಮೌನವಾಗಿದೆ. ಅದೊಂದೇ ಸಮಾಧಾನದ ವಿಚಾರ.

ಈ ನಡುವೆ ಕಾಂಗ್ರೆಸ್-ಜೆಡಿಎಸ್ ಮರುಮೈತ್ರಿ ಎಂದು ಹಾರಾಡುತ್ತಿದ್ದವರೆಲ್ಲಾ ಈಗ ತಣ್ಣಗಾಗಿದ್ದಾರೆ. ಕಾಂಗ್ರೆಸ್ಸೊಳಗೆ ಎಂ.ವಿ. ರಾಜಶೇಖರನ್, ಖರ್ಗೆ, ಕೆ.ಎಚ್. ಮುನಿಯಪ್ಪನಂಥವರಿಗೆ 'ತಾವೇ ಸಿಎಂ ಆಗುವುದಾದರೆ ಮೈತ್ರಿ ಆಗೇ ಬಿಡಲಿ' ಎಂಬ ಒಳಾಸೆ. ಮತ್ತೊಂದೆಡೆ ಡಿ.ಕೆ., ಸಿದ್ಧರಾಮಯ್ಯ ಮೈತ್ರಿ ಬೇಕಿಲ್ಲ ಎನ್ನುತ್ತಿದ್ದಾರಾದರೂ ಅಷ್ಟೇ ಗಟ್ಟಿಧ್ವನಿಯಲ್ಲಿ ಕೃಷ್ಣನೂ ಬೇಕಿಲ್ಲ ಎನ್ನುತ್ತಿಲ್ಲ.

ಈ ನಡುವೆ ಈ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಎಂಬುದು ಬರೀ ಗಾಳಿಸುದ್ದಿ ಇರಬಹುದಾ ಎಂಬ ಅನುಮಾನ ಗಟ್ಟಿಯಾಗುತ್ತಿದೆ.




ಬರಲಿದೆ ಚುನಾವಣೆ

ಕಾಂಗ್ರೆಸ್‌ಗೆ ಕೃಷ್ಣನೇ ಶನಿ

ಮತಿಗೆಟ್ಟ ಜೆಡಿಎಸ್ ಶಾಸಕರು

ಬಹುಶಃ ಜೆಡಿಎಸ್ ಶಾಸಕರಂಥ ಗುಗ್ಗುಗಳು ಇಡೀ ಭಾರತ ದೇಶದಲ್ಲಿ ಎಲ್ಲಿ ಹುಡುಕಿದರೂ ಸಿಗಲಾರರು. ಅವರು ಈಗಲೂ ಕಾಂಗ್ರೆಸ್ ಅಥವಾ ಬಿಜೆಪಿ ಜೊತೆ ಮೈತ್ರಿ ಆಗಬಹುದು ಎಂದು ಕನಸು ಕಾಣುತ್ತಿದ್ದಾರೆ. ಮೊನ್ನೆ ಶುಕ್ರವಾರದ ದಿನಪತ್ರಿಕೆಗಳಲ್ಲಿ ಬಿಜೆಪಿಯನ್ನು ಹೀನಾಮಾನ ಬೈಯ್ದು ಪ್ರಕಟವಾಗಿರುವ ಜೆಡಿಎಸ್ ಜಾಹೀರಾತನ್ನು ನೋಡಿದ ಮೇಲೂ ಅವರ ಭ್ರಮೆ ಕರಗದಿದ್ದರೆ ಅವರನ್ನು ಯಾರೂ ಕಾಪಾಡಲು ಸಾಧ್ಯವಿಲ್ಲ. ಇನ್ನೊಂದು ತಮಾಷೆ ಏನೆಂದರೆ ಕಾಂಗ್ರೆಸ್ ಜೊತೆಗಿನ ಮರುಮೈತ್ರಿ ಬಗ್ಗೆ ಆಯುಧ ಪೂಜೆ ಆದನಂತರ ದೇವೇಗೌಡರು ನಿರ್ಧಾರ ಪ್ರಕಟಿಸುತ್ತಾರೆ ಎಂದು ಜೆಡಿಎಸ್ ಹೇಳುತ್ತಿದೆ.




ಆದರೆ ವಾಸ್ತವ ಪರಿಸ್ಥಿತಿ ಹೀಗಿಲ್ಲ, ಅಂತಹ ತೀರ್ಮಾನ ತೆಗೆದುಕೊಳ್ಳುವ ಅವಕಾಶ ಸೋನಿಯಾ ಗಾಂಧಿಗೆ ಮಾತ್ರ ಇದೆ. ದೇವೇಗೌಡರಿಗಲ್ಲ, ಗೌಡ ಈಗ ಹಲ್ಲು ಕಿತ್ತ ಹಾವು ಮಾತ್ರ.

ಹೀಗೆ ಬಿಜೆಪಿ ಜೊತೆ ಬೀದಿ ಜಗಳಕ್ಕೆ ನಿಂತಿರುವ ಕಾರಣ ದಳ-ಬಿಜೆಪಿ ಮರುಮೈತ್ರಿ ಸದ್ಯಕ್ಕಂತೂ ಅಸಾಧ್ಯ. ಜನರ ಸಿಂಪಥಿ ತನ್ನ ಕಡೆಗಿದೆ ಎಂದು ಫುಲ್ ಖುಷಿಯಾಗಿರುವ ಬಿಜೆಪಿಗೆ ತಿರುಗಾ 8-10 ತಿಂಗಳ ಅಧಿಕಾರಕ್ಕಾಗಿ ಬೇಡಿಕೊಂಡು ಜೆಡಿಎಸ್ ಜೊತೆಗೆ ಈ ಹಂತದಲ್ಲಿ ಹೋದರೆ ಜನ ಕ್ಯಾಕರಿಸಿ ಉಗಿಯುತ್ತಾರೆ ಎಂಬುದು ಅರ್ಥವಾಗಿದೆ. ಕುರ್ಚಿ ಕಂಡರೆ ಕೋತಿಯಂತಾಡುವ ಅಂಥ ಯಡ್ಡಿಯೇ ಈಗ 'ಹಾಕತ್ತಿದ್ರೆ ಚುನಾವಣೆಗೆ ಬನ್ನಿ' ಎನ್ನುತ್ತಿದ್ದಾರೆಂದರೆ ಬಿಜೆಪಿ ಹೈ ಕಮಾಂಡ್ ಲೆಕ್ಕಾಚಾರ ಏನೆಂಬುದು ಸ್ಪಷ್ಟ.



ಎಲೆಕ್ಷನ್ ನಡೆದರೆ ಬಿಜೆಪಿಗೇ ಮೆಜಾರಿಟಿ ಬರೋ ಅವಕಾಶ ಇರುವಾಗ ಆತುರ ಪಟ್ಟು, ಗೋತ್ರ, ಕೆಡಿಸಿಕೊಳ್ಳೋದ್ಯಾಕೆ ಅಂತ ಬಿಜೆಪಿ ಯೋಚಿಸುತ್ತಿದೆ.

ಗೌಡರಿಗೆ ಹೀಗೆ ವಚನಭಂಗದ ಒಂದು ಬಕ್ಕಟ್ಟು ಬಂದೆಯಂತೆ ಹೆಗಲೇರಿಕೊಂಡಿದೆ. ಅದಕ್ಕೆ ಬಿಸಿ ಮುಟ್ಟಿಸುದಂತೆ ಕಾಂಗ್ರೆಸ್ ಕೂಡ ಗೌಡರತ್ತ ಮುಖ ಕೊಟ್ಟು ಮಾತಾಡುತ್ತಿಲ್ಲ, ಭ್ರಷ್ಟರು, ವಂಚಕರು ತುಂಬಿರುವ ಜೆಡಿಎಸ್ ಜೊತೆ ಈಗ ಹೋದರೆ ನಾಳಿನ ಎಲೆಕ್ಷನ್‌ನಲ್ಲಿ ಅದೇ ಬಿಜೆಪಿಗೂ advantage ಆಗುತ್ತದೆ. 'ಜೆಡಿಎಸ್ ಜೊತೆಗೆ ಕಾಂಗ್ರೆಸ್ಸನವರೂ ಅವಕಾಶವಾದಿಗಳೆಂದು ಬಿಜೆಪಿಗಳು ಬೀದಿಬೀದಿಯಲ್ಲಿ ಪ್ರಚಾರ ಮಾಡಿ ಬಿಡುತ್ತಾರೆಂಬ ಭಯ ಕಾಂಗ್ರೆಸ್‌ಗಿದೆ.



ಇದೊಂಥರ 'ಹರ್ಷದ ಕೂಳಿಗೆ ಆಸೆ ಪಟ್ಟು ವರ್ಷದ ಕೂಳು ಕಳೆದುಕೊಂಡಂತಾದರೆ' ಎಂಬ ಥರದ ಭೀತಿ. ಇಷ್ಟಾದರೂ ಸಿಎಂ ಗಿರಿ ಆಕಾಂಕ್ಷಿಗಳಾದ ಕೆಲ ಕಾಂಗ್ರೆ ನಾಯಕರ ದೂತರು ಕಳೆದೆರಡು ದಿನಗಳಿಂದ ಗೌಡರ ಮನೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅದರಲ್ಲಿ ಮೆರಿಟ್ ಅಭ್ಯರ್ಥಿಗಳೂ, ಪೇಮೆಂಟ್ ಸೀಟ್ ಗಿರಾಕಿಗಳೂ ಇದ್ದಾರೆ. ನಾಳೆ ಹೈಕಮಾಂಡ್ ಮೈತ್ರಿ ಆಗಲಿ ಅಂದುಬಿಟ್ಟರೆ ಗೌಡರನ್ನು ಸರಿ ಮಾಡಿಕೊಳ್ಳಬೇಕಲ್ಲ!

ಖರ್ಗೆಯಂಥ ಹಿರಿಯ ನಾಯಕರೂ ಸೀನಿಯಾರಿಟಿ-ಪೇಮೆಂಟ್ ಈ ಎರಡೂ ದಾರಿಯಲ್ಲಿ ಕಾಲು ಮುಂದಿಡುತ್ತಿರುವುದು ಈಗ ಜಗಜ್ಜಾಹೀರಾದ ವಿಚಾರ. ಗತಿಗೆಟ್ಟು, ಬೀದಿ ಪಾಲಾಗುವ ಭೀತಿಯಲ್ಲಿರುವ ದಳ ಶಾಸಕರಿಗೀಗ ದೈನೇಸಿ ಪರಿಸ್ಥಿತಿ. ಕೇವಲ ಒಂದು ತಿಂಗಳ ಹಿಂದೆ ತಾವೇನೊ ಮಹಾನ್ ತಂತ್ರಗಾರಿಕೆ ಮಾಡಿದವರಂತೆ ಬಿಜೆಪಿಗೆ ಕೈಕೊಟ್ಟು ನಲಿಯುತ್ತಿದ್ದ ಇವರ ಮುಖದಲ್ಲೆಲ್ಲಾ ಈಗ ಪ್ರೇತಕಳೆ ಸುರಿಯುತ್ತಿದೆ.



ರೆಸಾರ್ಟ್ ಖರ್ಚು ಕೊಟ್ಟಿದ್ದಾರು?

ಜೆಡಿಎಸ್‌ನ ಸಂಭವನೀಯ ವಿಭಜನೆ ತಪ್ಪಿಸಲು ಗೋಲ್ಡನ್ ಪಾಮ್ ರೆಸಾರ್ಟ್‌ನಲ್ಲಿ ದಳ ಶಾಸಕರ ಸಭೆ ನಡೆಸಲಾಯಿತಷ್ಟೇ. ಅಲ್ಲಿ ಎರಡು ದಿನ ಇದ್ದರೂ ಕೂಡ ಅವರು ಕಡಿದುಕಟ್ಟೆ ಹಾಕಿದ್ದು ಏನು ಇಲ್ಲ. ಸಂಜಯ್‌ಖಾನ್‌ನ ಈ ರೆಸಾರ್ಟ್‌ನ ಊಟ ಪ್ಲಸ್ ದಿನದ ಬಾಡಿಗೆಯೇ 30 ಲಕ್ಷ ರೂಪಾಯಿಗಳು. ಅಂದರೆ 2 ದಿನಕ್ಕೆ 60 ಲಕ್ಷ ಆಯಿತು. ಗೌಡರ ಕೃಪೆಗಾಗಿ ಇದನ್ನು ನಿಯತ್ತಾಗಿ ಪಾವತಿಸಿದ್ದು 'ಮುಂಗಾರು ಮಳೆ' ನಿರ್ಮಾಪಕ ಕೃಷ್ಣಪ್ಪ. ಈಗಾಗಲೇ ಒಕ್ಕಲಿಗ ವೇದಿಕೆ ಅದೂ ಇದು ಎಂದು ತಿರುಗುತ್ತಿರುವ ಕೃಷ್ಣಪ್ಪನಿಗೆ ದಳ ಸೇರಿ ಮುಂದೆ ಯಾವುದಾದರೂ ಕುರ್ಚಿ ಹೊಡೆದುಕೊಳ್ಳಬೇಕೆಂಬ ಆಸೆ ಹುಟ್ಟಿಕೊಂಡಿದೆ. ಗೌಡರಿಗೂ ಹಣವಿರುವ ಇಂಥ ಕುರಿಗಳು ತಾನೇ ಬೇಕು! ಆದರೆ ರೆಸಾರ್ಟ್ ಖರ್ಚು ಕೃಷ್ಣಪ್ಪ ಕೊಟ್ಟರೂ ಸಹ ಕುಮಾರಸ್ವಾಮಿ ಕೈಯಿಂದ ಕನಿಷ್ಠ 40 ಕೋಟಿ ಅವತ್ತು ಖರ್ಚಾಗಿದೆ. ಗೌಡರ ಕುಟುಂಬದ ವಿರುದ್ಧ ಕೆಂಡಾಮಂಡಲವಾಗಿದ್ದ ಶಾಸಕರನ್ನು ಸಮಾಧಾನ ಮಾಡಲು ಸರ್ಕಾರವಿರದ ಅಂದರೆ ಅಧಿಕಾರರಹಿತ ಅವಧಿಯ ನಷ್ಟ ಪರಿಹಾರವೆಂದು ಪ್ರತಿ ದಳದ ಶಾಸಕನಿಗೂ ತಲಾ ಒಂದು ಕೋಟಿ ರೂಪಾಯಿ ಅಲ್ಲಿ ಪಾವತಿಯಾಗಿದೆ. ಇಷ್ಟು ಮಾಡಿದ ಕುಮಾರಸ್ವಾಮಿ ಎಲೆಕ್ಷನ್ ಬಂದಾಗಲೂ ಖರ್ಚಿಗೆ ಒಂದೊಂದು ಕೋಟಿ ಕೊಡುವ ಪ್ರಾಮಿಸ್ ಮಾಡಿ ಎಲ್ಲರನ್ನು ಕಳಿಸಿದ್ದಾರೆ. ನೀವೆಲ್ಲಾ ಒಪ್ಪಿಕೊಂಡರೆ ಕಾಂಗ್ರೆಸ್ ಜೊತೆ ಹೋಗೋಣವಂತೆ, ಗೌಡರನ್ನು ಒತ್ತಾಯಿಸೋಣ ಎಂದು ಮೂಗಿಗೆ ಬೆಣ್ಣೆ ಹಚ್ಚಿ ಸಾಗಹಾಕಿದ್ದಾರೆ. ಆದರೆ ಕಾಂಗ್ರೆಸ್ ಜೊತೆಗಿನ ಮರುಮೈತ್ರಿ ಈಗ ಬರಿ ಗೌಡರ ಕೈಲಿಲ್ಲ, ಅದಕ್ಕೆ ಮೊದಲು ಕಾಂಗ್ರೆಸ್ ನಾಯಕಿ ಸೋನಿಯಾ ಒಪ್ಪಬೇಕು ತಾನೆ.

ಪಾರ್ಟಿ ಹೈಕಮಾಂಡಿನ ಮೂಲಗಳ ಪ್ರಕಾರ ಸೋನಿಯಾ ಗೌಡರ ಪ್ರಸ್ತಾಪ ಒಪ್ಪುವ ಸಾಧ್ಯತೆ ಇಲ್ಲವೇ ಇಲ್ಲ, ಅದರ ಬದಲಾಗಿ ಎಲೆಕ್ಷನ್ ದಾರಿ ಹಿಡಿಯುತ್ತಾರವರು. ಈ ಹಿನ್ನೆಲೆಯಲ್ಲೇ ಕೆಪಿಸಿಸಿ ಪುನರ್ರಚನೆಯೂ ಸದ್ಯದಲ್ಲೇ ಆಗುವ ಮಾತು ಕೇಳಿಬರುತ್ತಿದೆ. ಆದರೆ ಹರಳೆಣ್ಣೆ ಶೈಲಿಯ ಖರ್ಗೆ ಹಾಗೂ ಕೆಲಸಕ್ಕೆ ಬಾರದ ಧರಂಸಿಂಗ್ ಮುಂದಿಟ್ಟುಕೊಂಡು ಕಾಂಗ್ರೆಸ್ ಎಲೆಕ್ಷನ್‌ಗೆ ಹೊರಟುಬಿಟ್ಟರೆ ರಿಸಲ್ಟ್ ಬರೋತನಕವೂ ಕಾಯಬೇಕಿಲ್ಲ, ಕಾಂಗ್ರೆಸ್ ಕಡೆ ಜನ ತಿರುಗಿಯೂ ನೋಡುವುದಿಲ್ಲ ಎಂದು ಈಗಲೇ ಹೇಳಿಬಿಡಬಹುದು. ಇದಲ್ಲದೆ ಅನಿಷ್ಟರ ಜೊತೆ ಶನೀಶ್ವರನೂ ಬಂದ ಎನ್ನುವಂತೆ ಎಸ್.ಎಂ. ಕೃಷ್ಣ ಮರಳಿ ಬಂದರಂತೂ ಕಾಂಗ್ರೆಸ್‌ಗೆ ಮತ್ತ್ಯಾವ ಶತ್ರುವೂ ಬೇಕಾಗೇ ಇಲ್ಲ. ಈ ಮಹಾನುಭಾವ ಭ್ರಷ್ಟ ಕೃಷ್ಣನಿಂದಾಗಿಯೇ ಕರ್ನಾಟಕದಲ್ಲಿ ಕಾಂಗ್ರೆಸ್ ಮಣ್ಣುಮುಕ್ಕಿತೆಂಬುದು ಯಾರು ತಾನೆ ಮರೆಯಲು ಸಾಧ್ಯ.

ಹಾಗೆ ಹೇಳಬೇಕೆಂದರೆ ಈಗಿನ ಒಟ್ಟಾರೆ ರಾಜಕೀಯ ಪರಿಸ್ಥಿತಿ ಜೆಡಿಎಸ್ ಬಿಟ್ಟು ಬಿಜೆಪಿ-ಕಾಂಗ್ರೆಸ್ ಇಬ್ಬರಿಗೂ ಅನುಕೂಲಕರವಾಗಿದೆ. ಆ ಕಾರಣಕ್ಕೇನೇ ಕನಿಷ್ಠ ಇನ್ನಾರು ತಿಂಗಳು ಎಲೆಕ್ಷನ್ ನಡೆಯದಂತೆ ಕಾಂಗ್ರೆಸ್ ನೋಡಿಕೊಳ್ಳಲಿದೆ. ಅಷ್ಟರಲ್ಲಿ ಬಿಜೆಪಿ ಪರ ಇರುವ ಚೂರುಪಾರು ಜನರ ಸಿಂಪಥಿ ಕರಗಿರುತ್ತದೆ. ಕಾಂಗ್ರೆಸ್ ಹೊಸ ನಾಯಕತ್ವದಡಿ ಚುನಾವಣೆಗೆ ಸಜ್ಜಾಗಿರುತ್ತದೆ.

ಅಂದಹಾಗೆ ಕೆಪಿಸಿಸಿ ಪುನರ್ರಚನೆ ಆದರೆ ಬಹುತೇಕ ಅದರ ನಾಯಕತ್ವಕ್ಕೆ ಬರುವುದು ಸಿದ್ಧರಾಮಯ್ಯ. ತತ್ವ ಸಿದ್ಧಾಂತ ಒಂದೂ ಇರದ ನಿಷ್ಕ್ರಿಯ, ಕಡುಭ್ರಷ್ಟರ ಕಾಂಗ್ರೆಸ್ ಪಕ್ಷಕ್ಕೆ ಸಿದ್ಧರಾಮಯ್ಯ ಜೀವ ತುಂಬಬೇಕೆಂದರೆ ಅತೀ ಕಷ್ಟದ ವಿಚಾರ ಅದು. ಮತ್ತು ಸಿದ್ಧರಾಮಯ್ಯ ಕಷ್ಟಪಟ್ಟು ಕೆಲಸ ಮಾಡುವ ಸ್ವಭಾವದವರಲ್ಲ ಎಂಬ ಆರೋಪದಿಂದ ಮುಕ್ತರಾಗಲು ಇದು ಸಕಾಲ ಅಲ್ಲವೆ?


■ ಈಶ

ಕೃಷ್ಣ

ದೈನೇಸಿ ಸ್ಥಿತಿ

ರಾಜ್ಯ ರಾಜಕೀಯದಲ್ಲಿ ಮತ್ತೆ ಮುಖ ತೂರಿಸ[...] ಎಸ್.ಎಂ. ಕೃಷ್ಣ ಪಡುತ್ತಿರುವ ಪಾಡು ನೋಡಿದ[...] ಅಯ್ಯೋ ಅನಿಸುವಂತಿದೆ ಎಂದೂ ಮಾಸ್ ಲೀಡ[...] ಅಲ್ಲದ ಕೃಷ್ಣ ಕಳೆದ ವರ್ಷ ಏನು ಮಾಡಿದ್ದರು ಗೊ[...]

ದೆಹಲಿಯ ಪ್ರಮುಖ ಇಂಗ್ಲಿಷ್ ಪತ್ರಿ[...] ಸಂಪಾದಕರಿಗೆ ಪ್ರತಿ ತಿಂಗಳೂ ಫಾರಿನ್ ಸ್ಕಾಚ್ [...] ಬಾಟಲು, ವಿದೇಶಿ ಹಣ್ಣು ಇತ್ಯಾದಿ ಗಿಫ್ಟ್ ಕಳಿಸು[...] 'ಕರ್ನಾಟಕ ರಾಜಕೀಯಕ್ಕೆ ಕೃಷ್ಣ ಎಷ್ಟು ಮುಖ್ಯ' ಎಂ[...] ಬರೆಸಿದರು. ಹೈಕಮಾಂಡ್ ಕೇರ್ ಮಾಡಲಿಲ್ಲ. ಆಮೇ[...] ಕರ್ನಾಟಕದ ಕೆಲ ದಿನಪತ್ರಿಕೆ ಸಂಪಾದಕರಿಗೆ ಗಿಫ್ಟ್‌ಗ[...] ಬರಲಾರಂಭಿಸಿದವು. ಅವರೂ ನಿಷ್ಠೆಯಿಂದ ಕೃ[...] ಬೆಂಗಳೂರಿಗೆ ಬಂದುಹೋದಾಗೆಲ್ಲಾ ದೊಡ್ಡ ದೊ[...] ಸುದ್ದಿ ಪ್ರಕಟಿಸಿದರು. ಊಹುಂ, ಆಗಲೂ ಹೈಕಮಾಂ[...] ಕ್ಯಾರೆ ಅನ್ನಲಿಲ್ಲ. ಹತಾಶರಾದ ಕೃಷ್ಣ ಈಗ ಸ[...] ಪತ್ರಿಕೆಗಳಲ್ಲಾದರೂ ತಮ್ಮ ಶಕ್ತಿ ಸಾಮರ್ಥ್ಯಗಳ ಬ[...] ಹೊಗಳಿ ಬರೆಸಿಕೊಳ್ಳಲು ಹೆಣಗುತ್ತಿದ್ದಾರೆ.



ಈತ ಎಂಥ ನಿರ್ಲಜ್ಜ ಮನುಷ್ಯನೆಂದ[...] ತಾನಿರಬೇಕಾದ್ದು ಮಹಾರಾಷ್ಟ್ರದಲ್ಲಾದರೂ ವಾರಕ್ಕೊಂ[...] ಬಾರಿ ಬೆಂಗಳೂರಿಗೆ ಬಂದುಹೋಗುವ ಚ[...] ಈಗಲೂ ಬಿಟ್ಟಿಲ್ಲ. ಕಳೆದ ಒಂದು ವರ್ಷದಲ್ಲಿ 20[...] ದಿನ ರಾಜಭವನದಿಂದ ಆಚೆ ಕಳೆದಿರುವ ಕೃಷ್ಣ ಒಟ್ಟ[...] 67 ಬಾರಿ ಹೊರಗಡೆ ಪ್ರಯಾಣಿಸಿದ್ದಾರೆ. ಅದರ[...] 31 ಭೇಟಿ ಬೆಂಗಳೂರಿಗೆ!

ಈ ನಾಲಾಯಕ್ ನಾಯಕನಿಗೆ ಇಲ್ಲೇನು ಅ[...] ಘನಂದಾರಿ ಕೆಲಸವಿತ್ತೊ? ಕೃಷ್ಣರ ಈ ಚೇಷ್ಟೆಗಳ[...] ನೋಡಿ ನೋಡಿ ರೋಸಿಹೋದ ಪೂನಾದ ಅನ[...] ಅತುಲ್ ಬಾಗಲ್ ಎಂಬ ಪತ್ರಕರ್ತ ರಾಜ್ಯಪಾಲ[...] ಒಟ್ಟಾರೆ ಪ್ರವಾಸದ ವಿವರಗಳನ್ನು ಈಗ ಮಾಹಿ[...] ಹಕ್ಕು ಕಾಯ್ದೆಯಡಿ ಪಡೆದುಕೊಂಡಿದ್ದಾರೆ. ಅದರ ಪ[...] 'ಲಂಕೇಶ್'ಗೂ ಸಿಕ್ಕಿದೆ.

ಯಾರ್‍ಯಾರದ್ದೋ ಮದುವೆ, ಶೋಬನ, ಟೆನ್ನಿ[...] ಮ್ಯಾಚ್, ಚಿತ್ರಕಲಾ ಪರಿಷತ್ ಸಭೆ, ವಾಲಿಬಾ[...] ಟೂರ್ನಿ ಎಂದು ಬೆಂಗಳೂರಿಗೆ ಬಂದುಹೋಗುತ್ತಿರು[...] ಕೃಷ್ಣ ಕನಿಷ್ಠ 35 ಲಕ್ಷ ರೂಪಾಯಿ ಸರ್ಕಾರಿ ಹಣವ[...] ಇದಕ್ಕಾಗಿ ಪೋಲು ಮಾಡಿಸಿದ್ದಾರೆ. ಜನ ತೆರಿಗೆ ಹ[...] ಕೊಡುವುದು ಈತನ ರಾಜಕೀಯದ ತೆವ[...] ತೀರಿಸಲಾ? ಕಾಂಗ್ರೆಸ್ ಹೈಕಮಾಂಡ್ ಕೃಷ್ಣಗೆ ಉಗಿ[...] ಸುಮ್ಮನಿರಿಸಲು ಆಗುವುದಿಲ್ಲವಾ?

2005 ರ ಜನವರಿಯಲ್ಲಿ 3 ದಿನ, ಫೆಬ್ರವರಿಯ[...] 4 ದಿನ, ಮಾರ್ಚ್‌ನಲ್ಲಿ 6 ದಿನ, ಏಪ್ರಿಲ್‌ನಲ್ಲಿ 3 ದಿ[...] ಮೇನಲ್ಲಿ 6 ದಿನ, ಜುಲೈನಲ್ಲಿ 5 ದಿನ, ಆಗಸ್ಟ್‌ನಲ್ಲಿ [...] ದಿನ, ಅಕ್ಟೋಬರ್‌ನಲ್ಲಿ 2 ದಿನ, ನವೆಂಬರ್‌ನಲ್ಲಿ [...] ದಿನ, ಡಿಸೆಂಬರ್‌ನಲ್ಲಿ 10 ದಿನ, ಬೆಂಗಳೂರಿನಲ್ಲೇ ಚ[...] ರಾಜಕೀಯ ಮಾಡಿಹೋಗಿರುವ ಕೃಷ್ಣ 2006 ರಲ[...] ಅದನ್ನೇ ಮುಂದುವರೆಸಿದ್ದರು.

ಜನವರಿಯಲ್ಲಿ 3 ದಿನ, ಫೆಬ್ರವರಿಯಲ್ಲಿ 8 ದಿ[...] ಮಾರ್ಚ್‌ನಲ್ಲಿ 10 ದಿನ, ಏಪ್ರಿಲ್‌ನಲ್ಲಿ 3 ದಿನ, ಮೇನ[...] 13 ದಿನ, ಜೂನ್‌ನಲ್ಲಿ 6 ದಿನ, ಜುಲೈನಲ್ಲಿ [...] ಆಗಸ್ಟ್‌ನಲ್ಲಿ 10, ಅಕ್ಟೋಬರ್‌ನಲ್ಲಿ 5 ನವೆಂಬರ್‌ನ[...] 4 ದಿನ ಬೆಂಗಳೂರಿಗೆ ಬಂದುಹೋಗಿದ್ದಾರೆ.

ಬೇರೆ ಒಂದು ರಾಜ್ಯದ ಗವರ್ನರ್ ಆಗಿದ್ದಾಗಲ[...] ಅಧಿಕಾರ ರಾಜಕೀಯದ ತೆವಲು ಈ ಮಟ್ಟಕ್ಕೆ ಕೃಷ್ಣ[...]

ಮಹಾರಾಷ್ಟ್ರದಲ್ಲಿ ಜನ ಕೃಷ್ಣ ಬಗ್ಗೆ ಹೇವರಿ[...] ಪಟ್ಟುಕೊಳ್ಳುತ್ತಿದ್ದಾರೆ. ಆದರೆ ದಪ್ಪ ಚರ್ಮದ ಕಾಂಗ್[...] ಹೈಕಮಾಂಡಿಗೆ ಮೈಮೇಲೆ ಎಚ್ಚರವೇ ಇಲ್ಲ.


ಒಂದಲ್ಲ, ಎರಡಲ್ಲ: ಅದು ಸಾವಿರದ ಇನ್ನೂರಾ ಒಂಭತ್ತು ಎಕರೆಗಳಷ್ಟು ವಿಶಾಲ ಭೂಭಾಗ!

ಎಕರೆಗೆ ಕಮ್ಮಿ ಎಂದರೂ ಒಂದು ಕೋಟಿ ರೂಪಾಯಿ ಮಾರ್ಕೆಟ್ ರೇಟಿದೆ. ಆದರೆ ಅದನ್ನು ಕೆಐಎಡಿಬಿ ಕೈಗಾರಿಕಾ ಉದ್ದೇಶಕ್ಕಾಗಿ ನೋಟಿಫೈ ಮಾಡಿ ಬಿಟ್ಟಿದೆ. ಬೇರೆ ಯಾರಿಗೂ ಅದನ್ನು ಮಾರುವಂತಿಲ್ಲ. ಕೆಐಎಡಿಬಿ ಅರ್ಥಾತ್ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕೊಟ್ಟಷ್ಟು ಪರಿಹಾರಕ್ಕೆ ಭೂಮಿಯನ್ನು ಬಿಟ್ಟುಕೊಡುವುದರ ಹೊರತಾಗಿ ರೈತರಿಗೆ ಬೇರೆ ದಾರಿಯಿಲ್ಲ. ಆದರೆ-

ಆದರೆ ದೇವೇಗೌಡರ ಕುಲಪುತ್ರ, ಬಾಲಕೃಷ್ಣೇಗೌಡ ಈ ರೀತಿ ಕೆಐಎಡಿಬಿಯು ಕೈಗಾರಿಕೆ ಉದ್ದೇಶಕ್ಕೆ ಸ್ವಾಧೀನದ ಅಧಿಸೂಚನೆ ಹೊರಡಿಸಿದ ಅದೆಷ್ಟೇ ಎಕರೆಗಳಾದರೂ ಕೊಳ್ಳಲು ಸಜ್ಜಾಗಿದ್ದಾನೆ!

ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಗ್ರಾಮಗಳ ರೈತರನ್ನೆಲ್ಲ ಕರೆದು ಜಬರ್‌ದಸ್ತಿ ಮಾಡುತ್ತಿರುವ ಬಾಲಕೃಷ್ಣೇಗೌಡ ಈಗಾಗಲೇ ಈ ಸುತ್ತಮುತ್ತಲ ನೂರೈದು ಎಕರೆಗಳಷ್ಟು ಭೂಮಿಯನ್ನು ತೀರ ಕಮ್ಮಿ ರೇಟಿಗೆ ಖರೀದಿಸಿದ್ದಾನೆ. ಕುತಂತ್ರವೆಂದರೆ ಬಾ.ಕೃ.ಗೌಡ ಯಾವುದನ್ನೂ ತನ್ನ ಹೆಸರಿಗೆ ಖರೀದಿಸದೇ ಸದಾಶಿವನಗರದ ವಾಸಿ ಆರ್. ಸುಗುಣ, ಬೇನಾಮಿ ನಾರಾಯಣಸ್ವಾಮಿ ತನ್ನ ಡ್ರೈವರ್ ರಮೇಶ್ ಚೌಧುರಿ ಹೆಸರಿಗೆ ಜಿಪಿಎ ಮಾಡಿಸಿ ಕ್ರಮೇಣ ಅದನ್ನು ತಮಗೆ ಬೇಕಾದವರ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಳ್ಳುವುದು ಈತನ ಮಾಸ್ಟರ್ ಪ್ಲಾನ್!

■ ರಾ. ಸೋಮನಾಥ್



ಬಾ.ಕೃ.ಗೌಡನ 1209 ಎಕರೆ ದರೋಡೆ

ಎಕರೆಯೊಂದಕ್ಕೆ ಕೆಐಎಡಿಬಿ ಹತ್ತೋ ಇಪ್ಪತ್ತೋ ಲಕ್ಷ ಪರಿಹಾರ ಕೊಡುತ್ತೆ. ಅದು ನಿಮಗೆಲ್ಲಿ ಗಿಟ್ಟುತ್ತೆ? ನಾನಾದರೆ ಎಕರೆಗೆ ಮೂವತ್ತು ಲಕ್ಷ ಕೊಡ್ತೀನಿ. ಇನ್ನೂ ಚೌಕಾಶಿಗೆ ಬಂದರೆ ಎಕರೆಗೆ ನಲವತ್ತು ಲಕ್ಷ ಕೊಡುವುದಕ್ಕೂ ರೆಡಿ. ಕೆಐಎಡಿಬಿಯಿಂದ ಅನ್ಯಾಯವಾಗಿ ಹಾಳಾಗೋ ಬದಲು ನನಗೇ ನಿಮ್ಮ ಭೂಮಿ ಕೊಟ್ಟುಬಿಡಿ. ನನ್ನ ಹೊರತಾಗಿ ಬೇರೆ ಯಾರಿಗೂ ನಿಮ್ಮ ಜಮೀನು ಕೊಳ್ಳೋ ಧೈರ್ಯ ಇಲ್ಲ. ನನ್ನ ಹೊರತಾಗಿ ನೀವು ಬೇರೆ ಯಾರಿಗೂ ಭೂಮಿ ಮಾರೋದು ಸಾಧ್ಯವೇ ಇಲ್ಲ!



ಹಾಗೆಂದು ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಸಿಂಗಹಳ್ಳಿ, ಗೊಲ್ಲಹಳ್ಳಿಯಂಥ ಗ್ರಾಮಗಳ ರೈತರನ್ನೆಲ್ಲ ಕರೆದು ಜಬರ್‌ದಸ್ತಿ ಮಾಡುತ್ತಿರುವ ಬಾಲಕೃಷ್ಣೇಗೌಡ ಈಗಾಗಲೇ ಈ ಸುತ್ತಮುತ್ತಲ ನೂರೈವತ್ತು ಎಕರೆಗಳಷ್ಟು ಭೂಮಿಯನ್ನು ತೀರ ಕಮ್ಮಿ ರೇಟಿಗೆ ಖರೀದಿಸಿದ್ದಾನೆ. ಈ ಪೈಕಿ ಸಿಂಗಹಳ್ಳಿಯಲ್ಲಿ ಅರವತ್ತು ಎಕರೆಗಳಷ್ಟನ್ನೂ, ಗೊಲ್ಲಹಳ್ಳಿಯಲ್ಲಿ ಎಪ್ಪತ್ತೆಕರೆಯನ್ನೂ ಅದೇ ಬನ್ನಮಂಗಲದಲ್ಲಿ ಮತ್ತೆ ಇಪ್ಪತ್ತೆಕರೆಯನ್ನೂ ಬಾ.ಕೃ.ಗೌಡ ಖರೀದಿಸಿದ್ದಾನೆ.

ಪ್ರಶ್ನೆಯೆಂದರೆ; ಒಮ್ಮೆ ಕೆಐಎಡಿಬಿಯು ಕೈಗಾರಿಕೆ ಉದ್ದೇಶಕ್ಕೆಂದು ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಬಾ.ಕೃ.ಗೌಡ ಹೇಗೆ ಖರೀದಿಸಲು ಸಾಧ್ಯ? ಹಾಗೇ ಕೆಐಎಡಿಬಿ ಅಧಿಸೂಚನೆ ಹೊರಡಿಸಿದ ನಂತರವೂ ಅದನ್ನು ಬಾಲಕೃಷ್ಣೇಗೌಡನ ಮನೆಗೆಲಸದ ಆಳುಗಳ ಹೆಸರಿಗೆ ಯಲಹಂಕದ ಸಬ್ ರಿಜಿಸ್ಟ್ರಾರ್ ಹೇಗೆ ನೋಂದಾವಣಿ ಮಾಡಲು ಸಾಧ್ಯ?

ದೇವನಹಳ್ಳಿ ಏರ್‌ಪೋರ್ಟ್ ಲ್ಯಾಂಡ್ ಗ್ರ್ಯಾಬಿಂಗ್

ಇದು ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿಯ ಬಿ.ಕೆ. ಪಾಳ್ಯ ಸಿಂಗಹಳ್ಳಿ, ಅರೇಬಿನ್ನಮಂಗಲ ಮತ್ತು ಗೊಲ್ಲಹಳ್ಳಿ ಎಂಬ ನಾಲ್ಕು ಗ್ರಾಮಗಳ ಹಾಲಿ ದುರಂತ. ಜೆಡಿಎಸ್-ಬಿಜೆಪಿ ಕೂಟ ಕುರ್ಚಿ ಹಿಡಿಯುತ್ತಿದ್ದಂತೆ ಈ ನಾಲ್ಕು ಗ್ರಾಮಗಳ ಮೇಲೆ ಕಣ್ಣು ಹಾಕಿದ್ದು ಬಾಲಕೃಷ್ಣೇಗೌಡ. 2006 ರ ಆಗಸ್ಟ್ 7 ರಂದು ಈ ನಾಲ್ಕೂ ಗ್ರಾಮಗಳ ಸಾವಿರದ ಇನ್ನೂರಾ ಒಂಭತ್ತು ಎಕರೆ ಭೂಮಿಯ ವಿರುದ್ಧ ಕೆಐಎಡಿಬಿ ಪ್ರಾಥಮಿಕ ಅಧಿಸೂಚನೆ ಹೊರಡಿಸುತ್ತದೆ. ಭಾರೀ ಕೈಗಾರಿಕಾ ಮಂತ್ರಿ ಕಟ್ಟಾ ಕನಿಷ್ಠ ನಕಲಿ ಐಟಿ ಕಂಪೆನಿಯನ್ನಾದರೂ ಹುಟ್ಟುಹಾಕಿದ್ದ. ಎಲ್ಲಿ ಮುಂದೊಮ್ಮೆ ತನ್ನ ಕುತ್ತಿಗೆಗೆ ಬರುತ್ತೋ ಎಂದು ಭೀತಿಗೆ ಬಿದ್ದು 'ಇಟಾಸ್ಕಾ' ಕಂಪೆನಿ ಅಲ್ಲಿ ಐಟಿ ಪಾರ್ಕ್ ಮಾಡುತ್ತದೆಯೆಂದು ಬೋಗಸ್ ಪ್ರಮಾಣಪತ್ರವನ್ನಾದರೂ ಸೃಷ್ಟಿಸಿದ್ದ.

ಆದರೆ ಬಾಲಕೃಷ್ಣೇಗೌಡನಿಗೆ ಕಾನೂನು, ಕೋರ್ಟು, ಸಂವಿಧಾನ, ಪ್ರಜಾಸತ್ತೆ ಇತ್ಯಾದಿ ಯಾವುದರ ಹಂಗಿಲ್ಲ. ಯಾವ ಕಂಪೆನಿಯೂ ಅರ್ಜಿ ಹಾಕದೇ ಹೋದರೂ, ಅಲ್ಲಿ ಕೈಗಾರಿಕೆ ಮಾಡುವುದೇ ಕಾನೂನುರೀತ್ಯ ಅಪರಾಧವಾಗಿದ್ದರೂ ಕೆಐಎಡಿಬಿಯ ಖದೀಮರು 2006 ರ ಆಗಸ್ಟ್ 7 ರಂದು ಅದು ಕೈಗಾರಿಕೆ ಉದ್ದೇಶಕ್ಕೆ ಬೇಕೆಂದು ವಿನಾಕಾರಣ ಅಧಿಸೂಚನೆ ಹೊರಡಿಸಿಬಿಟ್ಟರು. ಓಕೆ; ಅದು ಕೈಗಾರಿಕೆ ಉದ್ದೇಶಕ್ಕೆ ಬೇಕಾದ ಭೂಮಿಯೇ ಎಂದಿಟ್ಟುಕೊಂಡರೂ ಹಾಗೇ 28(1) ಅಂದರೆ ಪ್ರಾಥಮಿಕ ನೋಟಿಫಿಕೇಷನ್ ಹೊರಡಿಸಿದ ಕೆಐಎಡಿಬಿ ಆನಂತರ ಅಂತಿಮ ಅಧಿಸೂಚನೆ ಅಂದರೆ 28(4) ಹೊರಡಿಸಬೇಕಲ್ಲವೆ?

ಹಕೀಕತ್ತೆಂದರೆ ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಬೇರೆಲ್ಲ ಗ್ರಾಮಗಳ ರೈತರ ಭೂಮಿಗೆ ಫೈನಲ್ ನೋಟಿಫಿಕೇಷನ್ ಹೊರಡಿಸಿದ ಕೆಐಎಡಿಬಿ ಈ ನಾಲ್ಕು ಗ್ರಾಮಗಳ 1209 ಎಕರೆಗೆ ಮಾತ್ರ ಗಪ್‌ಚುಪ್ಪಾಗಿ ಬರುತ್ತದೆ. ಇದಾಗಿದ್ದೇ ಬೆಂಗಳೂರಿನ ನಟೋರಿಯಸ್ ಲ್ಯಾಂಡ್ ಗ್ರ್ಯಾಬರ್ ಕತ್ರಿಗುಪ್ಪೆ ನಾರಾಯಣಸ್ವಾಮಿ ಮತ್ತು ಬಾಲಕೃಷ್ಣೇಗೌಡರು ಗೊಲ್ಲಹಳ್ಳಿಗೆ ಭೇಟಿ ಕೊಡುತ್ತಾರೆ. ಆನಂತರ ಸಿಂಗಹಳ್ಳಿಗೆ ಪಾದ ಬೆಳೆಸುತ್ತಾರೆ. ಯಾವ ಕೆಐಎಡಿಬಿ ಕೈಗಾರಿಕೆ ಉದ್ದೇಶಕ್ಕೆಂದು 1209 ಎಕರೆಗಳಷ್ಟನ್ನು ನೋಟಿಫೈ ಮಾಡಿತ್ತೋ ಆ ಪೈಕಿ ಗೊಲ್ಲಹಳ್ಳಿ, ಸಿಂಗಹಳ್ಳಿ ಮತ್ತು ಅದೇ ಬಿನ್ನಮಂಗಲದ ನೂರೈವತ್ತು ಎಕರೆಗಳಷ್ಟನ್ನು ತಲಾ ಎಕರೆಗೆ ಮೂವತ್ತರಿಂದ ನಲವತ್ತು ಲಕ್ಷದಂತೆ ಕೊಟ್ಟು ಒಂದೊಂದಾಗಿ ಖರೀದಿಸುತ್ತಾರೆ.

ಅದೂ ಎಂಥಾ ಕುತಂತ್ರವೆಂದರೆ ಬಾ.ಕೃ.ಗೌಡ ಯಾವುದನ್ನೂ ತನ್ನ ಹೆಸರಿಗೆ ಖರೀದಿಸದೇ ಸದಾಶಿವನಗರದ ವಾಸಿ ಆರ್. ಸುಗುಣ, ಬೇನಾಮಿ ನಾರಾಯಣಸ್ವಾಮಿ ತನ್ನ ಡ್ರೈವರ್ ರಮೇಶ್ ಚೌಧುರಿ ಹೆಸರಿಗೆ ಜಿಪಿಎ ಮಾಡಿಸುತ್ತಾರೆ. ಕ್ರಮೇಣ ಅದನ್ನು ತಮಗೆ ಬೇಕಾದವರ ಹೆಸರಿಗೆ ರಿಜಿಸ್ಟರ್ ಮಾಡಿಸುತ್ತಾರೆ. ನೋಟಿಫೈ ಆದ ನಾಲ್ಕೇ ತಿಂಗಳಿಗೆ ಸಿಂಗಹಳ್ಳಿಯ ಬಡರೈತ ಚಿಕ್ಕಪ್ಪಯ್ಯನ ಮಗ ರಾಮಕೃಷ್ಣಪ್ಪ, ಆತನ ಪತ್ನಿ ಅಶ್ವತ್ಥಮ್ಮ, ಮಗಳು ಸೀಮಾ ಇನ್ನೊಬ್ಬ ಮಗಳು ಸ್ನೇಹಾ, ಮಗ ಗೆಲುವೇಶ ಮುಂತಾದವರ ಒಂದೆಕರೆಯನ್ನು ಬಾ.ಕೃ. ಗೌಡರೇ ನಿಂತು ತನ್ನ ಬೇನಾಮಿ ಆರ್. ಸುಗುಣರ ಹೆಸರಿಗೆ ಜಿಪಿಎ ಮಾಡಿಸುತ್ತಾರೆ.


ಈ ಆರ್. ಸುಗುಣ ಬೇರೆ ಯಾರೂ ಅಲ್ಲ, ಹಿಂದೆ ದೇವೇಗೌಡರ ಸದಾಶಿವ ನಗರದ ಕಾವೇರಿ ಟಾಕೀಸ್ ಹಿಂಭಾಗದಲ್ಲಿ ಬಾಡಿಗೆಗಿದ್ದ ಮನೆಯ ಮಾಲೀಕ ಕೆ. ಸುಬ್ಬರಾವ್ ಎಂಬಾತನ ಮಗಳು!



ಭೂ ಕಬಳಿಕೆ ವಿರೋಧಿಸಿ ಗೊಲ್ಲಹಳ್ಳಿಯ ರೈತರ ಹೋರಾಟ

(ಮುಂದಿನ ಪುಟಕ್ಕೆ)

ಅಪ್ಪ ಮಕ್ಕಳ ರೈತನಿಷ್ಠೆಗೆ ಏನಾಯ್ತು?



ಜೆಡಿಎಸ್-ಬಿಜೆಪಿ ಜಂಟಿ ಆಳ್ವಿಕೆಯಲ್ಲಿ ಗೌಡರ ಕುಲಪುತ್ರ ಬಾಲಕೃಷ್ಣೇಗೌಡ ಎಸಗಿದ ಭೂದರೋಡೆಯ ಪೈಕಿ ಇದು ಪತ್ರಿಕೆ ಬಯಲಿಗೆಳೆದ ಮೂರನೇ ಮತ್ತು ಅತೀ ದೊಡ್ಡ ಭೂಹಗರಣ. ಕೆಐಎಡಿಬಿ 1209 ಎಕರೆಗೆ ನೋಟಿಫೈ ಮಾಡಿದೆಯಾದರೂ ಬಾ.ಕೃ.ಗೌಡನಿಂದ ಈತನಕ ಅಷ್ಟನ್ನೂ ಖರೀದಿಸಲು ಸಾಧ್ಯವಾಗಿಲ್ಲ. ಬಹುಶಃ ಇನ್ನೊಂದು ವರ್ಷ ಜೆಡಿಎಸ್ ಅಧಿಕಾರದಲ್ಲಿದ್ದರೆ ಕನಿಷ್ಠ ಅರ್ಧದಷ್ಟನ್ನಾದರೂ ಆತ ಖರೀದಿಸಿಬಿಡುತ್ತಿದ್ದ. ರೈತರ ಅದೃಷ್ಟವೋ ಏನೋ ಸರ್ಕಾರವೇ ನೆಲಕಚ್ಚಿದೆ.

ಹಾಗಂತ ಇಷ್ಟಕ್ಕೇ ಬಾ.ಕೃ. ಸುಮ್ಮನಾಗಲಾರ. ಕೂಡಿಟ್ಟ ಕಪ್ಪು ಹಣವೇ ಬೇಕಾಬಿಟ್ಟಿ ಇರುವಾಗ ಕೆಐಎಡಿಬಿಯನ್ನು ತೋರಿಸಿಯೇ ಇನ್ನಷ್ಟು ಎಕರೆ ನುಂಗುವುದು ಕಷ್ಟವೇನಲ್ಲ. ಹೇಗೂ ಕೆಐಎಡಿಬಿ ನೋಟಿಫೈ ಮಾಡಿರುವುದೇ ಕಾನೂನುಬಾಹಿರವಾದ್ದರಿಂದ ಮುಂದೊಮ್ಮೆ ಫೈನಲ್ ನೋಟಿಫಿಕೇಷನ್ ಸಾಧ್ಯವಾಗದೇ ಇಡೀ ಯೋಜನೆಯನ್ನೇ ಕೆಐಎಡಿಬಿ ಕೈಬಿಡಬಹುದು. ಆ ಹೊತ್ತಿಗಾಗಲೇ ರೈತರ ಬಹುತೇಕ ಭೂಮಿ ಗೌಡರ ಪಾಲಾಗಿರುತ್ತದೆ. ಉಳಿದದ್ದನ್ನು ಇನ್ನಾರೋ ಖರೀದಿಸುತ್ತಾರೆ.

ಈಗ ಬಾ.ಕೃ. ಬೇನಾಮಿಯಾಗಿ ಖರೀದಿಸಿದ 150 ಎಕರೆಗಳ ಪೈಕಿ ತಲಾ ಎಕರೆಗೆ ಕನಿಷ್ಠ 35 ಲಕ್ಷದಂತೆ ಲೆಕ್ಕ ಹಾಕಿದರೂ ಅದು ಅರವತ್ತು ಕೋಟಿಯ ಸೊತ್ತಾಗುತ್ತದೆ. ಉಳಿಕೆ ನೂರೆಕರೆಗೆ ಈಗಾಗಲೇ ಕನಿಷ್ಠ 5 ಲಕ್ಷದಂತೆ ಅಡ್ವಾನ್ಸ್ ಪಾವತಿಸಿದ್ದಾಗಿದೆ. ಈ ಪಾಟ ದುಡ್ಡು ಬಾ.ಕೃ. ಗೌಡನಿಗೆ ಎಲ್ಲಿಂದ ಬಂತು?




ವಿಕಟವೆಂದರೆ ಇಂಥ ಅನ್ಯಾಯದ ವಿರುದ್ಧ ರೈತರು ಮಣ್ಣಿನ ಮಗ ದೇವೇಗೌಡರಿಗೇ ದೂರು ಕೊಟ್ಟಾಗಲೂ ಮುಖ್ಯಮಂತ್ರಿ, ಕುಮಾರಸ್ವಾಮಿಯನ್ನು ಕಂಡು ಕಣ್ಣೀರಿಟ್ಟಾಗಲೂ ಅಪ್ಪ ಮಗ ಕಾಟಾಚಾರಕ್ಕೂ ರೈತರ ಪರವಹಿಸಿ ಮಾತಾಡಿಲ್ಲ. ಇನ್ನು ಸ್ವತಃ ಭೂಗಳ್ಳನಾದ ಕೈಗಾರಿಕಾ ಮಂತ್ರಿ, ಕಟ್ಟಾ, ತನಗೆ ಘೇರಾವ್ ಮಾಡಿದ ರೈತರಿಗೇ ಗೂಂಡಾ ಬೆದರಿಕೆ ಹಾಕಿದ್ದ.

ಯಾರು ಕಾಯಬೇಕಿತ್ತೋ ಅವರೇ ಕೊಳ್ಳಲು ಹೊರಟಿದ್ದರು.


ಎಕರೆಗೆ ಮೂವತ್ತೇಳು ಲಕ್ಷದ ಇಪ್ಪತ್ತೈದು ಸಾವಿರದಷ್ಟು ರೇಟು ಕೊಟ್ಟು ಜಿಪಿಎ ಮಾಡಿಸಿಕೊಂಡ ಸುಗುಣ ಇದೇ ಜಮೀನನ್ನು 2007 ರ ಮೇ 7 ರಂದು ಯಲಹಂಕ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಎಸ್. ರಮೇಶ್ ಚೌಧರಿ ಬಿನ್ ಎಸ್. ಭೀಮಲಿಂಗಪ್ಪ ಎಂಬಾತನ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಡುತ್ತಾಳೆ.

ಇದು ಕೇವಲ ಒಂದೆಕರೆಯ ಸ್ಯಾಂಪಲ್ಲಷ್ಟೇ. ಗೊಲ್ಲಹಳ್ಳಿಯ ಮೋಹನ್, ಕೃಷ್ಣಪ್ಪ, ವೆಂಕಟೇಶ್ ಮಾತ್ರವಲ್ಲದೇ ಈ ರೀತಿ ನೂರಕ್ಕೂ ಅಧಿಕ ರೈತರು ಆರ್. ಸುಗುಣ ಮತ್ತು ಬೇನಾಮಿ ನಾರಾಯಣಸ್ವಾಮಿಗೆ ಜಿಪಿಎ ಮೂಲಕ ಭೀಮಲಿಂಗಪ್ಪನ ಮಗ ರಮೇಶ್ ಚೌಧರಿಗೆ ತಲಾ 35 ರಿಂದ 40 ಲಕ್ಷದಂತೆ ತಮ್ಮ ಜಮೀನು ಬಿಕರಿ ಮಾಡಿಸಿದ್ದಾರೆ.


ಡ್ರೈವರ್ ರಮೇಶನ ಹೆಸರಿಗೆ ಪಹಣಿ!


ಯಲಹಂಕ ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ಈ ಬಗ್ಗೆ ಬೇಕಾಬಿಟ್ಟಿ ದಾಖಲೆಗಳಿವೆ. ಇಲ್ಲಿ ಕಂಡಕಂಡ ರೈತರಿಂದ ತನ್ನ ಹೆಸರಿಗೆ ಭೂಮಿ ಖರೀದಿಸಿದ ರಮೇಶ್ ಚೌಧರಿ ಎಂಬಾತ ಬೇರೆ ಯಾರೂ ಅಲ್ಲ, ಬಾ.ಕೃ.ಗೌಡರ ಕಾರಿನ ಡ್ರೈವರ್!

ಯಲಹಂಕ ಸಬ್‌ರಿಜಿಸ್ಟ್ರಾರ್ ಕಚೇರಿಯ ಮ್ಯುಟೇಷನ್ ರಿಜಿಸ್ಟಾರ್ ಸೂಚ್ಯಿ M 39, 40, 42, 43, 37, 38, 36 35 ಇತ್ಯಾದಿಗಳೆಲ್ಲ ಇಂಥ ಬೇನಾಮಿ ವ್ಯವಹಾರದ ಜೀವಂತ ಸಾಕ್ಷಿಗಳಂತಿವೆ. ಪ್ರಶ್ನೆಯೆಂದರೆ ಒಮ್ಮೆ ಕೆಐಎಡಿಬಿ ಕೈಗಾರಿಕಾ ಉದ್ದೇಶಕ್ಕೆಂದು ಸ್ವಾಧೀನದ ಆದೇಶ ಹೊರಡಿಸಿದ ಜಮೀನನ್ನು ಯಲಹಂಕ ಖದೀಮ ಸಬ್ ರಿಜಿಸ್ಟ್ರಾರ್ ಲೋಕೇಶ್ ನಿಷೇಧವಿದ್ದಾಗ್ಯೂ ಹೇಗೆ ರೈತರಿಂದ ಬಾ.ಕೃ.ಗೌಡನ ಬೇನಾಮಿಗಳ ಹೆಸರಿಗೆ ರಿಜಿಸ್ಟರ್ ಮಾಡಲು ಸಾಧ್ಯ?


ಬೇನಾಮಿ ಸುಗುಣಳ ಹೆಸರಿಗೆ ಜಿಪಿಎ

ದೇವನಹಳ್ಳಿ ಏರ್‌ಪೋರ್ಟ್ ಭೂದರೋಡೆಯಲ್ಲಿ ಭಾರೀ ಕೈಗಾರಿಕಾ ಮಂತ್ರಿ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡುವಿನದು ನಕಲಿ ಕಂಪೆನಿ ಹೆಸರಿನ ದರೋಡೆಯಾದರೆ ಬಾಲಕೃಷ್ಣೇಗೌಡನದ್ದು ಅದಕ್ಕಿಂತಲೂ ನಿರ್ಲಜ್ಜ ಭೂಕೊಳ್ಳೇ. ಗೌಡರ ಫ್ಯಾಮಿಲಿಗಿಲ್ಲಿ ಕೆಐಎಡಿಬಿಯೇ ಆಯುಧ.

ಕೈಗಾರಿಕೆ ಉದ್ದೇಶಕ್ಕೆ ಬೇಕೆಂದು ಪ್ರಾಥಮಿಕ ನೋಟಿಫಿಕೇಷನ್ ಹೊರಡಿಸುವುದು, ತನ್ಮೂಲಕ ಸದರಿ ಜಮೀನಿಗೆ ಬೇರೆ ಯಾರೂ ಕೈಹಾಕದಂತೆ ಮಾಡುವುದು, ತನಗಲ್ಲದೇ ಬೇರೆ ಯಾರಿಗೂ ಮಾರಲು ರೈತರಿಗೆ ಅವಕಾಶವಿಲ್ಲದಂತೆ ಮಾಡಿ ಅಗದೀದರಕ್ಕೆ ಜಮೀನು ಲಪಟಾಯಿಸುವುದು ಬಾಲಕೃಷ್ಣೇಗೌಡನ ಹುನ್ನಾರ.


ದೇವನಹಳ್ಳಿ ಏರ್‌ಪೋರ್ಟ್ ಮತ್ತು ನೋಟಿಫೈ ಆದ ಭೂಮಿ

ಸದರಿ ಭೂಕೊಳ್ಳೆಯಲ್ಲಿ ಕೆಐಎಡಿಬಿ ಮತ್ತು ಕರ್ನಾಟಕ ಸರ್ಕಾರ ಎಷ್ಟೊಂದು ನಿರ್ಲಜ್ಜವಾಗಿ, ಕಾನೂನು ಬಾಹಿರವಾಗಿ ಭೂಕೊಳ್ಳೆಗೆ ದಾರಿ ಮಾಡಿಕೊಟ್ಟಿದೆ ಎಂಬುದೇ ಮತ್ತೊಂದು ದುರಂತಕತೆಯಾಗುತ್ತದೆ.

ಪ್ರಾರಂಭಿಕವಾಗಿ ಕೇವಲ ಕೈಗಾರಿಕೆ ಉದ್ದೇಶಕ್ಕೆಂದಷ್ಟೇ ನೋಟಿಫಿಕೇಷನ್ ಹೊರಡಿಸಿದ ಕೆಐಎಡಿಬಿ ಯಾವ ಕೈಗಾರಿಕೆಗೆ ಬೇಕು? ಎಷ್ಟು ಬೇಕು? ಯಾವ ಕಂಪೆನಿ? ಅದು ಅಸಲಿಯಾ? ನಕಲಿಯಾ? ಎಂಬ ಬಗ್ಗೆ ಈತನಕ ಯಾರಿಗೂ ಯಾವ ಮಾಹಿತಿಯನ್ನೂ ಕೊಟ್ಟಿಲ್ಲ, ಕೊಡುವುದೂ ಇಲ್ಲ!

ಅಷ್ಟಕ್ಕೂ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ನಾಲ್ಕೂ ಕಿ.ಮೀ.ಗಳ ಪರಿಧಿಯಲ್ಲಿ ಯಾವುದೇ ಕೈಗಾರಿಕೆ, ನಿರ್ಮಾಣ ಇತ್ಯಾದಿ ಮಾಡುವಂತಿಲ್ಲ, ಅದನ್ನು ಗ್ರೀನ್ ಬೆಲ್ಟ್ ಎಂದೇ ಕಾದಿರಿಸಬೇಕು. ಹಾಗೊಮ್ಮೆ ಮಾಡಬೇಕಿದ್ದರೂ ಅದಕ್ಕೆ ವಿಮಾನ ನಿಲ್ದಾಣ ಪ್ರಾಧಿಕಾರ (BIAPPA) ಎನ್‌ಓಸಿ ಕೊಡಬೇಕು. ಜೊತೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದಲೂ ಒಪ್ಪಿಗೆ ಪತ್ರವಿರಬೇಕು. ಇನ್ನೂ ಹೇಳಬೇಕೆಂದರೆ ಸರ್ಕಾರದ ಕೈಗಾರಿಕಾ ನೀತಿಯ ಪ್ರಕಾರ ಬೆಂಗಳೂರು ನಗರ ಜಿಲ್ಲೆಯಲ್ಲಿ ಯಾವುದೇ ಹೊಸ ಕೈಗಾರಿಕೆಯನ್ನು ಸ್ಥಾಪಿಸುವಂತಿಲ್ಲ, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಯಾವುದೇ ಹೊಸ ಕೈಗಾರಿಕೆ ಲೈಸೆನ್ಸ್ ನೀಡದಂತೆ ಕೇಂದ್ರ ಸರ್ಕಾರವೇ ನಿರ್ಬಂಧ ಹೇರಿದ್ದಾಗ್ಯೂ ಯಾವ ಆಧಾರದ ಮೇಲೆ ಕೆಐಎಡಿಬಿ ಈ ನಾಲ್ಕು ಗ್ರಾಮಗಳ ರೈತರ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕೆಂದು ನೋಟಿಫೈ ಮಾಡುತ್ತದೆ?

ಇದೊಂದು ಹಗಲು ದರೋಡೆ ಎಂಬುದಕ್ಕೆ ಇದಕ್ಕಿಂತ ಬೇಕೆ?

ಹಿಂದೆ ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಆನಂತರ ಧರ್ಮಸಿಂಗ್ ಆಳ್ವಿಕೆಯಲ್ಲಿ ಇದೇ ಭೂಮಿಯಲ್ಲಿ ಫ್ಯಾಬ್ ಸಿಟಿ ಮಾಡುತ್ತೇನೆಂದು ಬಂದವನನ್ನು ಕರ್ನಾಟಕ ಸರ್ಕಾರವೇ ಕಾನೂನಿನ ತೊಡಕೆಂದು ವಾಪಸ್ಸು ಕಳಿಸಿರುವಾಗ ಇದೇ ಜಮೀನನ್ನು ಕೆಐಎಡಿಬಿ ನೋಟಿಫೈ ಮಾಡುವುದೇ ಅಪರಾಧ. ಸಿಡಿಪಿಯ ಪ್ರಕಾರವೇ ವಿಶೇಷ ಕೃಷಿ ವಲಯಕ್ಕೆಂದು ಕಾಯ್ದಿಟ್ಟ ಇಂಥ ಭೂಮಿಯಲ್ಲಿ ಕೈಗಾರಿಕೆ ಸ್ಥಾಪಿಸುವಂತಿಲ್ಲ, ಇಂಥ ಭೂಪರಿವರ್ತನೆಗೆ ಸಚಿವ ಸಂಪುಟದ ಒಪ್ಪಿಗೆಯೂ ಇಲ್ಲ, ಹೀಗಿರುವಾಗ ಯಾವ ಶಾಸನದಡಿ ಯಾವ ಅಧಿಕಾರ ವಿದೆಯೆಂದು ಕೆಐಎಡಿಬಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತು?

ಇದೊಂದು ನಿರ್ಲಜ್ಜ ಹಗಲುದರೋಡೆಯಲ್ಲದೇ ಮತ್ತೇನಲ್ಲ, ಬಡರೈತರನ್ನು ದೋಚಲು ಕೆಐಎಡಿಬಿಯನ್ನು ಭೂಗಳ್ಳರು ಹೇಗೆ ಆಯುಧವನ್ನಾಗಿ ಪ್ರಯೋಗಿಸುತ್ತಿದ್ದಾರೆಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕಿಲ್ಲ, ಹೇಗೂ ರಾಜ್ಯಪಾಲರ ಆಳ್ವಿಕೆಯಿದೆ. ಕೆಐಎಡಿಬಿ ನೋಟಿಫೈ ಮಾಡಿದ ಜಮೀನನ್ನು ಯಲಹಂಕ ಸಬ್‌ರಿಜಿಸ್ಟ್ರಾರ್ ಅಕ್ರಮವಾಗಿ ಬಾಲಕೃಷ್ಣೇಗೌಡನ ಬೇನಾಮಿಗಳ ಹೆಸರಿಗೆ ರಿಜಿಸ್ಟರ್ ಮಾಡಿದ್ದೇಕೆ? ಹೇಗೆ? ಯಾವ ಅಧಿಕಾರವಿಲ್ಲದಿದ್ದರೂ KIADB ದೇವನಹಳ್ಳಿ ಏರ್‌ಪೋರ್ಟ್ ವ್ಯಾಪ್ತಿಯ 1209 ಎಕರೆಗಳಷ್ಟು ಭೂಮಿಯನ್ನು ಏಕೆ ನೋಟಿಫೈ ಮಾಡಿತು? ಏಕೆ ಅಂತಿಮ ಅಧಿಸೂಚನೆ ಹೊರಡಿಸಿಲ್ಲ? ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಕೈಗಾರಿಕೆಗಳಲ್ಲಿ ಕೇಂದ್ರ ಸರ್ಕಾರವೇ ನಿಷೇಧ ಹೇರಿದಾಗ್ಯೂ ಅದನ್ನು ಉಲ್ಲಂಘಿಸಿದ ಕೆಐಎಡಿಬಿಯ ಖದೀಮರಿಗೆ ಯಾವ ಶಿಕ್ಷೆ?


ಈ ಬಗ್ಗೆ ತನಿಖೆಯಾಗಲೇಬೇಕು. ಕನಿಷ್ಠ ನಿಯತ್ತೇನಾದರೂ ಇದ್ದಿದ್ದೇ ಆದರೆ ವಿರೋಧಿ ಎಂಬ ಶಾಸ್ತ್ರಕ್ಕಾದರೂ ಕಾಂಗ್ರೆಸ್ ಈ ಹಗರಣದ ವಿರುದ್ಧ ಹೋರಾಡಬೇಕು. ಹಾಗೊಮ್ಮೆ ಕಾಂಗ್ರೆಸ್ ದ್ರೋಹ ಬಗೆದಿದ್ದೇ ಆದರೆ ಜನಪರ ಸಂಘಟನೆಗಳಾದರೂ ಈ ಬಗ್ಗೆ ಬೀದಿಗಿಳಿಯಬೇಕು. ಇದು ಪತ್ರಿಕೆಯ ಕಳಕಳಿಯ ಮನವಿ.

■

IISCಯಲ್ಲಿ ದಲಿತರ ಬಲಿ

ಭಾರತದ ಅತ್ಯುತ್ತಮ ವೈಜ್ಞಾನಿಕ ಸಂಸ್ಥೆಗಳಲ್ಲಿ ಒಂದಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ಗೆ ಕೆಟ್ಟ ಜಾತಿ ರೋಗ ಬಡಿದುಕೊಂಡಿದೆ.

ಇದು ದಲಿತ ವಿದ್ಯಾರ್ಥಿ ಅಜಯ್ ಸಿ. ಚಂದ್ರನ ಪ್ರಾಣವನ್ನೇ ಬಲಿ ತೆಗೆದುಕೊಂಡಿದೆ. ಎರಡನೇ ವರ್ಷದ ಇಂಟಗ್ರೇಟೆಡ್ ಪಿಎಚ್.ಡಿ ಮಾಡುತ್ತಿದ್ದ ಅಜಯ್ ಸಂಸ್ಥೆಯೊಳಗಿನ ಜಾತಿ ತಾರತಮ್ಯ ಕಿರುಕುಳಗಳನ್ನು ಭರಿಸಲಾಗದೆ ಆಗಸ್ಟ್ 27ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅಜಯ್ ಸಾವು ಸೇರಿದಂತೆ IISCಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ದಲಿತ ಸಂಶೋಧನಾ ವಿದ್ಯಾರ್ಥಿಗಳ ಸಂಖ್ಯೆ ನಾಲ್ಕು ಎಂಬುದೇ ಕಳವಳಕಾರಿ ಸಂಗತಿಯಾಗಿದೆ. ಗೈಡ್‌ಗಳಾದ ಅಜಿತ್ ಕುಮಾರ್ ಮತ್ತು ರಾಘವೇಂದ್ರ ಘಾಟ ಅಜಯ್‌ನನ್ನು ಅಧ್ಯಯನದ ವಿಷಯಗಳಲ್ಲಿ ಖಂಡಿಸುವುದು, ಮನೋಸ್ಥೈರ್ಯ ಕುಗ್ಗಿಸುವಂತೆ ಹೀಯಾಳಿಸುವ ನೀಚ ಕೆಲಸ ಮಾಡುತ್ತಿದ್ದರೆಂಬುದು ಈಗ ಗೊತ್ತಾಗಿದೆ. ಅಜಯ್ ದಲಿತನಾಗಿದ್ದ ಎಂಬ ಒಂದೇ ಕಾರಣಕ್ಕೆ ಒಮ್ಮೆ ಅವನಿಗೆ ಡಿ. ಗ್ರೇಡ್ ಕೊಡಲಾಗಿತ್ತು, 'ಅಜಯ್ ಇಲ್ಲಿ ಯಾಕೆ ಓದುತ್ತಿದ್ದಾನೆ, ಬೇರೆ ಕಡೆ ಕೆಲಸ ನೋಡಿಕೊಳ್ಳಲಿ' ಎಂದೆಲ್ಲಾ ಈ ಗೈಡ್‌ಗಳು ತಿರಸ್ಕಾರದಿಂದ ಮಾತನಾಡುತ್ತಿದ್ದರೆಂದು ಸ್ವತಃ IISC ವಿದ್ಯಾರ್ಥಿಗಳೇ ಹೇಳುತ್ತಿದ್ದಾರೆ.


ಅಜಯ್ ಸಿ. ಚಂದ್ರ

IISC ಯ ನಿರ್ದೇಶಕರು ಹಾಗೂ ಪೊಲೀಸರಿಗೆ ಇದೊಂದು ವೈಯಕ್ತಿಕ ಸಮಸ್ಯೆಯಿಂದಾಗಿ ಆತ್ಮಹತ್ಯೆ ಪ್ರಕರಣವಾಗಿ ಭಾಸವಾಗಿರುವುದಂತೂ ಅಪಾಯಕಾರಿ ಬೆಳವಣಿಗೆಯಾಗಿದೆ. ಅಜಯ್ 7 ಪುಟಗಳ ಒಂದು ಸೂಸೈಡ್ ನೋಟ್ ಬರೆದಿಟ್ಟಿದ್ದರೂ ಅದೀಗ ನಾಪತ್ತೆಯಾಗಿದೆ. ಸಣ್ಣಪುಟ್ಟ ವಿಚಾರಗಳಿರುವ ಕೇವಲ 2 ಪುಟಗಳನ್ನು ಮಾತ್ರ ಅಜಯ್‌ನ ತಂದೆ ತಾಯಿಗೆ ತಲುಪಿಸಿ ಪೊಲೀಸ್ ದಾಖಲೆಗಳಲ್ಲೂ ಅಷ್ಟನ್ನು ಮಾತ್ರ ತೋರಿಸಿದ್ದಾರೆ. ಇವೆಲ್ಲಾ ಮಾಧ್ಯಮಗಳಲ್ಲಿ ಪ್ರಸಾರವಾಗಿ, ಸಂಘಟನೆಗಳಿಂದ ವ್ಯಾಪಕ ಪ್ರತಿಭಟನೆ ಬಂದ ನಂತರ ತನಿಖೆಗಾಗಿ 7 ಸದಸ್ಯರ ಸಮಿತಿ ರಚಿಸಲಾಗಿದೆ. ಆದರೆ ಅವರಲ್ಲಿ ಒಬ್ಬರು ಮಾತ್ರ ದಲಿತರು. ಇದರಿಂದ ವಿಚಾರಣೆ ಮುಕ್ತವಾಗಿ ನಡೆಯುವ ಬಗ್ಗೆಯೇ ಅನುಮಾನಗಳಿವೆ. ಯಾಕೆಂದರೆ, ಜಾತಿ ಪೂರ್ವಗ್ರಹಗಳು, ಮೇಲ್ಜಾತಿ ಜನರ ಅಹಂ IISCಯೊಳಗೆ ಸಾಮಾನ್ಯ ಸಂಗತಿಗಳಾಗಿವೆ. ಇದು ಯಾವ ಲೆವೆಲ್‌ಗಿದೆಯೆಂದರೆ ಸಂಸ್ಥೆಯು 5 ಫ್ಯಾಕಲ್ಟಿಗಳಲ್ಲಿ 25 ಸೈಂಟಿಫಿಕ್ ಆಫೀಸರ್‌ಗಳಿದ್ದಾರೆ. ಇವರಲ್ಲಿ ದಲಿತರು ಅಂತ ಇರುವುದು ಒಂದಿಬ್ಬರು ಮಾತ್ರ. ಇಲ್ಲಿನ ನೇಮಕಾತಿಗಳು ಎಷ್ಟು ಕಾನೂನು ಬಾಹಿರವಾಗಿದೆಯೆಂದರೆ ಸೈಂಟಿಫಿಕ್ ಆಫೀಸರ್‌ಗಳ ಹುದ್ದೆಗೆ ಜನರಲ್ ಕೋಟಾದವರಿಗೆ ಬಿ.ಇ/ಎಂ.ಎಸ್ಸಿ ವಿದ್ಯಾರ್ಹತೆ ಸಾಕೆಂದಿದ್ದರೆ ದಲಿತರಿಗೆ ಎಂ.ಇ/ಪಿಎಚ್.ಡಿ ಕೇಳುತ್ತಾರೆ. ದಲಿತ ನೌಕರರಿಗಂತೂ ಸೂಕ್ತವಾದ ಲ್ಯಾಬ್ ಸೌಲಭ್ಯಗಳಿಲ್ಲ.

ಹಾಗೆಯೇ ಪ್ರಮೋಷನ್‌ನಲ್ಲೂ ತಾರತಮ್ಯ ಮಾಡಲಾಗುತ್ತಿದೆ. ಎಂ.ಟೆಕ್ ಪದವಿಗೆ ಪ್ರವೇಶ ಪರೀಕ್ಷೆ ಇದೆ. ಅದರಲ್ಲಿ ಪಾಸ್ ಆದವರನ್ನು ಸಂದರ್ಶನ ನಡೆಸಿ ಪ್ರವೇಶ ನೀಡಲಾಗುತ್ತದೆ. ಈ ಹಂತದಲ್ಲಿ ಅನೇಕ ಅರ್ಹ ದಲಿತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ.

IISC ಹೇಳಿಕೊಳ್ಳಲಿಕ್ಕೆ ಭಾರತದ ಅತೀ ಪ್ರತಿಷ್ಠಿತ ವೈಜ್ಞಾನಿಕ ಸಂಶೋಧನಾ ಸಂಸ್ಥೆ. ಆದರೆ ಅಂತರ್ಯದಲ್ಲಿ ಜಾತಿ ರೋಗದಿಂದ ಕೊಳೆಯುತ್ತಿರುವ ಕೆಟ್ಟ ಪರಿಸ್ಥಿತಿಯೂ ಇಲ್ಲಿದೆ.

ಅಜಯ್ ಚಂದ್ರರಂತಹ ಸೂಕ್ಷ್ಮ ಪ್ರತಿಭಾವಂತ ಹಾಗೂ ಸ್ವಾಭಿಮಾನಿಗಳನ್ನು ಕೊಲ್ಲುವ ವಾತಾವರಣ IISC ಯಲ್ಲಿರುವುದು ಅಸಹ್ಯ ತರಿಸುತ್ತಿದೆ.

ಅಜಯ್ ಸಾವಿನ ಬಗ್ಗೆ ತನಿಖೆ ನಡೆಸುತ್ತಿರುವ ಸಮಿತಿಯು ಪ್ರಾಮಾಣಿಕವಾಗಿ ನಡೆದುಕೊಳ್ಳದಿದ್ದಲ್ಲಿ ನ್ಯಾಯದ ಪರವಿರುವವರು ಸುಮ್ಮನಿರುವುದಿಲ್ಲ ಎಂಬುದನ್ನು ಅರಿತಿದ್ದರೆ ಉತ್ತಮ.

■



ಹಾಯ್ ರಶ್ಮಿ... ನಿನ್ ಕೆಲಸ ಏನು?

ಅದೊಂದು ಪತ್ರಿಕಾಗೋಷ್ಠಿ. ಇಂಗ್ಲಿಷ್ ಪತ್ರಕರ್ತೆಯೊಬ್ಬಳು ಶುರುವಿನಿಂದ ಬಂದು ಕುಳಿತವಳೇ ಇಂಟರ್‌ವ್ಯೂ ನಡೆಸುವ ಶೈಲಿಯಲ್ಲಿ ತಾನೇ ಪ್ರಶ್ನೆಗಳನ್ನು ಶುರು ಮಾಡುತ್ತಾಳೆ.

"ನೀವೆಲ್ಲಾ ಯಾರು. ಹಿನ್ನೆಲೆ ಏನು?"

.....

"ನಿಮಗೆ ಮಾಡಕ್ಕೆ ಬೇರೆ ಕೆಲಸ ಇಲ್ವಾ?"

....

"ಅವರು ಪೂಜೆ ಮಾಡಿಕೊಳ್ಳಲಿ ಬಿಡಿ. ಏನೀಗ"

.....

ಹೀಗೆ ಈಕೆ ಓತಪ್ರೋತವಾಗಿ ಮಾತಾಡಿದ್ದು ಮೊನ್ನೆ ಬೆಂಗಳೂರು ಪ್ರೆಸ್‌ಕ್ಲಬ್‌ನಲ್ಲಿ. ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಪದಾಧಿಕಾರಿಗಳೊಂದಿಗೆ ಬಾಬಾ ಬುಡನ್‌ಗಿರಿಯಲ್ಲಿ ಸಂಘ ಪರಿವಾರದವರಿಗೆ ಪೂಜೆ-ಹವನಗಳಿಗೆ ರಾಜ್ಯಪಾಲರು ಅವಕಾಶ ಮಾಡಿಕೊಡದೆ ಕೋರ್ಟ್ ಆದೇಶ ಪಾಲಿಸುವಂತೆ ನೋಡಿಕೊಳ್ಳಬೇಕೆಂದು ಒತ್ತಾಯಿಸಲು ಈ ಪ್ರೆಸ್ ಮೀಟ್ ಏರ್ಪಾಡಾಗಿತ್ತು.


■ ಪಾರ್ವತೀಶ

ಬಿಡಿ ಚಿತ್ರಗಳು

ಜರ್ನಲಿಸಂನ ಅರ್ಥ ಮತ್ತು ಜವಾಬ್ದಾರಿ ಗೊತ್ತಿದ್ದದ್ದರೆ ಡೆಕ್ಕನ್ ಹೆರಾಲ್ಡ್‌ನ ಎಳಸು ಪತ್ರಕರ್ತೆ ರಶ್ಮಿ ಅಬ್ಲೂರ್ ಈ ಥರ ಎಡಬಿಡಂಗಿಯಾಗಿ ಮಾತಾಡಿ ಚೆಡ್ಡಿ ಬುದ್ಧಿ ತೋರಿಸುತ್ತಿರಲಿಲ್ಲ. ಬುದ್ಧಿ ಇರಬೇಕಾದ ಜಾಗದಲ್ಲಿ ಲದ್ದಿ ಇದ್ದರೆ ಯಾರು ತಾನೆ ಏನು ಮಾಡಕಾಗುತ್ತೆ ಬಿಡಿ.

ದೇವನೂರು ನೆಲದ ಮೇಲಿದ್ದಾರಾ?

ದೇವನೂರು ಮಹಾದೇವ ಹಾಗೂ ರೈತ ಸಂಘದ ಪುಟ್ಟಣ್ಣಯ್ಯ ಮತ್ತಿತರರು ಸೇರಿ ಸರ್ವೋದಯ ಕರ್ನಾಟಕ ಅಂತ ಒಂದು ಪಕ್ಷ ಸ್ಥಾಪಿಸಿದ್ದರು. ನಿರ್ವ್ಯಾಮೋಹದಿಂದ ಹೇಳಬೇಕೆಂದರೆ ಇದೊಂದು ಲೆಟರ್ ಹೆಡ್ ಪಾರ್ಟಿ. ಇವರೊಂದು ಹೇಳಿಕೆ ಕೊಟ್ಟಾಗ ಪಕ್ಷದ ಹೆಸರು ಪತ್ರಿಕೆಗಳಲ್ಲಿ ಕಾಣಸಿಗುತ್ತದೆ. ಅದು ಬಿಟ್ಟು ಘಟಕ, ಕಾರ್ಯಕರ್ತರು, ಜನ ಯಾರೂ ಇರದ ಅದೃಶ್ಯ ಪಕ್ಷ ಇದು.



ಇಂಥ ಶೋಚನೀಯ ಪರಿಸ್ಥಿತಿಯಿದ್ದಾಗಲೂ ಸರ್ವೋದಯ ಈಗ ಥರ್ಡ್ ಫ್ರಂಟ್ ರಚಿಸುತ್ತಿರುವುದಾಗಿಯೂ ಸಿಪಿಐ, ಸಿಪಿಎಂ, ಬಿಎಸ್‌ಪಿ ಇತ್ಯಾದಿಗಳು ಕೂಡಲೇ ಬಂದು ಸೇರಿಕೊಳ್ಳಬೇಕೆಂದು ಕರೆಕೊಟ್ಟಿದೆ.

ರಾಜಕೀಯ ಅಂದರೆ ಅದರಲ್ಲೂ ಚುನಾವಣಾ ರಾಜಕೀಯವೆಂದರೆ, ಒಕ್ಕೂಟ ಮಾಡಿಕೊಳ್ಳಬೇಕೆಂದರೆ ಅದಕ್ಕೊಂದು ಜನಬೆಂಬಲದ ತಳಹದಿ ಬೇಕು. ತಮ್ಮ ಪಾರ್ಟಿ ತಾಕತ್ತೆಷ್ಟೆಂಬುದು ಕನಿಷ್ಠ ದೇವನೂರಿಗಾದರೂ ಗೊತ್ತಿರಬೇಡವೆ? ಬೇರೆ ರಾಜಕೀಯ ಪಾರ್ಟಿ ಅಂಗಡಿಗಳಲ್ಲಿರುವುದು ಬರೀ ನಕಲಿ ಮಾಲು, ತಮ್ಮದು ಅಸಲಿ ಎಂದುಕೊಂಡು ಅಂಗಡಿ ತೆರೆದು ಸುಮ್ಮನೆ ಕುಳಿತುಬಿಟ್ಟರೆ ವ್ಯಾಪಾರ ಗಿಟ್ಟುವುದಿಲ್ಲ, ಬರೀ ಪತ್ರಿಕಾ ಹೇಳಿಕೆಗಳಿಂದ ಪಕ್ಷ ಬೆಳೆಯುವುದಿಲ್ಲ ಎಂಬ ಸತ್ಯವನ್ನು ಸರ್ವೋದಯ ಪಾರ್ಟಿ ಕಾರ್ಯಕರ್ತರ್‍ಯಾರಾದರು ಹೇಳಬಾರದೆ... ಇದ್ದರೆ!

ಡ್ಯಾನ್ಸ್ ಮಾಡಿ ಬಡತನ ಓಡಿಸಿ!

ಮೊನ್ನೆ ಒಂದು ತಮಾಷೆ ನಡೆದಿದೆ.




ಆರ್ಟ್ ಆಫ್ ಲೀವಿಂಗ್‌ನ ವಯ್ಯಾರಿ ರವಿಶಂಕರ ಗುರೂಜಿಗೆ 'ಈ ಬಡತನವನ್ನು ಈಗಲೇ ಓಡಿಸಿಬಿಡಬೇಕು' ಅನ್ನಿಸಿದೆ.

ಅಷ್ಟೇ ಅರ್ಜೆಂಟಾಗಿ ಒಂದು ದೊಡ್ಡ ಸಭೆ ನಡೆಸಿ ಹಾಡು, ಡ್ಯಾನ್ಸ್, ಧ್ಯಾನ, ಸತ್ಸಂಗದ ಮೂಲಕ ಬಡತನ ಓಡಿಸಬಹುದೆಂದು ಹುಕಿಹಚ್ಚಿದ್ದಾರೆ. ಬೆಂಗಳೂರಿನಿಂದ ಹಾರೋಹಳ್ಳಿ ತನಕ 500 ಬೈಕ್‌ಗಳ ರ್‍ಯಾಲಿ ನಡೆಸಿ ಈ ಸಂಕೋಧನೆಯನ್ನು ಪ್ರಚಾರ ಮಾಡಿಬಂದಿದ್ದಾರೆ.

"ಅಸ್ಪೃಶ್ಯ ತಮಾಷೆ ಏನೆಂದರೆ ಟಿ.ಸಿ. ರಾಜು ಎಂಬ ದಲಿತ ನಾಯಕರೂ ಈ ಸಂಕೋಧನಾ [illegible]. ಸಂಜೆ ಪೇಪರುಗಳಲ್ಲಿ ಆಗಾಗ್ಗೆ ಕಾರ್ಲ್ ದಲಿತ ಟಿ.ಸಿ. ರಾಜು ಅಂತ ಇವನ ಮೂತಿ ಕಾಣಿಸಿಕೊಳ್ಳುತ್ತಿರುತ್ತದೆ.

ಅಂದಹಾಗೆ ಟಿ.ಸಿ. ರಾಜು ಮಲ್ಲೇಶ್ವರದಲ್ಲೂ ರವಿಶಂಕರರು ಕನಕಪುರ [illegible] ಇರುತ್ತಾರೆ. ಸಾಧ್ಯವಾದರೆ ಒಂದೆಲ್ಲ ಮುಂದೆ [illegible] ಕೊಡಬೇಕು ಅನ್ನಿಸುವವರಿಗೆ [illegible]




ಗದಗ: ಚೆಡ್ಡಿಗಳ ಅಖಾಡ

ಗದಗಿನ ರಾಜಕೀಯ ಹಾಳೆಯ ಅಘೋಷಿತ ನಾಯಕ ಎಚ್.ಕೆ. ಪಾಟೀಲರ ಕಾಂಗ್ರೆಸ್ ಭದ್ರಕೋಟೆಗೆ ಬಳ್ಳಾರಿ ರೆಡ್ಡಿಗಳ ಚೆಡ್ಡಿ ಬಾಂಬ್ ಬಿದ್ದಿದೆ. ಸ್ಥಳೀಯ ಸಂಸ್ಥೆ ಚುನಾವಣೆಯ ಫಲಿತಾಂಶ ಬಿಜೆಪಿ ಪಾಲಾಗಿದ್ದಕ್ಕೆ ಕಾರಣ: ಮೊದಲನೆಯದಾಗಿ ಎಚ್ಕೆ ಪಾಟೀಲರು ಮಂತ್ರಿಯಾಗಿದ್ದುಕೊಂಡು ಪಾಳೆಗಾರಿಕೆ ಮಾಡಿದರೆ ಹೊರತು ಊರಿಗೆ ಉಪಕಾರ ಮಾಡಲಿಲ್ಲ ಎಂಬ ಜನರ ಬೇಸರ. ಎರಡನೆಯದಾಗಿ ಚೆಡ್ಡಿಗಳ ಗಣಿ ಹಣ ಶ್ರೀರಾಮುಲುನ ಪರ್ಸನಲ್ ಇಮೇಜ್‌ಗೆ ಟಾನಿಕ್‌ನಂತೆ ಕೆಲಸಮಾಡಿದ್ದು. ಆದರೆ ಹಲವು ದಶಕಗಳಿಂದ ಕಾಂಗ್ರೆಸ್ ಹಿಡಿತದಲ್ಲಿದ್ದ ಗದಗ-ಬೆಟಗೇರಿ ನಗರಸಭೆಗೆ ಬಹುಮತದೊಂದಿಗೆ ಚೆಡ್ಡಿಗಳು ಕಾಲಿಟ್ಟಿರುವುದು ಹುಸಿದ ಹೆಗ್ಗಣಗಳನ್ನು ಅಕ್ಕಿ ಗೋಡೌನಿಗೆ ಬಿಟ್ಟಂತಾಗಿದೆ.

ನಾಲ್ಕು ದಶಕಗಳಿಂದ ತಾವು ಕಟ್ಟಿ ಬೆಳೆಸಿದ್ದ ಗದಗ-ಬೆಟಗೇರಿ ಎಂಬ ಸಾಮ್ರಾಜ್ಯದ ಉಳಿವಿಗಾಗಿ ಹುಲಿಕೋಟೆಯ ಹುಲಿ ಎಚ್ಕೆ ಪಾಟೀಲರು ಕಾರ್ಯಪ್ರವೃತ್ತರಾಗಿರಬೇಕಿತ್ತು. ಆದರೆ ಎಂದಿನಂತೆ ಅವರು ತಮ್ಮ ಮನೆಯಲ್ಲೇ ಕೂತು ಚುನಾವಣೆಗಳಲ್ಲಿ ಗೆಲ್ಲುತ್ತೇವೆಂದು ಭ್ರಮಿಸಿದ್ದರು. ಅವರಿಗೆ ನಿಜವಾಗಲೂ ಶಾಕ್ ಆಗಿದ್ದು ಫಲಿತಾಂಶ ಹೊರಬಿದ್ದಾಗ.

ಜಿಲ್ಲಾ ಮಂತ್ರಿಯಾಗಿ ಇಲ್ಲಿಗೆ ಕಾಲಿಟ್ಟಾಗಿನಿಂದ ಶ್ರೀರಾಮುಲು ಜನರ ಮನಗೆಲ್ಲಲು ನಗರದ ಸೌಂದರ್ಯ, ಚರಂಡಿ ರಿಪೇರಿ, ಕುಡಿಯುವ ನೀರು ಇತ್ಯಾದಿ ಗಿಮಿಕ್ಕುಗಳನ್ನು ಮಾಡಿದ. ಇದನ್ನು ಕಂಡು "ಗೌಡ್ರು ಮಾಡದಿದ್ದನ್ನು ಬಳ್ಳಾರಿಯವ್ನಾ ಮಾಡಿದಾ" ಎಂದು ಜನ ಮಾತನಾಡಲಾರಂಭಿಸಿದರು.



ಈ ಮಾತು ಎಚ್ಕೆಯವರ ಕಿವಿಗೆ ಬಿದ್ದರೂ ಅವರು ಏನನ್ನೂ ಮಾಡಲಿಲ್ಲ. ಆದರೆ ಯಾವಾಗ ಜನಾರ್ದನ ರೆಡ್ಡಿ "ಮುಂದಿನ ಚುನಾವಣೆಯಲ್ಲಿ ನಾನು ಅಥವಾ ಶ್ರೀರಾಮುಲು ಇಲ್ಲಿಂದಲೇ ಸ್ಪರ್ಧಿಸುತ್ತೇವೆ" ಎಂದರೋ ಆಗ ಎಚ್ಕೆಗೆ ನಡುಕ ಶುರುವಾಯಿತು.

ಮೊನ್ನಿನ ಚುನಾವಣಾ ಫಲಿತಾಂಶದಿಂದಾಗಿ ಈಗ ಅವರಿಗೆ ನಿತ್ಯ ಚಳಿ ಜ್ವರ ಬಂದಿದ್ದರೆ ಅಚ್ಚರಿ ಇಲ್ಲ.

ಮರ್ಯಾದೆ ಕಳೆದುಕೊಂಡ ದಳ

ಒಟ್ಟು 35 ವಾರ್ಡುಗಳನ್ನು ಹೊಂದಿರುವ ಗದಗ-ಬೆಟಗೇರಿ ನಗರಸಭೆಯಲ್ಲೀಗ 19 ಸ್ಥಾನಗಳನ್ನು ಆಕ್ರಮಿಸಿಕೊಂಡಿರುವ ಬಿಜೆಪಿ ಆಡಳಿತ ನಡೆಸುವ ತಯಾರಿಯಲ್ಲಿದೆ. ಆದರೆ ಇಲ್ಲಿಯವರೆಗೂ ಸತತವಾಗಿ ಅಧಿಕಾರ ಚಲಾಯಿಸುತ್ತಾ ಬಂದಿದ್ದ ಎಚ್ಕೆ ಪಾಟೀಲರ ಕಾಂಗ್ರೆಸ್ ಕೇವಲ 12 ಸ್ಥಾನಗಳನ್ನು ಪಡೆದು ವಿರೋಧ ಪಕ್ಷದಲ್ಲಿರುವಂತಾಗಿದೆ.

ಇನ್ನು ಸದಾ ಬೀದಿ ಜಗಳದಿಂದ ಪುಕ್ಕಟೆ ಪ್ರಚಾರ ಗಿಟ್ಟಿಸಿಕೊಂಡಿದ್ದ ದೇವೇಗೌಡರ ಜೆಡಿಎಸ್ ಎರಡೇ ಎರಡು ಸ್ಥಾನಗಳನ್ನು ಗೆದ್ದು ಮಾನ ಮರ್ಯಾದೆಯನ್ನು ಕಳೆದುಕೊಂಡಿದೆ. ಇವೆಲ್ಲದರ ಮಧ್ಯೆಯೇ ಬಿಜೆಪಿಯಿಂದ ಟಿಕೆಟ್ ವಂಚಿತರಾಗಿದ್ದ ಕೆಲ ಚೆಡ್ಡಿಗಳು ಶ್ರೀರಾಮುಲು ಅಭಿಮಾನಿಗಳ ಬಳಗದ ಬ್ಯಾನರಿನಡಿ ಭಜರಂಗಿಗಳನ್ನು ಕಟ್ಟಿಕೊಂಡು ಅಖಾಡಕ್ಕಿಳಿಸಿದ್ದರು. ಅವರಲ್ಲಿ ಸಿರಾಜ್ ಬಳ್ಳಾರಿ ಎಂಬ ಕೊಳ್ಳಿ ದೆವ್ವವನ್ನು ಅದು ಹೇಗೋ ಜನ ಗೆಲ್ಲಿಸಿದ್ದಾರೆ.

[illegible] ಬಿಜೆಪಿ [illegible] ಹೊಂದಿದ್ದ [illegible] ಸಮುದಾಯದ ಸಮಿತಿ ತಮ್ಮ [illegible] ಗುಂಪಿಗೆ ಬಿ ಫಾರ್ಮ್ ನೀಡಿರಲಿಲ್ಲ. ಪಕ್ಷಕ್ಕಾಗಿ ದುಡಿದ ದಾವಲ ಮುಳಗುಂದ, ರಮೇಶ ಕಲಬುರ್ಗಿ, ಬಸವರಾಜ ಅಪ್ಪಣ್ಣನವರಿಗೆ ಟಿಕೆಟ್ ನೀಡದೆ ಲಿಂಗಾಯತರಿಗೆ ಟಿಕೆಟ್ ನೀಡಿ ಜಾತಿಪ್ರೇಮವನ್ನು ಪ್ರದರ್ಶಿಸಲಾಗಿತ್ತು. ಈ ಎಲ್ಲ ಕಾರಣಗಳಿಂದಾಗಿ ದಳದಿಂದ 25 ಜಾಗಗಳಲ್ಲಿ ಜನ ಸ್ಪರ್ಧಿಸಿದ್ದರೂ ಆ ಪಕ್ಷ ಎರಡರಲ್ಲಿ ಮಾತ್ರ ಗೆದ್ದಿತು.

ಜೆಡಿಎಸ್‌ನ ಜಾತಿ ರಾಜಕಾರಣದ ಫೌಂಡರ್ ಸದಾನಂದ ಒಳ್ಳಿ ಮತ್ತು 2ನೇ ವಾರ್ಡಿನಿಂದ ಲಕ್ಷ್ಮೀಬಾಯಿ ಕಟ್ಟಿಮನಿ ಗೆದ್ದಿದ್ದಾರೆ. ತನ್ನ ಪಕ್ಷಕ್ಕೇ ಕೊಳ್ಳಿ ಇಟ್ಟ ಒಳ್ಳಿ ಇನ್ನು ನಗರಸಭೆಯಲ್ಲೇನು ಕಡಿದು ಹಾಕುತ್ತಾನೆ ಎಂದು ಜನರೇ ಕೇಳುವಂತಾಗಿದೆ.

ಚೆಡ್ಡಿಗಳ ಕೊಳಕು ರಾಜಕಾರಣ

ಈ ಪ್ರದೇಶದಲ್ಲಿ ತೇಲಲಾರದ ದೋಣಿಯಂತಿದ್ದ ಬಿಜೆಪಿ ಇಷ್ಟೊಂದು ಬೆಳೆದು ನಿಲ್ಲಲು ಬಳ್ಳಾರಿಯ ಗಣಿ ಹಣ, ಹೆಂಡ ಮತ್ತು ಅದರ ಕೊಳಕು ಅಜೆಂಡಾ ಕೆಲಸ ಮಾಡಿದೆ ಎಂಬುದರ ಬಗ್ಗೆ ಯಾವುದೇ ಅನುಮಾನಗಳಿಲ್ಲ. ಜಿಲ್ಲಾ ಮಂತ್ರಿಯಾಗಿ ಶ್ರೀರಾಮುಲು ನಗರದಲ್ಲಿ ಕೈಗೊಂಡ ರಸ್ತೆ ಅಗಲೀಕರಣ, ಫುಟ್‌ಪಾತ್ ರಿಪೇರಿ, ಪಾರ್ಕ್ ನಿರ್ಮಾಣ, ಅವುಗಳಲ್ಲಿ ಮೂರ್ತಿ ಸ್ಥಾಪನೆ, ಚುನಾವಣಾ ಪೂರ್ವದಲ್ಲಿ ಮಾಡಿಸಿದ 650 ಜೋಡಿಗಳ ವಿವಾಹ ಇವೆಲ್ಲವೂ ಬಿಜೆಪಿಗೆ ಓಟ್‌ಬ್ಯಾಂಕ್ ಸೃಷ್ಟಿಸಿದ್ದವು.



ಆದರೆ ಎಚ್ಕೆ ಪಾಟೀಲರಿಗೆ ಬುದ್ಧಿ ಕಲಿಸಲು ಚೆಡ್ಡಿಗಳನ್ನು ಗೆಲ್ಲಿಸಿರುವ ಇಲ್ಲಿನ ಜನ ತಮ್ಮ ಹಳ್ಳವನ್ನು ತಾವೇ ತೋಡಿಕೊಂಡಂತಾಗಿದೆ. ಏಕೆಂದರೆ ಯಾವ ಅಧಿಕಾರವೂ ಇಲ್ಲದಿದ್ದಾಗಲೇ ಇವರು ಜಾತಿ ವೈಷಮ್ಯ ಮೂಡಿಸಿ ಊರಿಗೆ ಬೆಂಕಿ ಹಚ್ಚಿದ್ದರು. ಇಂತಹವರಿಗೆ ಅಧಿಕಾರ ಸಿಕ್ಕರೆ ಇನ್ನೆಂತಹ ದುರಂತಗಳು ಸಂಭವಿಸಬಹುದು ಎಂದು ಯೋಚಿಸಿದರೇ ಹೆದರಿಕೆಯಾಗುತ್ತದೆ.

ರವಿ ಸದ್ದಿಂಗ್, ಪ್ರಹ್ಲಾದ್ ಹೊಸಳ್ಳಿ, ಶ್ರೀಧರ ಕುಲಕರ್ಣಿ, ಬಸವನಗೌಡ ಬಿರಾದಾರನಂತಹ ಕೊಳ್ಳಿ ದೆವ್ವಗಳಿಗೆ ಈಗ ಮತ್ತಷ್ಟು ಬಲಬಂದಿದ್ದು ಸದ್ಯದಲ್ಲೇ ಮುತಾಲಿಕ ಎಂಬ ಬೆಂಕಿ ನಾಲಿಗೆಯವ ಗದಗಿಗೆ ಬಂದು ವಾಸ್ತವ್ಯ ಹೂಡಿದರೆ ಅಚ್ಚರಿ ಇಲ್ಲ. ಸದಾ ಒಡೆದು ಆಳುವ ಸಂಸ್ಕೃತಿಯ ಬಿಜೆಪಿಯು ದಕ್ಷ, ಪ್ರಾಮಾಣಿಕ ಆಡಳಿತ ನೀಡುವುದು ದೂರದ ಮಾತು.

ಶಾಂತಿ, ಸೌಹಾರ್ದ ಮತ್ತು ಸಹಬಾಳ್ವೆಯ ಪ್ರತೀಕದಂತಿರುವ ತೋಂಟದಾರ್ಯ ಸ್ವಾಮಿಗಳ ತವರೂರಾದ ಗದುಗಿನಲ್ಲೇ ಚೆಡ್ಡಿಗಳ ಆಳ್ವಿಕೆ ಪ್ರಾರಂಭವಾಗಲಿದೆ ಎಂದರೆ ಅದಕ್ಕಿಂತ ಇನ್ನೊಂದು ದುರಂತ ಇದೆಯೇ?

■ ಹುರಳಿಕುಪ್ಪೆ ವಿನಯ್

■ ಬೆಂಗಳೂರು ಜಿಲ್ಲಾ ಪಂಚಾಯಿತಿ ■

ಗಂಟುಕಳ್ಳ ಸತ್ಯಮೂರ್ತಿ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಸಿಇಓ ಸತ್ಯಮೂರ್ತಿಗೆ ಮೈತುಂಬಾ ಬಾಯಿಗಳೇ! ಇವನು ಸರ್ಕಾರಿ ಹಣ ನುಂಗುತ್ತಿರುವ ವೇಗ ನೋಡಿದರೆ ಇನ್ನೇನು ಕೆಲವೇ ದಿನಗಳಲ್ಲಿ ಇಡೀ ಜಿಲ್ಲಾ ಪಂಚಾಯಿತಿ ದಿವಾಳಿಯಾಗಿದೆ ಎಂದು ಘೋಷಿಸಬೇಕಾಗಿ ಬಂದರೂ ಆಶ್ಚರ್ಯವಿಲ್ಲ. ಮೊನ್ನೆ ಅಕ್ಟೋಬರ್ 16ರಂದು ನಡೆದ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಪಕ್ಷಭೇದ ಮರೆತು ಎಲ್ಲಾ ಸದಸ್ಯರು ಬಾಯಿಗೆ ಬಂದಂತೆ ಬೈಯ್ದರೂ ಈ ಸತ್ಯಮೂರ್ತಿ ಬರೀ ಸುಳ್ಳುಗಳನ್ನೇ ಹೇಳಿ ಪಾರಾಗುವ ಯತ್ನ ನಡೆಸಿದ್ದಾನೆ.



2007-08ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಭೆಯ ಗಮನಕ್ಕೇ ತಾರದೆ ನೇರ ಸರ್ಕಾರಕ್ಕೆ ಕಳುಹಿಸಿ ಸರ್ವಾಧಿಕಾರಿ ಧೋರಣೆ ಪ್ರದರ್ಶಿಸಿರುವ ಸತ್ಯಮೂರ್ತಿ ಜೊತೆಗೆ ಹಾಲಿ ಹೊಸ ಅಧ್ಯಕ್ಷ ಮುನಿಯಪ್ಪ ಶಾಮೀಲಾಗಿದ್ದಾರೆಂಬ ಅನುಮಾನ ಎಲ್ಲರಿಗೂ ಬಂದುಬಿಟ್ಟಿದೆ. ಸತ್ಯಮೂರ್ತಿಯ ತಪ್ಪುಗಳನ್ನು ಸದಸ್ಯರು ಎತ್ತಿ ತೋರಿಸಿದರೂ ಮುನಿಯಪ್ಪ ಮಾತ್ರ "ಆಯ್ತು ಬಿಡಿ ಸಿಇಓರಿಂದ ತಪ್ಪಾಗಿದೆ. ಮುಂದೆ ಹಾಗಾಗದಂತೆ ನೋಡಿಕೊಳ್ಳೋಣ" ಎಂಬ ರೆಡಿಮೇಡ್ ಉತ್ತರ ಸದಸ್ಯರಿಗೆ ಸಿಗುತ್ತಿದೆ.

ಕುಡಿಯುವ ನೀರಿನ ಬಾಬ್ತಿಗೆಂದು ಸರ್ಕಾರದಿಂದ 16 ಕೋಟಿ ಹಣ ಬಂದಿದ್ದರೆ ಅದರಲ್ಲಿ 2.5 ಕೋಟಿ ಗ್ರಾಮ ಪಂಚಾಯಿತಿಗಳಿಗೆ ಕೊಟ್ಟು ಉಳಿದ 13.5 ಕೋಟಿಯನ್ನು ಸತ್ಯಮೂರ್ತಿ ಜಿಲ್ಲಾ ಪಂಚಾಯಿತಿ ಲೆವೆಲ್‌ನಲ್ಲೇ [illegible]. ಆದರೆ [illegible]

ಜಿಲ್ಲಾ ಪಂಚಾಯಿತಿಗೆ ಈ ಸಾಲಿನಲ್ಲಿ ಸರ್ಕಾರದಿಂದ ಒಟ್ಟು 380 ಕೋಟಿ ಅನುದಾನ ಬಂದಿದ್ದು ಅದರಲ್ಲಿ 60 ಕೋಟಿ ರೂಪಾಯಿ ಮಂಗಮಾಯವಾಗಿದೆ. ಯಾವ ಬಾಬ್ತಿಗೆ ಎಷ್ಟು ಖರ್ಚಾಗಿದೆ ಎಂಬುದು ಸ್ವತಃ ಮುಖ್ಯ ಲೆಕ್ಕಾಧಿಕಾರಿ ಖಂಡ್ರಾರಿಗೇ ಗೊತ್ತಿಲ್ಲ. ಯೋಜನೆಯೊಂದರಡಿ ಬಂದಿದ್ದ 2 ಕೋಟಿಯಲ್ಲಿ ಜಿಲ್ಲೆಯ 4 ತಾಲ್ಲೂಕುಗಳಿಗೆ ತಲಾ 40 ಲಕ್ಷದಂತೆ 1.60 ಕೋಟಿ ಕೊಟ್ಟು ಉಳಿದ 40 ಲಕ್ಷ ಇವರಿಬ್ಬರೂ ತಿಂದು ತೇಗಿರುವ ಅನುಮಾನವಿದೆ. ಇದು ಸಾಕಾಗಲಿಲ್ಲವೆಂಬಂತೆ ಮತ್ತೆ 2 ಕೋಟಿ ವಿಶೇಷ ಅನುದಾನ ನೀಡುವಂತೆ ಸತ್ಯಮೂರ್ತಿ-ಖಂಡ್ರಾರ ಜೋಡಿ ಸರ್ಕಾರಕ್ಕೆ ಪತ್ರ ಬರೆದಿದೆ. ಎಂದಿನಂತೆ ಯಾವ ಸದಸ್ಯರಿಗೂ-ಸಭೆಗೂ ಇಷ್ಟು ಹಣ ಯಾಕೆ ಬೇಕು ಎಂದು ವಿವರಿಸಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ಹಣಕಾಸು ಇಲಾಖೆಯಲ್ಲಿ ಲೂಟಿ ಮಾಡಿ. ಲಂಚ ಕೊಟ್ಟು ಕೋಟ್ಯಂತರ ಅನುದಾನ ಬಿಡುಗಡೆ ಮಾಡಿಸಿಕೊಂಡು ತಂದು ಅಭಿವೃದ್ಧಿ ಕಾಮಗಾರಿ ಹೆಸರಲ್ಲಿ ಕಳ್ಳಗಂಟು ಮಾಡಿಕೊಳ್ಳುವುದೇ ಇವರಿಬ್ಬರ ನಿತ್ಯಕಾಯಕ.

ಈಗಾಗಲೇ ಗ್ರಾಮ ಪಂಚಾಯಿತಿಗಳಿಗೆ [illegible] ಮೂಲಕ ಕಂಪ್ಯೂಟರ್ ಖರೀದಿಸುವ ಡೀಲ್‌ನಲ್ಲಿ ಕೋಟ್ಯಂತರ ರೂಪಾಯಿ ಅವ್ಯವಹಾರಕ್ಕೆ ಸತ್ಯಮೂರ್ತಿಯೇ ಕಾರಣ ಎಂಬುದಕ್ಕೆ ಸಾಕ್ಷಿಗಳು ಸಿಕ್ಕಿವೆ. ಇವನ ಪರಿಚಯದ ಆರ್.ಕೆ. ಸೆಕ್ಯುರಿಟೀಸ್ ಸಂಸ್ಥೆಗೂ ಜಿಲ್ಲಾ ಪಂಚಾಯಿತಿ ಹಣವನ್ನು ಡಿಪಾಸಿಟ್ ಮಾಡುವುದೊಂದೇ [illegible] ಪಡಿಸಿದ್ದಾನೆ. ವಿರೋಧಿಕರವಾದ ನಿಯಮಗಳಿಗೇ [illegible] ಸತ್ಯಮೂರ್ತಿ ಹಾಗೂ ಖಂಡ್ರಾರಿಯವರ [illegible] ಗಮನ ಹರಿಸಬೇಕಿದೆ. ■

ಬಿಳಿ ಕೂದಲಿನ ಮುದುಕನೊಬ್ಬ ನನ್ನ ಮುಂದೆ ಭಿಕ್ಷೆ ಬೇಡುತ್ತಾ ನಿಂತಾಗ ನನ್ನ ಸ್ನೇಹಿತ ಗೋವಿಂದ ತನ್ನ ಜೇಬಿನಿಂದ ಐದು ರೂಪಾಯಿಗಳ ನಾಣ್ಯವನ್ನು ತೆಗೆದು ಆ ಮುದುಕನಿಗೆ ಕೊಟ್ಟ. ಆತ ಹೀಗೆ ಹಣ ನೀಡಿದ್ದನ್ನು ಕಂಡು ಅಚ್ಚರಿಗೊಂಡ ನನ್ನ ಮುಖವನ್ನು ನೋಡಿದ ಗೋವಿಂದ ಹೇಳಿದ:

“ಆ ಬಡ ನತದೃಷ್ಟ ಮುದುಕ ನನ್ನಲ್ಲಿ ಒಂದು ನೆನಪಿನ ಕತೆಯನ್ನು ಕೆದಕಿದ. ಆ ಕತೆಯನ್ನು ಹೇಳುತ್ತೇನೆ ಕೇಳು:

ನಾವು ಮಂಡ್ಯದ ಹತ್ತಿರವಿರುವ ಹಳ್ಳಿಯವರಾದರೂ ನಮ್ಮದೇನು ಸಾಹುಕಾರರ ಕುಟುಂಬವಲ್ಲ. ಅದು ಹೇಗೋ ಖರ್ಚು ವೆಚ್ಚಗಳನ್ನು ತೂಗಿಸಿಕೊಂಡು ಹೋಗುತ್ತಿದ್ದ ಸಂಸಾರ ನಮ್ಮದು. ಸರಕಾರದ ಗುಮಾಸ್ತನಾಗಿದ್ದ ನನ್ನ ಅಪ್ಪ ಕಷ್ಟಪಟ್ಟು ದುಡಿಯುತ್ತಿದ್ದ. ದಿನವಿಡೀ ಕೆಲಸ ಮಾಡಿ ಸರಿ ಹೊತ್ತಿಗೆ ಮನೆಗೆ ಬರುತ್ತಿದ್ದ. ಆದರೆ ಆತನಿಗೆ ಬರುತ್ತಿದ್ದ ಸಂಬಳ ಕಡಿಮೆ. ನನಗೆ ಇಬ್ಬರು ಅಕ್ಕಂದಿರು.

ನಮ್ಮ ಆ ಆರ್ಥಿಕ ಪರಿಸ್ಥಿತಿಯಲ್ಲಿ ಅಮ್ಮ ಅಷ್ಟೇನು ಕಷ್ಟಪಡಲಿಲ್ಲ. ಸದಾ ನನ್ನಪ್ಪನನ್ನು ಕೊಂಕು ಮಾತುಗಳಲ್ಲಿ ಛೇಡಿಸುತ್ತಿದ್ದಳು. ಆಕೆ ಹಾಗೆ ಮಾತನಾಡಿದಾಗಲೆಲ್ಲ ಅಪ್ಪ ಪ್ರತಿಕ್ರಿಯಿಸುತ್ತಿದ್ದ ರೀತಿ ನನ್ನಲ್ಲಿ ದುಃಖವನ್ನು ಮೂಡಿಸುತ್ತಿತ್ತು. ತನ್ನ ಹಣೆ ಮೇಲೆ ಬೆವರಿಲ್ಲದಿದ್ದರೂ ಆತ ಅದನ್ನು ಒರೆಸಿಕೊಳ್ಳುತ್ತಿರುವವರಂತೆ ತನ್ನ ಹಣೆಯನ್ನು ಉಜ್ಜಿಕೊಳ್ಳುತ್ತಾ ಮೌನವಾಗಿರುತ್ತಿದ್ದರು. ಆತನ ಅಸಹಾಯಕತೆ ನನ್ನನ್ನು ತೀವ್ರವಾಗಿ ತಾಗುತ್ತಿತ್ತು. ಹಣವಿಲ್ಲದಿದ್ದರಿಂದ ನಾವು ಎಲ್ಲದರಲ್ಲೂ ಜುಗ್ಗುತನ ಮಾಡುತ್ತಿದ್ದೆವು. ಎಷ್ಟರ ಮಟ್ಟಿಗೆಂದರೆ ಯಾರಾದರೂ ನಮ್ಮನ್ನು ಅವರ ಮನೆಗೆ ಊಟಕ್ಕೆಂದು ಕರೆದರೆ ನಾವು ಹೋಗುತ್ತಿರಲಿಲ್ಲ. ಹಾಗೆ ಹೋದರೆ ಅವರನ್ನೂ ನಮ್ಮ ಮನೆಗೆ ಊಟಕ್ಕೆ ಕರೆಯಬೇಕಾಗುತ್ತದಲ್ಲ ಎಂಬ ಮುಜುಗರದಿಂದ. ನಾವು ಕೊಂಡುಕೊಳ್ಳುತ್ತಿದ್ದದ್ದೆಲ್ಲವೂ ರೇಷನ್ ಅಂಗಡಿಗಳಲ್ಲಿ, ರಿಯಾಯಿತಿ ನೀಡುತ್ತಿದ್ದ ದುಕಾನುಗಳಲ್ಲಿ, ತಮ್ಮ ಬಟ್ಟೆಗಳನ್ನು ತಾವೇ ಹೊಲಿದುಕೊಳ್ಳುತ್ತಿದ್ದ ನನ್ನ ಅಕ್ಕಂದಿರು ದಾರದ ರೇಟಿನ ಬಗ್ಗೆಯೂ ಗಂಟೆಗಟ್ಟಲೆ ಚರ್ಚಿಸುತ್ತಿದ್ದರು.

ನಾವು ತಿನ್ನುತ್ತಿದ್ದದ್ದೂ ವಿವಿಧ ರೀತಿಯ ಸಾರುಗಳೊಂದಿಗೆ ಮುದ್ದೆಯನ್ನು, ಆರೋಗ್ಯಕ್ಕೆ ಮುದ್ದೆ ಒಳ್ಳೆಯದೆಂದು ಹೇಳುತ್ತಾರೆ. ಆದರೆ ಆಗೀಗೊಮ್ಮೆಯಾದರೂ ಅನ್ನ ಸಿಕ್ಕರೆ ಎಷ್ಟು ಚೆಂದ ಅನ್ನಿಸುತ್ತಿತ್ತು ನನಗೆ. ಗುಂಡಿಯಿಲ್ಲದ ಅಂಗಿಗಳು, ಹರಿದು ಹೋಗಿದ್ದ ಪ್ಯಾಂಟಿನಿಂದಾಗಿ ನಾನು ಪಟ್ಟಪಾಡು ಅಷ್ಟಿಷ್ಟಲ್ಲ.

ವಿಶೇಷ ಸಂದರ್ಭಗಳಲ್ಲಿ ನಾವೆಲ್ಲ ಒಟ್ಟಿಗೆ ಹೊರಡುತ್ತಿದ್ದೆವು. ನನ್ನಪ್ಪ ಮನೆಯಲ್ಲಿದ್ದ ಒಂದೇ ಒಂದು ಹಳೇ ಜರತಾರಿ ಪಂಚೆ, ಅದರ ಮೇಲೊಂದು ಹಳೆಯ ಕಾಲದ ಕೋಟು ಧರಿಸಿ ಸಜ್ಜಾಗುತ್ತಿದ್ದರು. ನನ್ನಮ್ಮ ಒಂದು ರೇಷ್ಮೆ ಸೀರೆಯನ್ನುಟ್ಟು ಮನೆಯಲ್ಲಿದ್ದ ಒಂದು ಜೊತೆ ಚಿನ್ನದ ಬಳೆ ಮತ್ತು ಬೆಂಡೋಲೆ ಧರಿಸಿಕೊಳ್ಳುವುದನ್ನೇ ಶೃಂಗಾರ ಎಂದುಕೊಂಡಿದ್ದಳು. ಹೀಗೆ ಹೊರಟುನಿಂತಾಗ ಆಕಸ್ಮಾತ್ ಅಪ್ಪನ ಪಂಚೆಯ ಮೇಲೆ ಕಲೆಯೊಂದು ಕಾಣಿಸಿಕೊಂಡರೆ ದೊಡ್ಡ ಅನಾಹುತವೇ ಸಂಭವಿಸಿದಂತಾಗುತ್ತಿತ್ತು. ನನ್ನ ಅಕ್ಕಂದಿರು ಕೂಡಲೇ ಪೆಟ್ರೋಲ್ ತಂದು ಆ ಕಲೆಯನ್ನು ಒರೆಸಿ ಶುದ್ಧಗೊಳಿಸುವ ಹೊತ್ತಿಗೆ ಅಮ್ಮ ಚಡಪಡಿಸಲಾರಂಭಿಸುತ್ತಿದ್ದಳು.

ಕೊನೆಗೂ ಮನೆಯಿಂದ ನಾವೆಲ್ಲಾ ಹೊರಟಾಗ ನನ್ನ ಅಕ್ಕಂದಿರು ಮುಂದೆ ನಡೆಯುತ್ತಿದ್ದರು. ಅವರಿಬ್ಬರೂ ಮದುವೆ ವಯಸ್ಸಿಗೆ ಬಂದಿದ್ದರಿಂದ ಅವರು ಎಲ್ಲರ ಕಣ್ಣಿಗೆ ಬೀಳಲೆಂದೇ ಮುಂದೆ ಹೋಗುತ್ತಿದ್ದರೋ ಏನೋ. ನಾನು ಅಪ್ಪನ ಎಡಕ್ಕೆ, ಅಪ್ಪನ ಬಲಕ್ಕೆ ಅಮ್ಮ ಹೀಗೆ ನಡೆಯುತ್ತಿದ್ದೆವು.

ಬಡವರಾಗಿದ್ದ ನಾವು ಹೀಗೆ ಶೃಂಗಾರಭೂಷಿತರಾಗಿ ಠೀವಿಯಿಂದ ನಡೆಯುತ್ತಿದ್ದ ರೀತಿ ನನಗಿನ್ನೂ ಚೆನ್ನಾಗಿ ನೆನಪಿದೆ. ಸೆಟೆದುಕೊಂಡಿದ್ದ ಬೆನ್ನೆಲುಬು, ಚಲಿಸಲಾರದಷ್ಟು ಗಟ್ಟಿಯಾಗಿದ್ದ ಕಾಲುಗಳು, ಗರ್ವದಿಂದ ತುಂಬಿದ್ದ ಮುಖಗಳು.... ಅದೆಂತಹ ಆಡಂಬರ.



ಗುಂಡ ಚಿಕ್ಕಪ್ಪ

ಗುಂಡ, ಅಂದರೆ ನನ್ನಪ್ಪನ ತಮ್ಮ, ನಮ್ಮ ಸಂಸಾರಕ್ಕೆ ಇದ್ದ ಒಂದೇ ಒಂದು ಆಶಾಕಿರಣ. ಹಿಂದೊಮ್ಮೆ ಈ ಕುಟುಂಬದ ನಾಶಕ್ಕೂ ಆತನೇ ಕಾರಣನಾಗಿದ್ದ ಎಂಬುದು ಬೇರೆ ಮಾತು. ಇರಲಿ, ನಾನು ಚಿಕ್ಕವನಾಗಿದ್ದಾಗಿನಿಂದಲೂ ಈ ಗುಂಡ ಚಿಕ್ಕಪ್ಪನ ಬಗ್ಗೆ ಎಷ್ಟು ಕೇಳಿದ್ದೆನೆಂದರೆ ನಾನೆಂದೂ ಆತನನ್ನು ಭೇಟಿ ಆಗಿಲ್ಲದಿದ್ದರೂ ಆತನನ್ನು ಕಂಡ ಕೂಡಲೇ ಗೊತ್ತು ಹಿಡಿಯುತ್ತಿದ್ದೆ ಎಂದೆನಿಸುತ್ತಿತ್ತು. ನಮ್ಮ ಮನೆಯಲ್ಲಿ ಗುಂಡ ಚಿಕ್ಕಪ್ಪನ ಬಗ್ಗೆ ಪಿಸುಮಾತಿನಲ್ಲೇ ಚರ್ಚಿಸುತ್ತಿದ್ದರೂ ಆತ ಮುಂಬೈಗೆ ಹೋದ ದಿನದವರೆಗಿನ ಆತನ ಬದುಕಿನ ಪ್ರತಿ ಅಂಶವೂ ನನಗೆ ಗೊತ್ತಾಗಿತ್ತು.

ಹೀಗೆ ನಡೆದು ಹೋಗುತ್ತಿದ್ದಾಗ ವಾರಕ್ಕೊಮ್ಮೆ ನಮ್ಮೂರಿಗೆ ಬರುತ್ತಿದ್ದ ರೈಲು ಸೀಟಿ ಹೊಡೆಯುತ್ತಾ ನಿಲ್ದಾಣಕ್ಕೆ ಬಂದರೆ ನನ್ನಪ್ಪ ಪ್ರತಿ ಬಾರಿ ತಪ್ಪದೇ ಉದ್ಗಾರವೆತ್ತುತ್ತಿದ್ದ:

“ಆ ರೈಲಿನಿಂದ ನಮ್ಮ ಗುಂಡ ಇದ್ದಕ್ಕಿದ್ದಂತೆ ಇಳಿದುಬಂದರೆ ಏನಚ್ಚರಿ ಇಲ್ಲ, ಅಲ್ಲವಾ?”

ಗುಂಡ, ಅಂದರೆ ನನ್ನಪ್ಪನ ತಮ್ಮ, ನಮ್ಮ ಸಂಸಾರಕ್ಕೆ ಇದ್ದ ಒಂದೇ ಒಂದು ಆಶಾಕಿರಣ. ಹಿಂದೊಮ್ಮೆ ಈ ಕುಟುಂಬದ ನಾಶಕ್ಕೂ ಆತನೇ ಕಾರಣನಾಗಿದ್ದ ಎಂಬುದು ಬೇರೆ ಮಾತು. ಇರಲಿ, ನಾನು ಚಿಕ್ಕವನಾಗಿದ್ದಾಗಿನಿಂದಲೂ ಈ ಗುಂಡ ಚಿಕ್ಕಪ್ಪನ ಬಗ್ಗೆ ಎಷ್ಟು ಕೇಳಿದ್ದೆನೆಂದರೆ ನಾನೆಂದೂ ಆತನನ್ನು ಭೇಟಿ ಆಗಿಲ್ಲದಿದ್ದರೂ ಆತನನ್ನು ಕಂಡ ಕೂಡಲೇ ಗೊತ್ತು ಹಿಡಿಯುತ್ತಿದ್ದೆ ಎಂದೆನಿಸುತ್ತಿತ್ತು. ನಮ್ಮ ಮನೆಯಲ್ಲಿ ಗುಂಡ ಚಿಕ್ಕಪ್ಪನ ಬಗ್ಗೆ ಪಿಸುಮಾತಿನಲ್ಲೇ ಚರ್ಚಿಸುತ್ತಿದ್ದರೂ ಆತ ಮುಂಬೈಗೆ ಹೋದ ದಿನದವರೆಗಿನ ಆತನ ಬದುಕಿನ ಪ್ರತಿ ಅಂಶವೂ ನನಗೆ ಗೊತ್ತಾಗಿತ್ತು.

ಆತ ಬದ್ಮಾಷ್ ಆಗಿದ್ದನಂತೆ. ಬಡ ವಂಶವೊಂದರ ಚೂರುಪಾರು ಹಣವನ್ನೆಲ್ಲ ಪೋಲು ಮಾಡುವುದಕ್ಕಿಂತ ದೊಡ್ಡ ಅಪರಾಧ ಇನ್ನೊಂದಿರಲಾರದು. ಸಾಹುಕಾರರ ಮನೆಯ ಯುವಕನೊಬ್ಬ ಹೀಗೆ ಹಣವನ್ನು ಪೋಲು ಮಾಡಿದರೆ ಆತನನ್ನು ಮೋಜಿನ ವ್ಯಕ್ತಿ ಎಂದು ಕರೆಯುತ್ತಾರೆ. ಆದರೆ ಬಡವರ ಮನೆಯೊಂದರ ಯುವಕ ತನ್ನ ತಂದೆ ತಾಯಂದಿರ ಹಣವನ್ನೆಲ್ಲ ದುಂದುವೆಚ್ಚ ಮಾಡಿದರೆ ಆತನನ್ನು ರಾಸ್ಕಲ್ ಎಂದೇ ಕರೆಯುತ್ತಾರೆ. ಅವರಿಬ್ಬರ ಕೃತ್ಯ ಒಂದೇ ತರಹದ್ದಾಗಿದ್ದರೂ ಅದರ ಪರಿಣಾಮಗಳು ಬೇರೆ ಬೇರೆ ಆಗಿರುವುದರಿಂದ ಹೀಗೆ ಬೇರೆ ಬೇರೆ ರೀತಿ ವರ್ಣಿಸುತ್ತಾರೆನಿಸುತ್ತದೆ.

ನನ್ನ ಗುಂಡ ಚಿಕ್ಕಪ್ಪ ತನ್ನ ಪಾಲಿನ ಪಿತ್ರಾರ್ಜಿತ ಆಸ್ತಿಯನ್ನು ಮಾತ್ರ ಕರಗಿಸಿರಲಿಲ್ಲ, ನನ್ನ ಅಪ್ಪನ ಪಾಲಿನ ಆಸ್ತಿಯನ್ನೂ ನುಂಗಿಹಾಕಿದ್ದ. ಆಗಲೇ ಆತ ತನ್ನ ಜೀವನಕ್ಕೊಂದು ದಾರಿ ಹುಡುಕಿಕೊಳ್ಳಲಿ ಎಂದು ಮುಂಬೈಗೆ ಸಾಗಹಾಕಿದ್ದು.

ಮುಂಬೈಯಲ್ಲಿ ಚಿಕ್ಕಪುಟ್ಟ ಕೆಲಸಗಳನ್ನು ಮಾಡಲಾರಂಭಿಸಿದ ಗುಂಡ ಚಿಕ್ಕಪ್ಪ ಅಲ್ಲಿಂದೊಂದು ಪತ್ರ ಬರೆದು “ಈ ಹೊಸ ವ್ಯವಹಾರದಲ್ಲಿ ಲಾಭ ಕಾಣುತ್ತಿದ್ದೇನೆ. ಸದ್ಯದಲ್ಲೇ ನಿನಗೆ ನೀಡಬೇಕಿರುವ ನಿನ್ನ ಪಾಲಿನ ಹಣವನ್ನು ಹಿಂದಿರುಗಿಸುತ್ತೇನೆ” ಎಂದು ನನ್ನಪ್ಪನಿಗೆ ತಿಳಿಸಿದ್ದ. ಈ ಪತ್ರ ನಮ್ಮ ಮನೆಯವರಲ್ಲೆಲ್ಲ ಸಂಚಲನವನ್ನೇ ಉಂಟುಮಾಡಿತು. ಅಲ್ಲಿಯವರೆಗೂ ನಮ್ಮವರ ಕಣ್ಣಿನಲ್ಲಿ ಸಾಸಿವೆ ಕಾಳಿನಷ್ಟು ಮೌಲ್ಯವನ್ನೂ ಹೊಂದಿರದಿದ್ದ ಗುಂಡ ಚಿಕ್ಕಪ್ಪ ಇದ್ದಕ್ಕಿದ್ದಂತೆ ಒಳ್ಳೆಯ ಮನುಷ್ಯನಾದ. ನಮ್ಮ ವಂಶದ ಹೆಸರಿಗೆ ತಕ್ಕಂತಹ ನೈತಿಕತೆ ಮತ್ತು ಜವಾಬ್ದಾರಿಯನ್ನು ಹೊಂದಿರುವ ಮಹಾಪುರುಷನಾದ. ಇದಕ್ಕೆ ತಕ್ಕಂತೆ ಆತನ ಮಿತ್ರನೊಬ್ಬ ಒಂದು ದಿನ ನಮ್ಮ ಮನೆಗೆ ಬಂದು ಗುಂಡ ಚಿಕ್ಕಪ್ಪ ಮುಂಬೈನಲ್ಲಿ ದೊಡ್ಡ ಅಂಗಡಿ ನಡೆಸುತ್ತಿದ್ದಾನೆಂದೂ ಪ್ರಮುಖ ಉದ್ಯಮವೊಂದರಲ್ಲಿ ತೊಡಗಿದ್ದಾನೆಂದೂ ಹೇಳಿದ.

ಇದಾದ ಎರಡು ವರ್ಷಗಳ ನಂತರ ಗುಂಡ ಚಿಕ್ಕಪ್ಪನಿಂದ ಮತ್ತೊಂದು ಪತ್ರ ಬಂತು. ಅದರಲ್ಲಿ “ಪ್ರೀತಿಯ ಶ್ರೀನಿವಾಸಣ್ಣ, ನೀವೆಲ್ಲ ಕ್ಷೇಮ ಎಂದು ನಂಬಿದ್ದೇನೆ. ನಾನೂ ಇಲ್ಲಿ ಕ್ಷೇಮವಾಗಿದ್ದೇನೆ. ನನ್ನ ವ್ಯವಹಾರ ಚೆನ್ನಾಗಿ ನಡೆಯುತ್ತಿದೆಯಲ್ಲದೆ ನನ್ನ ಆರೋಗ್ಯವೂ ಚೆನ್ನಾಗಿದೆ. ನನ್ನನ್ನು ಕುರಿತಂತೆ ನೀವು ಯಾವುದರ ಬಗ್ಗೆಯೂ ಚಿಂತಿಸಬೇಡಿ. ಸದ್ಯದಲ್ಲೇ ನಾನು 'ದುಬೈಗೆ ಸ್ಥಳಾಂತರಗೊಳ್ಳುತ್ತಿದ್ದೇನೆ. ಅಲ್ಲಿ ಎಷ್ಟು ದಿನ ಇರುತ್ತೇನೆಂದು ಗೊತ್ತಿಲ್ಲ, ಸಾಧ್ಯವಾದಾಗ ನಾನು ಪತ್ರ ಬರೆಯುತ್ತೇನೆ. ಆದರೆ ನಾನು ಪತ್ರ ಬರೆಯದಿದ್ದರೆ ನೀವು ಚಿಂತಿಸಬೇಕಿಲ್ಲ, ನಾನು ಸಾಕಷ್ಟು ಹಣ ಮಾಡಿದ ನಂತರ ಊರಿಗೆ ಹಿಂದಿರುಗಿ ನಿಮ್ಮ ಸಾಲವನ್ನೆಲ್ಲ ಭರಿಸುತ್ತೇನೆ. ಆಮೇಲೆ ನಾವೆಲ್ಲ ಒಟ್ಟಿಗೆ ಸಂತೋಷದಿಂದ ಜೀವಿಸೋಣ...” ಎಂದೆಲ್ಲ ಗುಂಡ ಚಿಕ್ಕಪ್ಪ ಬರೆದಿದ್ದ.

ಆ ಪತ್ರ ನಮ್ಮ ಕುಟುಂಬದವರ ಜೀವವೇ ಆಯಿತು. ಅವಕಾಶ ಸಿಕ್ಕಾಗಲೆಲ್ಲ ಅದನ್ನು ಕೂಲಂಕಷವಾಗಿ ಚರ್ಚಿಸಿದ್ದೇನು, ಬಂದವರಿಗೆಲ್ಲ ಅದನ್ನು ತೋರಿಸಿ ಸಂಭ್ರಮಪಟ್ಟಿದ್ದೇನು.

ಅದಾದ ಹತ್ತು ವರ್ಷಗಳ ಕಾಲ ಗುಂಡ ಚಿಕ್ಕಪ್ಪನಿಂದ ಯಾವ ಪತ್ರವೂ ಬರಲಿಲ್ಲ, ಆದರೆ ವರ್ಷಗಳುರುಳುತ್ತಿದ್ದಂತೆ ನನ್ನ ಅಪ್ಪನ ಕನಸುಗಳು ರೆಕ್ಕೆಪುಕ್ಕಗಳನ್ನು ಪಡೆಯಲಾರಂಭಿಸಿದವು. ನನ್ನ ಅಮ್ಮ ಕೂಡ ಕೆಲವೊಮ್ಮೆ “ಗುಂಡ ಹಿಂದಿರುಗಿದ ನಂತರ ನಮ್ಮ ಪರಿಸ್ಥಿತಿ ಬದಲಾಗುತ್ತೆ, ಈ ಜಗತ್ತಿನಲ್ಲಿ ಈಜಿ ಗೆಲ್ಲಲು ಅವನಿಗಿಂತ ಯಾರಿಗೆ ಗೊತ್ತು ಹೇಳಿ” ಎಂದು ಉದ್ಗಾರವೆತ್ತುತ್ತಿದ್ದರು.

ಈ ಮಧ್ಯೆ ನಮ್ಮೂರಿಗೆ ರೈಲು ಗಾಡಿ ಬಂದಾಗಲೆಲ್ಲ “ಆ ರೈಲಿನಿಂದ ನಮ್ಮ ಗುಂಡ ಇದ್ದಕ್ಕಿದ್ದಂತೆ ಇಳಿದುಬಂದರೆ ಏನಚ್ಚರಿ ಇಲ್ಲ, ಅಲ್ಲವಾ?” ಎಂದು ಹೇಳುವುದನ್ನು ಮಾತ್ರ ಅಪ್ಪ ಮರೆಯುತ್ತಿರಲಿಲ್ಲ.

ಇದು ಯಾವ ಹಂತ ತಲುಪಿತೆಂದರೆ ಯಾವುದೇ ಕ್ಷಣ ಗುಂಡ ಚಿಕ್ಕಪ್ಪ ಆ ರೈಲಿನಿಂದ ಇಳಿದು “ಶ್ರೀನಿವಾಸಣ್ಣಾ” ಎಂದು ಉದ್ಗರಿಸುತ್ತಾ ಅಪ್ಪನನ್ನು ಅಪ್ಪಿಕೊಳ್ಳಬಹುದು ಎನಿಸುತ್ತಿತ್ತು.

ಗುಂಡ ಚಿಕ್ಕಪ್ಪ ಸದ್ಯದಲ್ಲೇ ಹಾಗೆ ಪ್ರತ್ಯಕ್ಷನಾಗುತ್ತಾನೆ ಎಂಬ ನಂಬಿಕೆಯ ಬಲದ ಮೇಲೆಯೇ ನನ್ನ ಅಪ್ಪ ಹಲವಾರು ಕನಸುಗಳನ್ನು, ಯೋಜನೆಗಳನ್ನು ಕಟ್ಟಿದ್ದರು. ಗುಂಡ ಚಿಕ್ಕಪ್ಪ ಹಿಂದಿರುಗಿಸಲಿದ್ದ ಹಣದಲ್ಲಿ ಊರಿನಲ್ಲೊಂದು ಚಿಕ್ಕ ಮನೆ, ಊರಿನ ಹತ್ತಿರದಲ್ಲೇ ಒಂದು ಪುಟ್ಟ ತೋಟ..... ಇಂತಹ ಯೋಜನೆಗಳು.

ಆಗ ನನ್ನ ದೊಡ್ಡಕ್ಕನಿಗೆ ಇಪ್ಪತ್ತೆಂಟು, ಚಿಕ್ಕಕ್ಕನಿಗೆ ಇಪ್ಪತ್ತಾರು ವರ್ಷ ವಯಸ್ಸು. ಅವರಿಬ್ಬರಿಗೂ ಇನ್ನೂ ಮದುವೆ ಆಗಿರದಿದ್ದದ್ದೇ ಎಲ್ಲರ ದುಃಖಕ್ಕೆ ಕಾರಣವಾಗಿತ್ತು.

ಕೊನೆಗೊಂದು ದಿನ ನನ್ನ ಚಿಕ್ಕಕ್ಕಳನ್ನು ಮದುವೆ ಆಗುವುದಕ್ಕೆ ಒಬ್ಬ ಮುಂದಾದ. ಗುಮಾಸ್ತನಾಗಿದ್ದ ಆತ ಸಾಹುಕಾರನೇನಾಗಿರಲಿಲ್ಲ, ಆದರೆ ಗುಣವಂತ. ನನ್ನನ್ನು ಬಹಳಷ್ಟು ವರ್ಷಗಳಿಂದ ಕಾಡಿರುವ ಗುಮಾನಿ ಯಾವುದೆಂದರೆ ಆತ ನನ್ನ ಅಕ್ಕನನ್ನು ಮದುವೆಯಾಗುವುದಕ್ಕೆ ಮುಂದಾಗಿದ್ದಕ್ಕೆ ಕಾರಣ ಒಂದು ಸಂಜೆ ಗುಂಡ ಚಿಕ್ಕಪ್ಪನ ಪತ್ರವನ್ನು ತೋರಿಸಿದ್ದಿರಬಹುದೇ ಎಂಬುದು.

ಆತನನ್ನು ಮನೆಯವರೆಲ್ಲರೂ ಆದರದಿಂದ ಸ್ವಾಗತಿಸಿದರಲ್ಲದೆ, ಮದುವೆಯಾದ ನಂತರ ಎಲ್ಲರೂ ಬೆಂಗಳೂರಿಗೆ ರಜೆಯ ಮೇಲೆ ಹೋಗುವುದೆಂದು ನಿರ್ಧರಿಸಲಾಯಿತು.

ಬೆಂಗಳೂರಿಗೆ ಹೋಗುವುದೆಂದರೆ ಅದೆಷ್ಟೋ ಬಡ ಜನರಿಗೆ ವಿದೇಶಕ್ಕೆ ಹೋಗುವುದಕ್ಕೆ ಸಮ. ನಾವೆಲ್ಲ ಪ್ರತಿ ಕ್ಷಣ ಬೆಂಗಳೂರನ್ನು ನೋಡುವುದರ ಬಗ್ಗೆಯೇ ಕನಸು ಕಾಣಲಾರಂಭಿಸಿದೆವು.

ಕೊನೆಗೊಂದು ದಿನ ನಾವೆಲ್ಲರೂ ಹೊರಟೆವು. ಆ ದಿನ ನನ್ನ ನೆನಪಿನಲ್ಲಿ ಇನ್ನೂ ಅಚ್ಚಳಿಯದಂತೆ ಉಳಿದಿದೆ. ನಮ್ಮ ಮೂರು ಮತ್ತೊಂದು ಬ್ಯಾಗುಗಳ ಸುರಕ್ಷತೆ ಬಗ್ಗೆ ಅಪ್ಪ ತಲೆಕೆಡಿಸಿಕೊಂಡಿದ್ದರು. ನನ್ನಮ್ಮ ದಿಗ್ಭ್ರಾಂತಳಾಗಿ ದೊಡ್ಡಕ್ಕನ ಕೈ ಹಿಡಿದಿದ್ದಳು. ದೊಡ್ಡಕ್ಕ ತನ್ನ ತಂಗಿಯ ನೆರವಿಲ್ಲದೆ ಕಂಗಾಲಾಗಿದ್ದಳು. ನಮ್ಮೆಲ್ಲರ ಹಿಂದೆ ನನ್ನ ಚಿಕ್ಕಕ್ಕ ಮತ್ತಾಕೆಯ ಗಂಡ ನೆಮ್ಮದಿಯಿಂದ ನಡೆದುಬರುತ್ತಿದ್ದರು.

ರೈಲು ಗಾಡಿ ಸೀಟಿ ಹೊಡೆಯಿತು. ನಾವೆಲ್ಲ ರೈಲನ್ನೇರಿದೆವು. ರೈಲು ಸಾಗುತ್ತಿದ್ದಂತೆ ನಮ್ಮೂರು ದೂರ ಸಾಗುವುದನ್ನು ಕಿಟಕಿಯಿಂದಲೇ ನೋಡಿದೆವು. ಅಪರೂಪಕ್ಕೊಮ್ಮೆ ಪ್ರಯಾಣಿಸುವ ಜನರ ಉತ್ಸಾಹ ನಮ್ಮೆಲ್ಲರದ್ದಾಗಿತ್ತು.

ಜರತಾರಿ ಪಂಚೆ ಮತ್ತು ಕೋಟನ್ನು ಧರಿಸಿದ್ದ ನನ್ನಪ್ಪ ಅದರಲ್ಲಿನ ಕಲೆಗಳನ್ನು ಶುಭ್ರಗೊಳಿಸಲು ಉಪಯೋಗಿಸಿದ್ದ ಪೆಟ್ರೋಲಿನ ವಾಸನೆಯನ್ನು ಸೂಸುತ್ತಿದ್ದರು. ಹೀಗೆ ಪೆಟ್ರೋಲ್ ವಾಸನೆ ಸೂಸುತ್ತಾ ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದ ಅಪ್ಪನ ಕಣ್ಣಿಗೆ ರೈಲಿನ ಬೋಗಿಯಲ್ಲಿ ವಡೆ ಮಾರುತ್ತಿದ್ದ ಬಡವನೊಬ್ಬ ಕಂಡ. ಆತನಿಂದ ವಡೆ ಖರೀದಿಸಿದವರು ಅದನ್ನು ಆನಂದದಿಂದ ತಿನ್ನುತ್ತಿರುವುದನ್ನು ಗಮನಿಸಿದ ಅಪ್ಪ ತನ್ನ ಮಕ್ಕಳಿಗೂ ವಡೆ ಖರೀದಿಸಲು ಮುಂದಾದ.

“ವಡೆ ತಿನ್ನುತ್ತೀರೇನ್ರೋ?” ಎಂದು ಅಪ್ಪ ಕೇಳಿದ. ಎಲ್ಲರಿಗೂ ವಡೆ ಕೊಡಿಸಿದರೆ ಎಷ್ಟು ಖರ್ಚಾಗುತ್ತದೆ ಎಂದು ಕೂಡಲೇ ಲೆಕ್ಕಹಾಕಿದ ಅಮ್ಮ “ಬೇಕಿದ್ದರೆ ಅವರಿಗೆ ಕೊಡಿಸಿ. ಇವನಿಗೆ ಬೇಡ. ಗಂಡು ಮಕ್ಕಳಿಗೆ ಇಂತಹದ್ದೆಲ್ಲ

ಕೊಡಿಸಿ ಹಾಳು ಮಾಡುವುದು ಸರಿಯಲ್ಲ, ನನಗಂತೂ ಬೇಡವೇ ಬೇಡ, ಅಜೀರ್ಣ ಆಗುತ್ತೆ" ಎಂದಳು.


ನನಗೆ ಅನ್ಯಾಯ ಆಗುತ್ತಿದೆ ಎಂದು ಗೊತ್ತಿದ್ದರೂ ಅಮ್ಮನ ಪಕ್ಕದಲ್ಲೇ ಕೂತಿದ್ದ ನಾನು ಅಕ್ಕ ಅಕ್ಕಂದಿರು ಮತ್ತು ಹೊಸ ಮಾವ ಎಲ್ಲರೂ ವಡೆ ಮಾರುತ್ತಿದ್ದವನತ್ತ ಸಾಗಿದ್ದನ್ನು ನೋಡುತ್ತಾ ಕುಳಿತೆ. ಪುಟ್ಟ ಪೇಪರ್ ಪ್ಲೇಟುನಲ್ಲಿ ವಡೆ ಮತ್ತು ಚಟ್ನಿ ಪಡೆದ ಅಪ್ಪ ಅದನ್ನು ತಿನ್ನುವಾಗ ಚಟ್ನಿಯನ್ನೆಲ್ಲ ತಮ್ಮ ಪಂಚೆಯ ಮೇಲೆ ಬೀಳಿಸಿಕೊಂಡರು. ದೂರದಿಂದಲೇ ಅದನ್ನು ಕಂಡ ಅಮ್ಮ "ಅವರಿಗೆ ಸುಮ್ಮನಿರಕ್ಕಾಗಲ್ಲ, ಈಗ ಪಂಚೆನ ಗಲೀಜು ಮಾಡಿಕೊಂಡರು" ಎಂದು ಗೊಣಗ ಲಾರಂಭಿಸಿದಳು.

ಆದರೆ ಅದೇ ಕ್ಷಣ, ಯಾವ ಕಾರಣಕ್ಕೊ ಗೊತ್ತಿಲ್ಲ, ಅಪ್ಪನ ಮುಖ ಗಂಭೀರವಾಯಿತು ಎಂದು ನನಗೆ ಗೋಚರವಾಯಿತು. ಎರಡು ಹೆಜ್ಜೆ ಹಿಂದಕ್ಕೆ ತ್ವರಿಸಿದ ಅಪ್ಪ ನಮ್ಮತ್ತ ತಿರುಗಿ ನಡೆಯಲಾರಂಭಿಸಿದರು. ಅವರ ಮುಖ ಬಿಳಿಚಿಕೊಂಡಿತ್ತು. ನಮ್ಮನ್ನು ಸಮೀಪಿಸುತ್ತಿದ್ದಂತೆ ಮೆಲುದನಿಯಲ್ಲಿ ಅಮ್ಮನಿಗೆ ಹೇಳಿದರು:

"ಆ ವಡೆ ಮಾರುತ್ತಿರುವವನು ನಮ್ಮ ಗುಂಡನನ್ನು ಎಷ್ಟು ಹೋಲುತ್ತಾನೆ ಗೊತ್ತಾ?"

"ಯಾವ ಗುಂಡ?" ಎಂದು ಅಮ್ಮ ಕೋಪದ ದನಿಯಲ್ಲೇ ಕೇಳಿದರು.

"ಮತ್ತಿನ್ಯಾವ ಗುಂಡ? ನನ್ನ ತಮ್ಮ ಗುಂಡ. ಆತ ದುಬೈಯಲ್ಲಿ ದೊಡ್ಡ ವ್ಯಾಪಾರ ಮಾಡುತ್ತಿದ್ದಾನೆ ಎಂಬುದು ಗೊತ್ತಿಲ್ಲದಿದ್ದರೆ ಈತನೇ ಆತ ಎಂದು ಭಾವಿಸುತ್ತಿದ್ದೆ."



ಫ್ರೆಂಚ್ ಮೂಲ: **ಗೈ ದೆ ಮಾಪಸಾ**

ಕನ್ನಡಕ್ಕೆ ಭಾವಾನುವಾದ: **ಗೌರಿ ಲಂಕೇಶ್**

"ನಿಮಗೇನಾದರು ಹುಚ್ಚು ಹಿಡಿದಿದೆಯೇನು? ಇವನು ಅವನಲ್ಲ ಎಂದು ಗೊತ್ತಿದ್ದರೂ ಇಂತಹ ಹುಚ್ಚುತನದ ಮಾತನ್ಯಾಕೆ ಆಡುತ್ತೀರಿ?" ಎಂದು ಅಮ್ಮ ಗದರಿಸಿದಳು. ಆದರೆ ನನ್ನಪ್ಪ ಒತ್ತಾಯ ಮಾಡಿದರು.

"ನೀನೇ ಹೋಗಿ ಒಮ್ಮೆ ನೋಡು. ನನ್ನ ಕಣ್ಣುಗಳಿಗಿಂತ ನಿನ್ನ ಕಣ್ಣನ್ನೇ ನಾನು ನಂಬುತ್ತೇನೆ."

ಆಗ ನನ್ನಮ್ಮ ಎದ್ದು ವಡೆ ಮಾರುತ್ತಿದ್ದವನತ್ತ ನಡೆಯಲಾರಂಭಿಸಿದಳು. ನಾನು ವಡೆ ಮಾರುತ್ತಿದ್ದವನನ್ನೇ ಗಮನಿಸುತ್ತಿದ್ದೆ. ಮುದುಕನಾಗಿದ್ದ ಕೊಳಕು ಬಟ್ಟೆಗಳನ್ನು ಧರಿಸಿದ್ದ ಆತ ವಡೆ ಮಾರುವುದರಲ್ಲಿ ಎಷ್ಟು ತಲ್ಲೀನನಾಗಿದ್ದನೆಂದರೆ ಆತ ತಲೆ ಎತ್ತಿ ಯಾರನ್ನೂ ನೋಡುತ್ತಿರಲಿಲ್ಲ.

ಹಿಂದಿರುಗಿದ ನನ್ನಮ್ಮ ಸಣ್ಣದಾಗಿ ನಡುಗುತ್ತಿದ್ದಳು. "ಅವನೇ ಅನ್ನಿಸುತ್ತೆ, ಆದರೆ ಆ ರಾಸ್ಕಲ್ ಮತ್ತೆ ನಮ್ಮ ಜೀವನವನ್ನು ಪ್ರವೇಶಿಸದಂತೆ ಮಾಡುವುದು ಹೇಗೆ?" ಎಂದು ಅಮ್ಮ ಕೇಳಿದಳು.

ಅದೇ ಹೊತ್ತಿಗೆ ಬಜರ್‌ದಸ್ತು ಮೀಸೆಯ, ಟಾಕು ಟೀಕಾದ ಸಮವಸ್ತ್ರ ಧರಿಸಿದ್ದ ಟಿಕೆಟ್ ಕಲೆಕ್ಟರ್ ಬಂದರು. ಅವರೊಂದಿಗೆ ಮಾತಿಗಿಳಿದ ನನ್ನಪ್ಪ ಬೇಕಂತಲೇ ರೈಲಿನ ಮಾರ್ಗಗಳ ಬಗ್ಗೆ, ಅದರಲ್ಲಿನ ವ್ಯವಸ್ಥೆಗಳ ಬಗ್ಗೆ ಚರ್ಚಿಸಲಾರಂಭಿಸಿ ಕೊನೆಗೆ "ಈ ರೈಲಿನಲ್ಲಿ ಅಲ್ಲಿ ವಡೆ ಮಾರುತ್ತಿದ್ದಾನಲ್ಲ, ಅವನ ಬಗ್ಗೆ ನಿಮಗೆ ಏನಾದರೂ ಗೊತ್ತಿದೆಯಾ?" ಎಂದು ಪ್ರಶ್ನಿಸಿದರು.

"ಅವನಾ? ಅವನು ಇದೇ ಮಂಡ್ಯದ ಹತ್ತಿರದ ಹಳ್ಳಿಯವನಂತೆ. ದೆಹಲಿಯಲ್ಲಿ ನನಗೆ ಸಿಕ್ಕ ಆತ ತನ್ನ ಮನೆಯವರಿಗೆ ಹಣ ನೀಡಬೇಕು, ಅದು ಸಾಧ್ಯವಾಗಿಲ್ಲ, ಅದ್ದರಿಂದ ರೈಲಿನಲ್ಲಿ ವಡೆ ಮಾರುತ್ತಾ ಜೀವನ ಸಾಗಿಸುತ್ತೇನೆ ಅಂದ. ಇರಲಿ ಅಂತ ನಾನೂ ಸುಮ್ಮನಾದೆ. ಒಂದಾನೊಂದು ಕಾಲದಲ್ಲಿ ಅವನೂ ಶ್ರೀಮಂತ ಕುಟುಂಬದಿಂದ ಬಂದಿದ್ದನಂತೆ. ಆದರೆ ಈಗ ಅವನನ್ನು ನೋಡಿದರೆ ಆತ ಯಾವ ಸ್ಥಿತಿ ತಲುಪಿದ್ದಾನೆ ಎಂದು ಗೊತ್ತಾಗುತ್ತದೆ."

ಇವನ್ನು ಕೇಳುತ್ತಿದ್ದಂತೆ ನನ್ನಪ್ಪನ ಗಂಟಲು ಸಿಕ್ಕಿಕೊಂಡಂತಾಯಿತು. "ನೀವು ಹೇಳುತ್ತಿರುವುದನ್ನು ಕೇಳಿ ಒಂದಿಷ್ಟೂ ಆಶ್ಚರ್ಯ ಆಗುತ್ತಿಲ್ಲ" ಎಂದು ತಡವರಿಸುತ್ತಲೇ ಅಪ್ಪ ಹೇಳಿದರು.

ಟಿಕೆಟ್ ಕಲೆಕ್ಟರ್ ಹೋದ ನಂತರ ಅಪ್ಪ ಕಂಗಾಲಾಗಿದ್ದನ್ನು ಕಂಡ ಅಮ್ಮ "ಸುಮ್ಮನೆ ಕೂತಿರಿ. ನಿಮ್ಮನ್ನ ಯಾರಾದರೂ ನೋಡಿದರೆ ಏನು ಗತಿ?" ಎಂದು ಎಚ್ಚರಿಸಿದಳು.

ಆಕೆಯ ಪಕ್ಕ ಕುಸಿದ ಅಪ್ಪ, "ಅವನೇ, ಅದು ಅವನೇ!" ಎಂದು ಉದ್ಗಾರವೆತ್ತಿ "ಈಗ ನಾವೇನು ಮಾಡೋದು" ಎಂದು ಅಮ್ಮನನ್ನೇ ಪ್ರಶ್ನಿಸಿದರು.

"ಮೊದಲು ನಮ್ಮ ಮಕ್ಕಳನ್ನು ರಕ್ಷಿಸಬೇಕು. ಅದರಲ್ಲೂ ನಮ್ಮ ಅಳಿಯನಿಗೆ ಅವನ ಬಗ್ಗೆ ಗೊತ್ತಾಗದಂತೆ ನೋಡಿಕೊಳ್ಳಬೇಕು."

"ಎಂತಹ ದುರಂತ!" ಅಪ್ಪ ನಿಟ್ಟುಸಿರುಬಿಟ್ಟರು.

"ಎಂತಹ ದುರಂತ? ನನಗೆ ಗೊತ್ತಿತ್ತು, ಆ ಲೋಫರ್‌ನಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದು. ಈಗ ಆತ ಮತ್ತೆ ನಮ್ಮ ಬದುಕಿಗೆ ಬಂದು ನಮ್ಮ ನೆಮ್ಮದಿಯನ್ನು ಕೆಡಿಸದಿದ್ರೆ ಸಾಕು" ಎಂದು ಅಮ್ಮ ಕೋಪಗೊಂಡಳು.

ನನ್ನಪ್ಪ ಎಂದಿನಂತೆ ಬೆವರಿಲ್ಲದ ಹಣೆಯನ್ನು ಒರೆಸಿಕೊಳ್ಳುತ್ತಾ ಮೌನ ವಹಿಸಿದರು.

"ನಿಮ್ಮ ಮಗನಿಗೆ ಒಂದಿಷ್ಟು ಹಣ ಕೊಟ್ಟು ಅವರೆಲ್ಲ ತಿಂದಿರುವ ವಡೆಗಳ ಬಾಬ್ತನ್ನು ತೀರಿಸುವುದಕ್ಕೆ ಹೇಳಿ. ಆ ಭಿಕ್ಷುಕ ನಮ್ಮನ್ನು ಗುರುತಿಸದಿದ್ದರೆ ಸಾಕು. ಈ ರೈಲು ಯಾವಾಗ ಬೆಂಗಳೂರು ತಲುಪುತ್ತದೋ ಏನೋ. ಆತ ನಾವಿರುವಲ್ಲಿಗೆ ಬಾರದಿದ್ದರೆ ಸಾಕು."

ನನ್ನ ಕೈಗೆ ಅಪ್ಪ ಐದು ರೂಪಾಯಿಗಳನ್ನಿಟ್ಟರು. ವಡೆ ತಿಂದು ಮುಗಿಸಿದ್ದ ಅಕ್ಕಂದಿರತ್ತ ಹೋಗಿ "ಅಮ್ಮನಿಗೆ ಹುಷಾರಿಲ್ಲ, ಅದಕ್ಕೆ ನಾನೇ ಬಂದೆ" ಎಂದು ಹೇಳಿ ವಡೆ ಮಾರುತ್ತಿದ್ದವನನ್ನು "ವಡೆಗಳಿಗೆಷ್ಟು?" ಎಂದು ಪ್ರಶ್ನಿಸಿದೆ.

ನನಗೆ ನಗೆ ಬರಲಾರಂಭಿಸಿತು! ಆತ ನನ್ನ ಚಿಕ್ಕಪ್ಪ!

"ಎರಡೂವರೆ ರೂಪಾಯಿ" ಅಂದ ಆತ.

ಅವನ ಕೈಗೆ ಐದು ರೂಪಾಯಿಗಳನ್ನಿಟ್ಟಾಗ ಅವನ ಸುಕ್ಕುಗಟ್ಟಿದ್ದ ಚರ್ಮವನ್ನೂ, ಕನಸುಗಳೇ ಇಲ್ಲದ ಮುಖವನ್ನು ಗಮನಿಸಿದೆ. ಆ ಕ್ಷಣ "ಈತ ಚಿಕ್ಕಪ್ಪ, ನನ್ನ ಅಪ್ಪನ ತಮ್ಮ, ನನ್ನ ಚಿಕ್ಕಪ್ಪ" ಎಂದೆನಿಸಿ ಆತನಿಗೆ ಒಂದು ರೂಪಾಯಿಯ ಭಕ್ಷೀಸನ್ನೇ ನೀಡಿದೆ.

ಆತ "ದೇವರ ದಯೆ ನಿಮ್ಮ ಮೇಲಿರಲಿ" ಎಂದು ಬಡ ಭಿಕ್ಷುಕನಂತೆ ನುಡಿದ. ಅದನ್ನು ಕೇಳಿ ಆತ ತನ್ನ ಜೀವನವಿಡೀ ಭಿಕ್ಷಾಟನೆಯಲ್ಲೇ ತೊಡಗಿದ್ದಿರಬಹುದೇ ಎಂದೆನಿಸಿತು.

ನಾನು ಧಾರಾಳವಾಗಿ ಆತನಿಗೆ ಒಂದು ರೂಪಾಯಿಯ ಭಕ್ಷೀಸನ್ನು ನೀಡಿದನ್ನು ಕಂಡು ನನ್ನ ಅಕ್ಕಂದಿರಿಗೆ ಅಚ್ಚರಿಯಾಗಿತ್ತು, ಅದರಲ್ಲೂ ವಾಪಸ್ಸು ಬಂದು ನನ್ನಮ್ಮನಿಗೆ ಒಂದೂವರೆ ರೂಪಾಯಿ ನೀಡಿದಾಗ "ವಡೆಗಳಿಗೆ ಮೂರೂವರೆ ರೂಪಾಯಿಗಳೇ?" ಎಂದು ಉದ್ಗಾರವೆತ್ತಿದಳು.

"ನಾನು ಆತನಿಗೆ ಒಂದು ರೂಪಾಯಿ ಭಕ್ಷೀಸು ನೀಡಿದೆ."

ನನ್ನತ್ತ ದುರುಗುಟ್ಟಿ ನೋಡಿದ ಅಮ್ಮ "ನಿನಗೆ ಹುಚ್ಚು ಹಿಡಿದಿದೆಯಾ? ಆ ನಿರ್ಗತಿಕನಿಗೆ ಒಂದು ರೂಪಾಯಿ ಭಕ್ಷೀಸು" ಎಂದು ಅರಚಲಾರಂಭಿಸಿದಳು. ಆದರೆ ಅದೇ ಹೊತ್ತಿಗೆ ನನ್ನಪ್ಪ ತನ್ನ ಹೊಸ ಅಳಿಯನತ್ತ ಹುಬ್ಬೇರಿಸುತ್ತಾ ಸೂಕ್ಷ್ಮ ಸಂದೇಶಗಳನ್ನು ರವಾನಿಸುತ್ತಿದ್ದರಿಂದ ಅಮ್ಮ ಸುಮ್ಮನಾದಳು.

ಸುಮಾರು ಒಂದು ಗಂಟೆಯ ನಂತರ ಬೆಂಗಳೂರು ಸಮೀಪಿಸುತ್ತಿರುವುದು ರೈಲಿನ ಕಿಟಕಿಯಿಂದ ಕಾಣಿಸುತ್ತಿತ್ತು.

ನಗರವನ್ನು ತಲುಪುವ ಮುನ್ನ ಗುಂಡ ಚಿಕ್ಕಪ್ಪನನ್ನು ಮಾತನಾಡಿಸಬೇಕೆಂಬ, ಆತನ ಹತ್ತಿರ ಹೋಗಬೇಕೆಂಬ, ಸಾಂತ್ವನ ನೀಡಬೇಕೆಂಬ ಆಸೆ ನನ್ನಲ್ಲಿ ಚಿಗುರೊಡೆಯಿತು.

ಆದರೆ ಅಷ್ಟೊತ್ತಿಗಾಗಲೇ ಆತ ರೈಲಿನಿಂದಿಳಿದು ಅದೃಶ್ಯನಾಗಿದ್ದ... ■



ಅವ್ವ ಚಿತ್ರೀಕರಣ

■ಬಿ. ಚಂದ್ರೇಗೌಡ

ಲಂಕೇಶರ ಮುಸ್ಸಂಜೆ ಕಥಾಪ್ರಸಂಗ 'ಅವ್ವ'ಳಾಗಿ ಇನ್ನೇನು ಚಿತ್ರೀಕರಣ ಶುರುವಾಗುತ್ತದೆನ್ನುವಾಗ ಕಥಾ ಪ್ರಸಂಗದ ತಾಣಗಳಲ್ಲೇ ಚಿತ್ರಿಸುವುದು ಸೂಕ್ತವೆಂದು ಅರಿತ ನಾನು ಹಾರ್‍ನಳ್ಳಿ, ಕುಂಸಿ, ಕಾಚಿನಕಟ್ಟೆ, ಸೂಗೂರು ಇಲ್ಲೆಲ್ಲಾ ತಿರುಗಾಡಿದೆ. ಅಲ್ಲೆಲ್ಲ ರಂಗವ್ವನ ಮನೆ, ಭರ್ಮಣ್ಣನ ಮಿಷನ್ ಮನೆ, ನಂದ್ಯಪ್ಪನ ಮನೆ, ಸ್ಕೂಲು ಎಲ್ಲವನ್ನು ನೋಡಿ ಮೆಚ್ಚಿಕೊಂಡು ಕೂಡಲೇ ಬರುವಂತೆ ಕವಿತಾ ಲಂಕೇಶ್‌ಗೆ ತಿಳಿಸಿದೆ. ಕವಿತಾ ಬಂದು ನಾನು ನೋಡಿದ್ದ ಲೊಕೇಶನ್ ಗಮನಿಸಿ ಬಿದ್ದುಬಿದ್ದು ನಕ್ಕರು.

ಏಕೆಂದರೆ ಕಾಚಿನಕಟ್ಟೆಯಲ್ಲಿ ನಾನು ನೋಡಿದ ರಂಗವ್ವನ ಮನೆಗೆ ಕೊಟ್ಟಿಗೆ ಇತ್ತಷ್ಟೇ, ಜಗಲಿ ಇರಲಿಲ್ಲ, ಹಿತ್ತಲಿಗಾಗಿ ಇನ್ನೊಂದು ಮನೆ ಹುಡುಕಬೇಕಿತ್ತು. ನಂದ್ಯಪ್ಪನ ಮನೆಯೊಳಕ್ಕೆ ಕ್ಯಾಮರ ತೆಗೆದುಕೊಂಡು ಹೋಗುವಂತಿರಲಿಲ್ಲ. ಇನ್ನು ಮಿಷನ್ ಭರ್ಮಣ್ಣನ ಮನೆಗೆ ಬಂದರೆ ಮನೆ ಎಲ್ಲೊ, ಮಿಷನ್ ಎಲ್ಲೊ ಇತ್ತು. ಆ ಮಿಷನ್ ಮನೆಯಲ್ಲಿ ಕೂಡ ಇಬ್ಬರು ಕೂರಲೂ ಸ್ಥಳವಿರಲಿಲ್ಲ. ಇಂತಹ ಜಾಗವನ್ನೇ ಮಿತಿಮೀರಿ ನಾನು ಹೊಗಳುತ್ತ ಅವರನ್ನು ಒಪ್ಪಿಸಲು ಯತ್ನಿಸಿದಷ್ಟು ಕವಿತಾ ನಿರಾಶೆಯಿಂದ ವಾಪಸು ಹೊರಟರು. ಅಷ್ಟರಲ್ಲಿ ಪಂಚಾಯ್ತಿ ಸದಸ್ಯನೊ, ಅಧ್ಯಕ್ಷನೊ ಫೋನ್ ಮಾಡಿ "ನನ್ನ ಒಪ್ಪಿಗೆಯಿಲ್ಲದೆ, ನಮ್ಮ ಊರನ್ನು ಸುತ್ತಿಕೊಂಡು ಹೋಗುವಾಗ ನನ್ನನ್ನು ಭೇಟಿಯಾಗಿಲ್ಲ" ಎಂಬ ತಕರಾರು ತೆಗೆದ. "ಹೋಗೋ ಮಾರಾಯ" ಎಂದು ವಾಪಸಾದೆವು.

ಒಂದೆರಡು ದಿನಗಳ ನಂತರ ಕವಿತಾ ಫೋನ್ ಮಾಡಿ 'ಅವ್ವ'ಳ ಚಿತ್ರೀಕರಣಕ್ಕೆ ಲಗತ್ತಾದ ಊರು ಸಿಕ್ಕಿತೆಂದರು. ಹೋಗಿ ನೋಡಿದಾಗ ಅದೊಂದು ಐತಿಹಾಸಿಕ ಗ್ರಾಮವಾಗಿತ್ತು. ಕೃಷ್ಣರಾಜೇಂದ್ರ ಒಡೆಯರ್‌ರವರು ವಿಶ್ವೇಶ್ವರಯ್ಯನವರ ಒತ್ತಡದಿಂದ ಕನ್ನಂಬಾಡಿ ನಿರ್ಮಿಸಲು ಹೊರಟಾಗ ಸುಮಾರು ಇಪ್ಪತ್ತೈದು ಗ್ರಾಮಗಳನ್ನು ಸ್ಥಳಾಂತರಿಸಬೇಕಾಯ್ತು. ಆ ಪೈಕಿ ಕನ್ನಂಬಾಡಿ ಎಂಬ ಊರು ಒಂದು. ಈ ಊರಲ್ಲಿನ ಭೂರಹಿತ ಜನರೆಲ್ಲಾ ಎತ್ತೆತ್ತಲೊ ಗುಳೆ ಹೋದರು. ಆದರೆ ಭೂ ಒಡೆಯ ಬಲಾಢ್ಯರು ತಮಗೆ ಸುವ್ಯವಸ್ಥಿತವಾದ ಮನೆ, ಭೂಮಿ ಮತ್ತು ತಾವು ಆರಾಧಿಸುವ ದೇವಸ್ಥಾನಗಳ ಸಮೇತ ಪುನರ್ ವಸತಿ ಯಾಗಬೇಕೆಂದು ಪಟ್ಟುಹಿಡಿದರು. ಬಹುತೇಕ ಎಲ್ಲರೂ ಲಿಂಗಾಯತರಾದ್ದರಿಂದ ಮಹರಾಜರು ಮತ್ತು ಅಷ್ಟರಲ್ಲಾಗಲೇ ವಿಶ್ವೇಶ್ವರಯ್ಯನವರ ಜಾಗಕ್ಕೆ ಬಂದಿದ್ದ ಮಿರ್ಜಾ ಇಸ್ಮಾಯಿಲ್, ತಾತ್ಸಾರ ಮಾಡುವಂತಿರಲಿಲ್ಲ. ಆ ಕಾರಣವಾಗಿ ಸುವ್ಯವಸ್ಥಿತವಾದ ರಸ್ತೆ, ಚರಂಡಿ ನಿರ್ಮಿತ ಚಿಕ್ಕರಾಯಹಳ್ಳಿ ನಿರ್ಮಾಣವಾಯ್ತು. ಇದಕ್ಕೆ ನಾರ್ತ್‌ಬ್ಯಾಂಕ್ ಎಂದೂ ಕರೆಯುತ್ತಾರೆ.

ಒಮ್ಮೆ ಚಿತ್ರೀಕರಣದ ಜಾಗಕ್ಕೆ ಗೌರಿ ಬಂದಾಗ ಊರಿನ ವಿಷಯ ಕೇಳಿ, "ಇಲ್ಲಿ ಭೂಮಿ ಇದ್ದವರಿಗೆ ಮಾತ್ರ ಪುನರ್ವಸತಿಯಾಗಿದೆ. ಉಳಿದವರ ಪಾಡೇನಾಯ್ತು?" ಎಂದು ಕೇಳಿದರು. ಈ ಪ್ರಶ್ನೆಯಿಂದ ನಾವೂ ಯೋಚಿಸುವಂತಾಯ್ತು. ಆಗ ಭೂ ಒಡೆಯರನ್ನು ಅನಾಥರನ್ನಾಗಿ ಮಾಡುವಂತಿರಲಿಲ್ಲ. ಆದರೆ ಈಗ ದಿನಬೆಳಗಾಗುವುದರಲ್ಲಿ ಎಲ್ಲರೂ ನಿರ್ಗತಿಕರಾಗುತ್ತಿದ್ದಾರೆ. ವರಾಹಿ ಸಂತ್ರಸ್ತರ ಸಮಸ್ಯೆ ಬಗೆಹರಿದಿಲ್ಲ. ಲಿಂಗನಮಕ್ಕಿ ಹಿನ್ನೀರಿಗೆ ಸಿಕ್ಕವರು ಶತಮಾನಗಳ ಕಾಲ ಹಿಂದಕ್ಕೆ ಹೋಗಿದ್ದಾರೆ. ಆದರೆ ಕನ್ನಂಬಾಡಿ ದೆಸೆಯಿಂದ ಅನಾಥರಾದೆವು ಎಂಬ ಕೂಗು ಎಂದೂ ಕೇಳಿಬಂದಿಲ್ಲ. ಮಿರ್ಜಾ ಸಾಹೇಬರು ಈ ಚಿಕ್ಕರಾಯಹಳ್ಳಿ ಜನಕ್ಕೆ ಕಟ್ಟಿಸಿಕೊಟ್ಟಿರುವ ಕುಡಿಯುವ ನೀರಿನ ಬಾವಿ, ರಸ್ತೆ, ಚರಂಡಿ ನೋಡಿದರೆ ಸಾಕು, ಅಂದಿನವರ ಮುತುವರ್ಜಿ ಮನವರಿಕೆಯಾಗುತ್ತದೆ.

ಈ ನಾರ್ತ್‌ಬ್ಯಾಂಕ್ ಹಳ್ಳಿಯಲ್ಲಿ ಎಲ್ಲರೂ ಲಿಂಗಾಯತರೆ. ನಮ್ಮ 'ಅವ್ವ'ನ ಕಥೆಯಲ್ಲೂ ಪ್ರಧಾನವಾಗಿ ಲಿಂಗಾಯತರೇ ಇರುವುದರಿಂದ ಇದಕ್ಕಿಂತ ಪ್ರಶಸ್ತವಾದ ಊರು ಇನ್ನೆಲ್ಲೂ ಇರಲಾರದೆಂದು ಕವಿತಾ ತೀರ್ಮಾನಿಸಿ "ಅಪ್ಪನ ಊರತ್ತ ಚಿತ್ರೀಕರಣ ಮಾಡಲಿಲ್ಲ ಅಂತ ಬೇಜಾರಾಗಬೇಡಿ ಗೌಡ್ರೆ" ಎಂದರು. "ಇಲ್ಲ, ಬಿಡವ್ವ, ಅಂತ ಕೃಷ್ಣದೇವರಾಯನ ಕಥೆನೆ ಹಂಪೆಲಿ ಚಿತ್ರೀಕರಣ ಮಾಡಕ್ಕಾಗದೆ ರಾಜಸ್ಥಾನದ ಜೈಪುರದಲ್ಲಿ ಮಾಡಿದ್ರು. ನಾವೇನು ದೇಶಬಿಟ್ಟೋಗಿಲ್ಲ ಕಾವೇರಿ ನದಿ ಪಾತ್ರದಲ್ಲೇ ಮುಗಿಸಿದ್ವಲ್ಲ" ಎಂದೆ.

ಇಲ್ಲಿ ದೊಡ್ಮನೆ ಭದ್ರವ್ವನ ಮಗಳಾದ ರಂಗವ್ವನ ಮನೆ ಇದೆ. ಪಕ್ಕದಲ್ಲೇ ನಂದ್ಯಪ್ಪನ ಮನೆ ಇದೆ. ನಮ್ಮ 'ಅವ್ವ' ಚಿತ್ರಕ್ಕೆ ಲಗತ್ತಾದ ಪಾತ್ರಗಳನ್ನೇ ಹುಡುಕುವಾಗ ಎಲ್ಲರೂ ಸಿಕ್ಕರು. ಆದರೆ ನೋವಿನ ಕಣ್ಣಿನ, ಎಂದೂ ತನ್ನ ಕಷ್ಟಗಳನ್ನು ಯಾರ ಬಳಿಯೂ ಹೇಳಿಕೊಳ್ಳದ, ತನ್ನ ಒಳ್ಳೆಯತನದಿಂದಲೇ ಎಲ್ಲರಿಗೂ ತೊಂದರೆಯುಂಟು ಮಾಡುವ ಸಾತ್ವಿಕ ಸ್ವಭಾವದ ನಂದ್ಯಪ್ಪನ ಪಾತ್ರ ಮಾಡುವಂತಹವರು ಕನ್ನಡ ಚಿತ್ರರಂಗದಲ್ಲಿ ಕಾಣಲಿಲ್ಲ. ಬ್ರಹ್ಮಾವರ ಎಂಬ ನಟರಿದ್ದರೂ ಅವರಾಗಲೇ ಪವರ್‌ಲೆಸ್ ದೇವರ ಬಡ ಪೂಜಾರಿಯಂತೆ ಕಾಣುವುದರಿಂದ ಅವರೂ ಬೇಡ ಎಂದುಕೊಂಡೊ. ಇದ್ದಕ್ಕಿದ್ದಂತೆ ಕವಿತಾ "ಎಂ.ಪಿ. ಪ್ರಕಾಶ್ ಕೇಳಿದರೆ ಹೇಗೆ?" ಎಂದರು. ಭೇಷ್, ಪ್ರಕಾಶ್‌ರ ಈ ಸಂದರ್ಭಕ್ಕೂ, ನಂದ್ಯಪ್ಪನ ವ್ಯಕ್ತಿತ್ವಕ್ಕೂ ಕೂದಲೆಳೆ ಅಂತರವೂ ಇಲ್ಲ. ಪ್ರಕಾಶ್ ಅಭಿನಯಿಸುವುದೇ ಬೇಡ. ಅವರು ಸುಮ್ಮನೆ ನಮ್ಮ ಕಡೆ ನೋಡುತ್ತ ದೇವೇಗೌಡರನ್ನು ನೆನೆಸಿಕೊಂಡರಾಯ್ತು. ಆ ಅವ್ಯಕ್ತ ವೇದನೆಗಳೇ ಸಾಕು, ನೂರಾರು ಕತೆ ಹೇಳುತ್ತವೆ" ಎಂದುಕೊಂಡು ಪ್ರಕಾಶರ ಮನೆಗೆ ಓಡಿದೆ.

"ಸಾರ್ ಮುಸ್ಸಂಜೆ ಕಥಾಪ್ರಸಂಗದಲ್ಲಿ ಒಂದು ಪಾತ್ರ ಮಾಡಬೇಕು ಅಂತ ಕವಿತಾ ಕೇಳ್ತಾಯಿದಾರೆ" ಎಂದೆ. ಪ್ರಕಾಶ್ ತುಂಬ ಖುಷಿಯಿಂದ "ಭರ್ಮಣ್ಣನ ಪಾತ್ರವೆ?" ಎಂದರು. "ಭರ್ಮಣ್ಣ ವಿಲನ್ ಸಾರ್. ನಿಮ್ಮ ವ್ಯಕ್ತಿತ್ವಕ್ಕೆ ಹೊಂದೊ ನಂದ್ಯಪ್ಪ ಅನ್ನೊ ಪಾತ್ರ ಇದೆ. ಅನ್ನದನ್ನು ಮಾಡಿ" ಎಂದೆ. ಕೂಡಲೇ ಒಪ್ಪಿಕೊಂಡ ಪ್ರಕಾಶ್ ಚಿತ್ರೀಕರಣದ ದಿನಾಂಕವನ್ನು ತಮ್ಮ ಪಿ.ಎ. ಡೈರಿಯಲ್ಲಿ ಬರೆಸಿ ಒಳಗೋದರು.

ಇದನ್ನು ನೋಡುತ್ತ ನಿಂತಿದ್ದ ಹಡಗಲಿ ಕಡೆಯ ಒಂದಿಬ್ಬರು ಲೀಡರ್‌ಗಳು ನನ್ನನ್ನೆ ಹೊಸ ನಿರ್ದೇಶಕನನ್ನು ನೋಡುವಂತೆ ನೋಡಿ "ನಮಗೂ ಯಾವುದಾದ್ರು ಪಾತ್ರ ಇದ್ರೆ ಕೊಡಿ ಸಾರ್. ಪ್ರಕಾಶ್ ಸಾಹೇಬ್ರು ಜೊತೆ ನಾವು ಇರತೆವಿ" ಎಂದರು. "ಆಯ್ತು ಸಾರ್, ಒಂದೆರಡು ಪಾತ್ರ ಇವೆ. ನೀವುಗಳಂತೂ ಆ ಪಾತ್ರಕ್ಕೆ ಹೇಳಿ ಮಾಡಿಸಿದಂಗಿದ್ದಿರಿ. ಈ ನಿಮ್ಮ ಸರ್ಕಾರ ಸಾರಾಯಿ ನಿಷೇಧ ಮಾಡಿರೋದ್ರಿಂದ ಕಳ್ಳಭಟ್ಟಿ ಸುರುವಾಗ್ಯದೆ. ನಮ್ಮ ಸಿನುಮದಲ್ಲೂ ಕಳ್ಳಬಟ್ಟಿದೊಂದು ಸೀನಿದೆ. ಕತ್ಲಲಿ ಯಾರೋ ಬರ್ತಾಯಿರೊ ಹೆಜ್ಜೆ ಸಪ್ಪಳ ಕೇಳಿ ನೀವಿಬ್ರು ಪರಾರಿಯಾಗ್ತಿರಿ. ಕತ್ತಲೆಯಲ್ಲಿ ನೀವು ಯಾರಿಗೂ ಕಾಣಲ್ಲ, ಆಯ್ತಾ" ಎಂದೆ.

"ಏ ಮುಖ ಕಾಣಸೊ ಅಂತ ಪಾರ್ಟು ಕೊಡಿ ಸಾರ್" ಎಂದರು.

"ಕತ್ಲಲಿ ಯಂಗೆ ಮುಖ ತೋರಲಿ ನಿಮ್ಮದ?" ಎಂದೆ.

ಆ ಮುಖಗಳಲ್ಲಿ ನಿರಾಶೆ ಮೂಡಿತ್ತು. ನಗುತ್ತ ಪ್ರಕಾಶ್ ಮನೆಯಿಂದ ಹೊರಬಂದೆ. ಹೇಳಿದಂತೆ ಪ್ರಕಾಶ್ ಒಂದು ದಿನ ಚಿತ್ರೀಕರಣಕ್ಕೆ ಬಂದು ಉತ್ಸಾಹದಿಂದ ಪಾಲ್ಗೊಂಡರು. ಕಲೆ, ಸಾಹಿತ್ಯ, ಸಂಗೀತದಿಂದ ದೂರವೇ ಇರುವ ದೇವೇಗೌಡರ ಕುಟುಂಬಕ್ಕೆ ಪ್ರಕಾಶ್ ಕವಿತಾ ಲಂಕೇಶರ ಸಿನಿಮಾದಲ್ಲಿ ನಟಿಸುತ್ತಿರುವ ಸುದ್ದಿ ಮುಟ್ಟಿತೇನೋ?! ಪ್ರಕಾಶ್ ಚಿತ್ರೀಕರಣಕ್ಕೆ ಬರುವ ಸಮಯಕ್ಕೆ ಸರಿಯಾಗಿ ಕುಮಾರಸ್ವಾಮಿ ಹಡಗಲಿ ಪ್ರಾಂತ್ಯದಲ್ಲಿ ಪ್ರವಾಸ ಇಟ್ಟುಕೊಂಡರು. ಇದರಿಂದ ಪ್ರಕಾಶ್ ತುಂಬಾ ಇಕ್ಕಟ್ಟಿಗೆ ಸಿಕ್ಕಿಕೊಂಡರು. ಒಬ್ಬ ಸಿನಿಮಾ ನಿರ್ಮಾಪಕನೂ ಆಗಿದ್ದ ಕುಮಾರಸ್ವಾಮಿಗೆ ನಿಜಸಂಗತಿ ತಿಳಿಸಿ ಪ್ರಕಾಶ್ ಬರಬಹುದಿತ್ತು. ಆದರೆ ತಮ್ಮ ಒಳಮನಸ್ಸಿನ ತುಡಿತಗಳಾವುದನ್ನೂ ಹೇಳದೆ, ನೋವಿನ ಕಣ್ಣಿಂದ ಎಲ್ಲವನ್ನೂ ಸಹಿಸಿಕೊಂಡು ಸುಮ್ಮನಾಗುವ ಪ್ರಕಾಶರ ಇನ್ನೊಂದು ಗುಣವೆಂದರೆ ಒಪ್ಪಿಕೊಳ್ಳುವುದರಲ್ಲೇ ಆನಂದಪಡುವುದು. ಇದು [illegible] ಒಂದು ವಿಚಿತ್ರ ಗುಣವಿರಬೇಕು.

ಕೋಜಾ ಸರ್ಕಾರ ಅನ್ನದು ಕಡಿಗೂ ನಿಜಾಯ್ತು ಬುಡು

ಬಯಲು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಕೋಜಾ ಸರ್ಕಾರ ಅನ್ನದು ಕಡಿಗೂ ನಿಜಾಗಿಬುಡ್ತು ನೋಡು" ಎಂದು ಉಗ್ರಿ ನುಗಾಡಿದ.

"ಎನ್ನ ಅಂಗಂದ್ರೆ?" ಎಂದಳು ಜುಮ್ಮಿ.

"ಕೋ ಅಂದ್ರೆ ಕೋಮುವಾದಿಗಳು, ಜಾ ಅಂದ್ರೆ ಜಾತಿವಾದಿಗಳು. ಈ ಬಜೆಪಿಗಳು ಕೋಮುವಾದಿಗಳು, ದಳದವು ಜಾತಿವಾದಿಗಳು ಅದ್ಕೆ ಇವುರಿಬ್ರು ಸೇರಿ ಸರ್ಕಾರ ಮಾಡಿದಾಗ ಕೋಜಾ ಸರ್ಕಾರ ಅಂದ್ರು. ಈ ಕೋಜಾ ಅನ್ನೊ ಪದಕ್ಕೆ ಇನ್ನೊಂದರ್ಥನೂ ಅದೆ."

"ಕ್ವಜ್ಜೆಯ ಅಂತ ತಾನೆ ನೀನೇಳದು?" ಎಂದ ಸೀರ.

"ಊ. ಆ ಕ್ವಜಾರಿ ಏನು ಮಾಡ್ತನಪ್ಪ ಅಂದ್ರೆ, ಗಂಡುಸರ ಜ್ವತೆ ಗಂಡುಸಾಗಿರತನಂತೆ. ಹೆಂಗುಸರ ಜ್ವತೆ ಹೆಂಗಸಾಗಿ ಇರತನಂತೆ. ಅಂಥದೊಂದಾಟ ಕಲ್ತವ್ರೆ ನೋಡು ಈ ದಳದೋರು."

"ಅದೇನು ಸರಿಯಾಗೇಳ್ಳ?" ಎಂದ ಕಾಳಮಾವ.

"ನೋಡು ಮಾವ, ದಳದೋರು ಮದ್ಲು ಕಾಂಗ್ರೆಸ್ ಗಂಡುಸರ ಜ್ವತೆ ಇಪ್ಪತ್ತು ತಿಂಗಳಿದ್ರು. ಅವುರು ಯಂಗೋ ಯೇಗಿದ್ರು. ಆಟೊತ್ತಿಗೆ ಈ ಕ್ವಜಾರಿಗಳಿಗೆ ಒಂದಿಷ್ಟು ಗಂಡುಸ್ತನ ಬಂದಿತ್ತು. ಅತ್ಲಗಿ ತಿರುಗಿ ನೋಡಿದ್ರು ಅಲ್ಲಿ ಬಜೆಪಿ ಹೆಂಗುಸರು ಹೊಳಿತ ನಿಂತಿದ್ರು."

"ಬಜೆಪಿಗಳ ಹೆಂಗುಸ್ರು ಅಂತಿಯೇನ್ನ?"

"ಊ ಕಣೆ. ಅವುರ ಹಣೆ ನೋಡಿದ್ದಿಯ. ಯಾವ ಮುಂಡೆ ಮಗನ ಹಣೆ ನೋಡು ಕಾಸಿನಗಲ ಕುಂಕುಮ ಥಳಥಳಿತದಂಗೆಯ!"

"ಊ ಕಂಡ್ರು ನಾನು ನೋಡಿದ್ದೀನಿ."

"ಹಣೆಗೆ ಕುಂಕುಮ ಹಚ್ಚಗಬೇಕಾದೋಳು ಹೆಂಗುಸು. ಅವುಳಣೆಲಿ ಕುಂಕುಮ ಇದ್ರೆ, ಗಂಡವುನೆ ಅಂತ. ಇಲ್ದೆಯಿದ್ರೆ ನ್ಯಗದುಬಿದ್ದವುನೆ ಅಂತ, ಆದ ಕಿಂತ್ಲುವೆ ಹಣೆಲಿ ಕುಂಕುಮ ಇರೊ ಹೆಣಮಗಳು, ಪ್ರತಿ ತಿಂಗಳು ವರಗಾಗ್ಯ ನಾನು ಮಗಿಗೆ ಜನ್ಮ ಕೊಡಕ್ಕೆ ತಯಾರಾಗಿದ್ದಿನಿ ಅಂತ ನೋಡಿದೋರು ತಿಳಕಲೊ ಸಂಕೇತವಾಗಿ ಹಣೆಗೆ ಕುಂಕುಮ ಹಚಗತಳಂತೆ. ಈ ಬಜೆಪಿಗಳು ಹಣೆಗೆ ಕುಂಕುಮ ಹಚಗತ್ತವೆ ಅಂದ್ರೆ, ಅವರು ಹೆಂಗಸರಿಗೇ ಜಮಾವ್ರೋಟು. ಇಂಥೋರ ಜ್ವತೆ ದಳದವು ಇಪ್ಪತ್ತು ತಿಂಗಳು ಮನಿಗಿದ್ರೊ. ಈಗ ವಾಯ್ದೆ ಮುಗದೇಟಗೆ ಎಡೂರಪ್ಪ ನಾ ನೊಂದೀಟು ಮ್ಯಾಲೆ ಮನಿಕತ್ತಿನಿ ಅಂದೇಟಗೆ, ಬುದೂರನೆದ್ದು ಬೀದಿಗೆ ಬಂದವಲ್ಲಾ, ಇವು ಯಾತಕ್ಕೆ ಜಮಾವ್ರೋಟಾದವು ಹೇಳು?"



"ನೀನೇಳಿದಂಗೆ, ಅವೆ ಬುಡಿವು" ಎಂದ ಕಾಳಮಾವ.

"ಅದಿರ್ಲಿ ಕಣಮಾವ, ಆ ಬಜೆಪಿಗಳಾಗ್ಲೆ ಓ ಲಕ್ಷ್ಮಣಾ ಅಂತ ಕೂಗ್ತ ಬೀದಿಮ್ಯಾಲೊಂಟವೆ. ಈ ಕಾಂಗ್ರೆಸಿನವು ತಿಗಬಾಯಿ ಮುಚಗಂಡು ಸುಮ್ಮನೆ ನೋಡ್ತ ಅವೆ. ಆದ್ರು ದಳದವು ನಾವು ನಿಮ್ಮ ಜೊತೆಲೂ ಮನಗದಿಲ್ಲ ಅವುರ ಜ್ವತೆಲೂ ಮನಗದಿಲ್ಲ, ಯಾವ್ದಾರ ಹೋಟ್ಳಗೋಗಿ ಮನಿಕತ್ತಿವಿ ಅಂತ ಹೋದಪಂತಲ್ಲಾ, ಇವ ಕೂಗಿದೊರ್ಯಾರೂ, ಕರದೋರ್ಯಾರೂ ಅಂತ?"

"ಕರೀಲಿ ಅಂತ್ಲೆ ಅಂಗಂತಾಯಿರಬವುದು ಕಂಡ್ರ."

"ಅದು ನಿಜವೆ ಕಣಮಾವ. ಅವುರತ್ರ ಈಗ ಯಲಕ್ಷನ್ ಮಾಡೋವ್ರೋಟು ದುಡ್ಡಂತೂ ಅದೆ. ಜನ ಓಟು ಕೊಡದೆಯಿದ್ರೆ ಅಂತ ಯಾರ ಜ್ವತಿಗಾರ ಬಗೇಸಿಗಳನಾ ಅಂತ ನಾಟಗ ಮಾಡ್ತ ಕುಂತವೆ. ಇವುರ ನಾಟಕ ನೋಡಕ್ಯಾಗದೆ ಪಟೇಲ್ರು ಮಗ ಪಾರ್ಟಿನೆ ಬುಟ್ಟೊದ ಅತ್ತಗೆ."

"ಓ, ಅಂಗರೆ ಪಟೇಲ್ರು ಮಗ ಪಾರ್ಟಿ ಬುಟ್ಟ ಅನ್ನು?"

"ಊ ಕಣಮಾವ, ಬಾಳ ವಳ್ಳೆ ಇವುನವುನು. ಒಬ್ಬರಿಗೆ ಒಂದು ರೂಪಾಯಿ ಕೊಡದಂಗೆ, ಒಬ್ಬರಿಗೆ ಕುಡಸದಂಗೆ ಯಲಕ್ಷನ್ ಮಾಡಿ ಗೆದ್ದು ಬಂದಿದ್ದ."

"ಅಂಥೋರಿನ್ನು ಇದ್ದರೇನ್ನ?"

"ಏ ನಾನೇ ಹೋಗಿ ನೋಡಿ ಬಂದೆ ಕಣಮಾವ. ನಿಮಗಿಷ್ಟ ಇದ್ರೆ ಓಟು ಕೊಡಿ, ಇಲ್ದೆಯಿದ್ರೆ ಬ್ಯಾಡಿ, ನಾನಂತೂ ಕುಡಿಯಕ್ಕೂ ಕೊಡದಿಲ್ಲ ದುಡ್ಡೂ ಹಂಚದಿಲ್ಲ ಅಂದು ಗೆದ್ದುಬಂದ."

"ಅಂಥೋನ್ನ ದ್ಯಾವೇಗೌಡ ಬ್ಯಳಸಬೇಕಾಗಿತ್ತು ಕಂಡ್ರ."

"ಎಲ್ಲಿ ಬ್ಯಳಸ್ತನೆ? ಅವುನಂಗೆ ಗೆದ್ದ ಕೂಡ್ಲೆ ದ್ಯಾವೇಗೌಡನ ಕಣ್ಣು ಮಯಿಮಾ ಪಟೇಲನ ಮ್ಯಾಲೆ ಬದ್ದಿತ್ತು, ಕಡಿಗೂ ಆ ಹುಡುಗ ಪಾರ್ಟಿ ಬುಟ್ಟೋಗಂಗೆ ಮಾಡಿದ ನೋಡು."

"ದ್ಯಾವೇಗೌಡನ ಕಣ್ಯಾಕೆ ಬದ್ದಿತ್ತ?" ಎಂದಳು ಜುಮ್ಮಿ.

"ನೋಡೆ, ಮಹಿಮಾ ಪಟೇಲ ಗೆದ್ದು ಬರುವಾಗ ಈ ದ್ಯಾವೇಗೌಡ ನಂಥೋರ ಹೆಸರೇಳಿ ಓಟು ತಗಳ್ಳಿಲ್ಲ, ನನ್ನೆಸರಿಲ್ದೆ ಗೆದ್ದು ಬತ್ತನೆ ಅಂದ್ರೆ, ನನ್ನ ಮಕ್ಕಳ ಬುಡ್ತನ ಇವುನು ಅಂತ ದ್ಯಾವೇಗೌಡ ಅವತ್ತೇ ಕಣ್ಣು ಮಡಗಿದ. ಕಡಿಗೂ ಮಯಿಮನ್ನ ಉಳಿಸಿಗಳಕ್ಯಾಗಲೇಯಿಲ್ಲ, ಅದ್ಕೆ ದಳ ಬುಟ್ಟೋಗಿ 'ಸುವರ್ಣ ಯುಗ ಅಂತ ಪಾರ್ಟಿ ಕಟ್ಟತನಂತೆ' ಎಂದು ಹೇಳುತ್ತಿರುವಾಗಲೇ ಬಂದು ನಿಂತಿದ್ದ ವಾಟಿಸ್ಸೆ.

"ನನಿಗೂ ಸುವರ್ಣಯುಗ ಸೇರಬೇಕು ಅನ್ನುಸ್ತಾ ಅದೆ ಕಣೊ ಉಗ್ರಿ. ಏನು ಮಾಡ್ತಿ ಆ ಪಾರ್ಟಿಲಿ ಡ್ರಿಂಕ್ಸ್ ಅಲೋ ಇಲವಂತೆ?"

ಲಂಚದ ದುಡ್ಡಿನಲ್ಲಿ ಶಾಸಕರ ಪಾಲಿಲ್ಲ!

ಅಣಕ


ಎಚ್.ಎಲ್. ಕೇಶವಮೂರ್ತಿ

ವಿಧಾನಸಭೆ ಅಮಾನತ್ತಿನಲ್ಲಿತ್ತು.

ಇದಕ್ಕೆ ವಿವಿಧ ರಂಗದವರ ಪ್ರತಿಕ್ರಿಯೆ ಏನು? ಹಾಗೆ ಯೋಚಿಸುತ್ತಾ ಕುಳಿತೆ.

ಶಾಸಕರ ಭವನದತ್ತ ಮನಸ್ಸು ಹರಿಸಿದೆ. ಇಡೀ ಶಾಸಕರ ಭವನವಾದ ಶಾಸಕ ಭವನವೇ, ಸದಾ ಪುಢಾರಿಗಳ -ಆವೇಶದ ಜನರಿಂದ ಗಿಜಿಗಿಜಿ ಅನ್ನುತ್ತಿದ್ದ ಆವರಣವೇ ಮಂಗಮಾಯ ಆಗಿ ಸೂತಕದ ಕಳೆ ತುಂಬಿಕೊಂಡಿತ್ತು. ಶಾಸಕರ, ಅವರ ಹಿಂಬಾಲಕರ ದಂಡು ಇಲ್ಲದೆ ಬಣಗುಡುತ್ತಿತ್ತು. ಸುತ್ತಮುತ್ತ ಕಣ್ಣಾಯಿಸಿದೆ. ಅಂಗಡಿ, ಹೋಟೆಲ್ ಮಾಲೀಕರ ಮುಖದ ಮೇಲೂ ಅದೆಂತಹದ್ದೋ ಪ್ರೇತಕಳೆ. ಒಂದು ಮುಖ ಕಣ್ಣಿಗೆ ಬಿತ್ತು. ಚುನಾವಣೆಗೆ ಹೋಗುವುದೇ ಸೂಕ್ತ ಧೈರ್ಯವಿದ್ದರೆ ಚುನಾವಣೆಗೆ ಬನ್ನಿ ಅಂತ ಪಕ್ಷದ ಶಾಸಕರ ಸಭೆಯಲ್ಲಿ ಧೀರೋದಾತವಾಗಿ ಹಾರಾಡಿದ್ದ ಮುಖ ಅದು. ಅವತ್ತು ನೋಡಿದರೆ ಅದು ಮುಖಾನೇ ಅಲ್ಲ, ಅದರಲ್ಲಿ ಹೆಣದ ಕಳೆ. ಬಲವಂತವಾಗಿ ಆಗತಾನೆ ...ಲ್ಲೈದು ಜನರಿಂದ ರೇಪ್ ಮಾಡಿಸಿ ...ಂಡ ಹೆಂಗಸಿನ ಮುಖ ಇರುತ್ತಲ್ಲ ...ಟ್ ಅದೇ ತರಹ ಇತ್ತು, 'ಸಾರ್' ...ಿದೆ. 'ಸ್ವಾಮಿ' ಅಂತಾನೂ ಕೂಗಿ ...ೀಡಿದೆ. ನಾನು ಅವರ ಮತದಾರ ಅಲ್ಲ ಅಂತಾನೋ ಏನೋ ಕೇಳಿದರೂ ಕೇಳಿಸದವರ ಹಾಗೆ ಹೊರಟು ಹೋದರು. ಅಥವಾ ಪಕ್ಷದ ಶಾಸಕರ ಸಭೆಯಲ್ಲಿ ರೌದ್ರಾವತಾರ ತಾಳಿ ಕಳಕಳಿಯಿಂದ ಕೂಡಿದ್ದ ಮುಖಾರವಿಂದ ಹೊಂದಿದ್ದ ತಾವು ಈಗ ನೋಡಿದರೆ ರಣರಂಗದಲ್ಲಿ ತನ್ನ ಸರ್ವಸ್ವವನ್ನು ಕಳೆದುಕೊಂಡಿರುವವರ ತರಹ ದೈನೇಸಿ ಮುಖ ಹೊತ್ತಿದೀರಲ್ಲ ಅಂತ ಕೇಳಿಯಾರು ಎಂಬ ಆತಂಕವೋ ಏನು ಕಥೆಯೋ ತಿಳಿಯದು. ಅಂತೂ ತಲೆ ಮರೆಸಿಕೊಂಡರು. ಎಂತಹವರಿಗೂ ಇಂತಹ ಸಂದರ್ಭಗಳಲ್ಲಿ ...ಕಟ ಆಗೋದು ನ್ಯಾಯವೇ. ಇನ್ನು ಇಪ್ಪತ್ತು ತಿಂಗಳು ...ವಿಕಾರಾಸ ಆರಾಮವಾಗಿ ಅನುಭವಿಸಬಹುದಿತ್ತು, ...ಂದಿನ ಜೀವನಕ್ಕೆ ಅಂತ ಒಂದಿಷ್ಟು ಸಂಪಾದಿಸಲು ...ಜೇನ ...ಹಾಕಿಕೊಂಡಿದ್ದರೋ. ಅವುಗಳ ...ಾಯಿಗೆ ಕೊಳ್ಳಿ ಬಿದ್ದಿತ್ತು, ಬರುವ ಚುನಾವಣೇಲಿ ಗೆದ್ದು ಬಂದು ಇದನ್ನೆಲ್ಲ ಸರಿತೂಗಿಸಿಕೊಳ್ಳೋಣ ಅನ್ನೋಕೆ ಗೆಲ್ಲುವ ಅವಕಾಶನೂ ಕಡಿಮೆ. ಪಾಪ ಮನಸ್ಸಿಗೆ ಎಷ್ಟೊಂದು ನೋವಾಗಿರಬೇಡ.

ಮುಖ್ಯಮಂತ್ರಿ ಆಗಲೇಬೇಕು ಎಂದು ಛಲಬಿಡದ ವಿಕ್ರಮನಂತೆ ಹೋರಾಡುತ್ತಿರುವ ಮಾಜಿ ಡಿಸಿಎಂ ಯಡಿಯೂರಪ್ಪನವರನ್ನು ಕಾಣಲು ಬಯಸಿದೆ. ವಿಚಾರಿಸಲಾಗಿ ಶ್ರೀಯುತರು ಧರ್ಮಯುದ್ಧದಲ್ಲಿ ತೊಡಗಿರುವುದು ತಿಳಿಯಿತು. ತುಮಕೂರಿನ ಯುದ್ಧ ಭೂಮಿಗೆ ಹೋದೆ. ಮುಖ್ಯಮಂತ್ರಿ ದಿರಿಸಿನಲ್ಲಿ ಬೆಂಗಳೂರಿಗೆ ಹೋದರು ಅಂದರು. ಅಲ್ಲಿಗೆ ಹೋಗಿ ವಿಚಾರಿಸಿದರೆ ಮಂಗಳೂರಿಗೆ ಹೋಗಿದಾರೆ ಧರ್ಮಯುದ್ಧಕ್ಕೆ ಅಂದರು. ಅಲ್ಲಿಗೂ ಹಾರಿದೆ. ಯುದ್ಧಕ್ಕೆ ಎಲ್ಲವೂ ಸಿದ್ಧ ಆಗಿತ್ತು, ರಣಕಹಳೆ ಊದುವುದು ಬಾಕಿ ಇತ್ತು, ಅಷ್ಟರಲ್ಲಿ ಅದೇನೋ ಕಾಲ್ ಬಂತು. ರಣಧೀರನ ವಸ್ತ್ರ ಬದಲಾಯಿಸಿ ಮುಖ್ಯಮಂತ್ರಿ ದಿರಿಸಿನಲ್ಲಿ ಬೆಂಗಳೂರಿಗೆ ಹೋದರು ಎಂದು ತಿಳೀತು. ಇವರನ್ನು ಹಿಡಿಯಲೇಬೇಕು ಅಂತ ತೀರ್ಮಾನಿಸಿದೆ. ಕತ್ತೆ ಕೆಟ್ಟರೆ ಹಾಳು ಗೋಡೆ ಯಡ್ಡಿ ಕೆಟ್ಟರೆ ಶಿವಮೊಗ್ಗ ಅಂತ ಅಲ್ಲಿ ಕಾಯ್ದೆ. ರಣದುಂಧುಬಿಯೊಂದಿಗೇ ಭಾವೀ ಮುಖ್ಯಮಂತ್ರಿ ಆಕಾಂಕ್ಷಿಗಳು ಬಿಜಯಂಗೈದರು. ರಣಕಹಳೆ ಬಾರಿಸಬೇಕು. ಅಷ್ಟರಲ್ಲಿ ಒಂದು ಫೋನ್ ಕಾಲು. ಬಟ್ಟೆ ಬದಲಾಯಿಸಿದರು. ಮುಖ್ಯಮಂತ್ರಿ ದಿರಿಸಿನಲ್ಲಿ ಹಾರಿದರು.



ಇವರ ಧರ್ಮಯುದ್ಧದ ನೀತಿ, ರೀತಿಗಳೇ ಅರ್ಥ ಆಗಲಿಲ್ಲ. ಯುದ್ಧ ಸಾರುತ್ತೀವಿ ಅಂತಾರೆ ಮಧ್ಯೆಯೇ ನಿಲ್ಲಿಸಿ ಅದೆಲ್ಲಿಗೋ ಮಾಯ ಆಗ್ತಾರೆ. ಇದೇನು ಧರ್ಮಯುದ್ಧದ ಮರ್ಮ ಅಂತ ಯೋಚಿಸುತ್ತಿದ್ದೆ. ಇವರ ಒಳ ಹೊರಗನ್ನು ತಿಳಿದವರೊಬ್ಬರು ವಿಷದೀಕರಿಸಿದರು. 'ಕುರುಕ್ಷೇತ್ರ ಯುದ್ಧದ ತರಹವೇ ಇದು. ಶ್ರೀಕೃಷ್ಣ ಪರಮಾತ್ಮ ಅರ್ಜುನನಿಗೆ ಗೀತೋಪದೇಶ ಮಾಡುವಾಗ ಏನು ಮಾಡಿದ? ದಯಾಮಯ ಯುದ್ಧಕ್ಕೆ ತಾತ್ಕಾಲಿಕ ತಡೆ ಒಡ್ಡಿದ. ಇವರೂ ಅದನ್ನು ಅನುಸರಿಸಿ ತಾತ್ಕಾಲಿಕ ತಡೆ ನೀಡುತ್ತಿದ್ದಾರೆ!'

ಯಡಿಯೂರಪ್ಪ ಅವರಿಗೆ ಮುಖ್ಯಮಂತ್ರಿ ಬಾಗಿಲು ತಾತ್ಕಾಲಿಕವಾಗಿಯಾದರೂ ಬಂದ್ ಆಗಿದೆ ಎಂಬ ಗೀತೋಪದೇಶ ಆದನಂತರ ಮತ್ತೆ ಧರ್ಮಯುದ್ಧಕ್ಕೆ ನಿಂತರು. ಆರಂಭದ ಬಿರುಸು ಅದೇಕೋ ಮಾಯ ಆದಂತಿತ್ತು. ಹಾವೇರಿಯಲ್ಲಿ ಸಮಯ ಕಾಯ್ದು ಅವರನ್ನು ಸಂದರ್ಶಿಸಿದೆ. ವಚನಭ್ರಷ್ಟತೆ, ಗುರುಸನ್ನಿಧಿಯಲ್ಲಿ ಆಡಿದ ಮಾತಿನ ಪಾವಿತ್ರ್ಯತೆ ಇವುಗಳನ್ನೆಲ್ಲ ಕಳಕಳಿಯಿಂದ ಹೇಳಿದರು. ಇಡೀ ಜೀವಮಾನದಲ್ಲಿ ಈ ಮನುಷ್ಯ ಕೊಟ್ಟ ಮಾತನ್ನು ಮೀರಿದವನಲ್ಲ ಅನ್ನಿಸುವಂತಿತ್ತು ಅವರ ಮಾತಿನ ವರಸೆ. ಗೋವಿನ ಹಾಡನ್ನು ಹಾಡಿದರು. ಅದು ಎಷ್ಟು ಅದ್ಭುತವಾಗಿತ್ತು ಅಂದರೆ ಅವರ ದನಿಗೆ ನಾನೂ ದನಿ ಸೇರಿಸಲಿ ಅನ್ನುವ ಹುಮ್ಮಸ್ಸನ್ನು ನೀಡುತ್ತಿತ್ತು. ಕೊನೆಯದಾಗಿ ಮ್ಲಾನವದನರಾಗಿ ನುಡಿದರು- 'ಇಂತಹ ನಾಡಿನಲ್ಲಿ ಹುಟ್ಟಿದ ನಾವು, ನಮ್ಮ ಮಕ್ಕಳು ವಿದೇಶಕ್ಕೆ ಹೋಗುತ್ತಾರೆ. ಅಲ್ಲಿ ನೀವು ಎಲ್ಲಿಂದ ಬಂದಿದ್ದೀರಿ ಎಂದು ಕೇಳುತ್ತಾರೆ. ಇವರ ಉತ್ತರ ಕೇಳಿದ ಅವರು ವಚನಭ್ರಷ್ಟರ ನಾಡಿನಿಂದ ಬಂದವರಾ ನೀವು ಎಂಬುದಾಗಿ ಹೀಯಾಳಿಸುತ್ತಾರೆ. ಇಂತಹ ದುಸ್ಥಿತಿಗೆ ನಮ್ಮ ಮಕ್ಕಳನ್ನು ತಳ್ಳಬೇಕಾ?'

ಮುಂದೆ ವಿದೇಶಕ್ಕೆ ತೆರಳಲಿರುವ ಕನ್ನಡನಾಡಿನ ಯುವ ಪೀಳಿಗೆಯನ್ನು ಕುರಿತು ಅದೆಷ್ಟೊಂದು ಆತಂಕ! ಇಂತಹ ಘೋರ ಅಪಮಾನಕ್ಕೀಡಾಗಬಾರದಿದ್ದರೆ ಕನ್ನಡಿಗರು ವಿದೇಶಗಳಿಗೆ ಹೋಗಲೇಬಾರದು! ಹೋದರೆ ದುರಂತ ತಪ್ಪದು!

ಕನ್ನಡದ ತಾಜಾಮಾಲುಗಳ ರಫ್ತು ವ್ಯವಹಾರಕ್ಕೆ ಇಂತಹ ಘನಘೋರ ಅಪಾಯ ತಂದಿರುವ ವಚನಭ್ರಷ್ಟ ಮಾಜಿ ಮುಖ್ಯಮಂತ್ರಿ ಕಾಣಲು ಮನಸ್ಸು ತವಕಿಸಿತು. ಆ ಪಕ್ಷದ ಶಾಸಕರೆಲ್ಲರನ್ನು ಪಕ್ಷದ ಕಚೇರಿಯಲ್ಲಿ ಕೂಡಿ ಹಾಕಿಕೊಂಡಿದ್ದಾರೆ ಎಂಬುದನ್ನು ತಿಳಿದು ಅಲ್ಲಿಗೆ ಹೋದೆ. ಸಭೆ ಮುಕ್ತಾಯ ಘಟ್ಟಕ್ಕೆ ಬಂದಿತ್ತು. ಯಡಿಯೂರಪ್ಪ ಮುಖ್ಯಮಂತ್ರಿ, ಕುಮಾರಸ್ವಾಮಿ ಉಪಮುಖ್ಯಮಂತ್ರಿ ಎಂದು ತೀರ್ಮಾನ ಆಗಿತ್ತು.

ಕೃತಿಗಿಳಿಯಿತೆ ಇದು?

ಶಿವಪೂಜೆಯಲ್ಲಿ ಕರಡಿ ನುಗ್ಗಿದಂತೆ ನುಗ್ಗಿದರು-ಎಚ್.ಡಿ. ರೇವಣ್ಣ ಮಹಾಶಯರು. 'ಹೀಗೇನಾದರೂ ಆದರೆ.....' ಕೋಪ, ದುಃಖದ ಭಾರದಿಂದ ಕುಸಿದರು ಅವರು.

'ಏನು ಏನಾಗುತ್ತದೆ' ಎಲ್ಲರ ಆತಂಕ.

'ದೊಡ್ಡ ಗೌಡರು ವಿಷ ಕುಡೀತಾರೆ!' ಬಿಕ್ಕಳಿಸುತ್ತಾ ಹೇಳಿದರು ರೇವಣ್ಣ.

ರಾಜ್ಯದ ರಾಜಕೀಯ ಕುಟುಂಬದ ರಾಜಕೀಯದ ಕೀಳ್ಮಟ್ಟ ತಲುಪಿತ್ತು!

ಇಪ್ಪತ್ತು ತಿಂಗಳ ಹಿಂದೆ ಕೋಮುವಾದಿ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡಾಗಲೇ ಅವರು ಸಾಯಬಾರದಿತ್ತೆ; ಇವನೂ ಇವನ ಅಪ್ಪನೂ ಸತ್ತರೆ ಕುಮಾರಸ್ವಾಮಿ ಬದುಕುತ್ತಾನೆ ಎಂಬುದು ಹಲವು ಶಾಸಕರ ನಿಲುವು. ನಮ್ಮ ದರ್ಬಾರು ಇನ್ನೂ ಇಪ್ಪತ್ತು ತಿಂಗಳು ನಡೆಯುತ್ತದೆ ಅನ್ನುವ ಒಳಮನಸ್ಸು. ಆದರೆ ಹಾಗೆ ಹೇಳುವಂತಿಲ್ಲ!

ಇಲ್ಲೊಂದು ಉಪಕತೆ:

ಯಡಿಯೂರಪ್ಪ ಮುಖ್ಯಮಂತ್ರಿ. ಕುಮಾರಸ್ವಾಮಿ ಉಪಮುಖ್ಯಮಂತ್ರಿ.

ಈ ಸುದ್ದಿ ಕಾದ ಸೀಸದಂತೆ ಬಿದ್ದಿತು ಶ್ರೀಮತಿ ರೇವಣ್ಣ ಅವರ ಕಿವಿಗೆ!

ಧುಮುಧುಮು ಧಾವಿಸಿದರು ಭವಾನಿ ಪತಿ ಸಮೇತ ಮಾವನ ಮನೆಗೆ. ತಮಗಾಗಿರುವ ಅನ್ಯಾಯ.... ಹಿರಿಯ ಮಗ ಕಿರಿಯಮಗನ ಮಾತು ಇಲ್ಲಿಯವರೆಗೆ ಕೇಳಿದ್ದು.... ಆ ಅವಳು ನೆನ್ನೆಮೊನ್ನೆ ಬಂದವಳು ಅನಿತ ಅನ್ನಿಸಿಕೊಂಡವಳು ಕಸ್ತೂರಿ ಚಾನೆಲ್ ತೆರೆದು ಮೆರೆಯುತ್ತಿರುವುದು... ಅದೂ ಸಾಲದೆಂಬಂತೆ ಈಗಲೂ ತನ್ನ ಗಂಡ ಅವನ ಕೈಕೆಳಗೇ ಇರಬೇಕೆಂದರೆ.... ಆ ಭವಾನಿ ತಾಯಿಗೆ ಎಷ್ಟು ಸಂಕಟ ಆಗಿರಬೇಡ.... ತಾರಕಕ್ಕೇರಿದ ಈ ಅನ್ಯಾಯದ ಪರಿ ಅತ್ತೆ

"ಅಲೊಯಿಲ್ಲ ಸು ಕಣೊ, ನಿನ್ನ ಕಾಸಲ್ಲಿ ನೀನು ಕುದ ಕಳಕೇನು ತೊಂದ್ರೆ ಮಾಡಿದಿಲವಂತೆ."

"ಅದೇ ಬಂದಿರೊ ತೊಂದ್ರೆ. ನಾನು ಡ್ರಿಂಕ್ಸ್ ಮಾಡಬೇಕು ಅಂದ್ರೆ ಪಾರ್ಟಿ ಕಡೆಯಿಂದ ಹೆಲ್ಪಾಗಬೇಕು. ಅವುರು ಕುದಿಯಕ್ಕೆ ಕೊಡದಿಲ್ಲ ಅನ್ನದಾದ್ರೆ ಪಾರ್ಟಿ ಡೆವಲಪ್‌ಮಾಡದ್ಯಂಗೆ? ನೋಡಾಗ್ಲೆ ದ್ಯಾವೇಗೌಡ್ರು ಮಕ್ಕಳ ಸಂಬಿದೋರ ಮನಿಗಾಗ್ಲೆ ಟಿವಿ, ಮಿಕ್ಸಿ ಯಲ್ಲ ಬಂದವೆ. ಅವುರು ಟಿ.ವಿ, ಮಿಕ್ಸಿ, ಮೊಬೈಲ್ ಕೊಡುಸ್ತ ಇರುವಾಗ ಮಹಿಮಾ ತಯಾರು ಮಾಡೊ ಮ್ಯಾನಿಫೆಸ್ಟೊ ಗಾಂಧೀಜಿ ದಿನಚರಿ ಥರ ನನಿಗಾಗ್ಲೆ ಹೊಳಿತಾ ಅದೆ."

"ನೀನೇಳಾಯಿರದು ನಿಜ ಕಂಡ್ರ. ನಾನು ಯಲಕ್ಷನ್ನಿಗಿಂತ ಮದ್ಲು ಆ ಬೂವಮ್ಮನ ಮನಿಗೋಗಿದ್ದೆ. ಮನೆಲಿ ಏನೂ ಇರಲಿಲ್ಲ. ಮನ್ನೆದಿನೋಗಿ ನೋಡ್ತಿನಿ. ಟಿವಿ ತಂದು ಮಡಗಿದ್ಲು. ಕೇಳಿದ್ರೆ ಮನೆಲಿ ಏಳು ಓಟವೆ ಅಂದ್ಲಂತೆ. ದಳದೋರು ಟಿವಿ ಕೊಟ್ರಂತೆ. ಯಲಕ್ಷನ್ನು ಹಿಂಗಾದ್ರೆ ನಾವ್ಯೆಲ್ಲ ಎಲ್ಲಿಗೋಗನ?" ಎಂದು ಜುಮ್ಮಿ ಚಿಂತಾಕ್ರಾಂತಳಾದಳು.

"ಈ ದಳದ ನನ್ನ ಮಕ್ಕಳು ಬಂದು ಇದೀ ಕರನಾಟಗ ಅರ್ದ ಬಿಕ್ಸುಕುರು ಮಾಡಿಬುಟ್ರು ಕಂಡ್ರ" ಎಂದ ಸೀರ.

"ನೋಡು ಚಿಗಪ್ಪ ಅವುರ ಮಾಡಿದ್ದು ಅವುರಿಗೇ. ತಿರಿಕತ್ತಾ ಅದೆ. ಅವುರು ಐನೂರುಪಾಯಿ ನೋಟು ಕೊಟ್ರೆ ಬಿಜೆಪಿಗಳು ಸಾವುರುಪಾಯಿ ನೋಟು ಕೊಡಂಗಾಗ್ಯವುರೆ."

"ನಿಜವೇನ್ಲ?" ಎಂದಳು ಜುಮ್ಮಿ.

"ಊ ಕಣಕ್ಕ, ಅವುರಿಗೂ ಗಣಿ ದುಡ್ಡು ಸಿಕ್ಯದೆ. ದ್ಯಾವೇಗೌಡನ ಕಡಿಯೋರಿಗಂತೂ ಯಲ್ಲಾ ದುಡ್ಡು ಸಿಕ್ಯದೆ. ಈ ಕಾಂಗ್ರೆಸ್ ಬಡ್ಡೆತ್ತವೆಯಾ ಚಿತ್ರಾನ್ನಾಗಿರವು."

"ನಿಜ ಕಣೊ, ನಾವು ಹಿಂಗೇಯಿರತಿವಿ ಅಂತ ಕಾಂಗ್ರೆಸ್ಸಿನವು ನಿಧಾನಕ್ಕೆ ತಿನ್ನಕಂಡು ಆರಾಮಾಗಿದ್ರೊ. ಈ ಹಗಲಗಳ್ರು ಬಂದು ತಿಂದಿರೊ ದುಡ್ಡು ಮಾಡಿರೊ ಆಸ್ತಿ ನೋಡಿ ಅಂಥಾ ಕಾಂಗ್ರೆಸಿನವೇ ದಂಗಬಡದು ಕುಂತವೆ. ಅಂಗಾಗಿ ಮುಂದಿನ ಚುನಾವಣೆ ಏನಿದ್ರು ದಳ-ಬಿಜೆಪಿ ನಡುವೆ ವರತೂ ಕಾಂಗ್ರೆಸ್ಸು ಇಬ್ರುಗೂ ಎದುರಾಳಿ ಆಗದಿಲ್ಲ ಅನ್ನುಸ್ತಾ ಅದೆ."

"ಎಜ್ಯಾಟ್ಲಿ ಕರಟ್ ಕಣೊ ಉಗ್ರಿ ನೀನೇಳಿದ್ದು. ಎಡೂರಪ್ಪ ಬತ್ತನೆ ಅಂದ್ರೆ ಜನಸೇರತರೆ, ಕುಮಾರಸ್ವಾಮಿ ಬತ್ತನೆ ಅಂದ್ರೆ ಜನ ಬತ್ತರೆ. ಅದೇ ಧರ್ಮಸಿಂಗನೊ ಕರಗೆನೊ ಬತ್ತನೆ ಅಂದ್ರೆ ಯಾರು ಬಂದರೊ?"

"ಅವ್ಯಲ್ಲ ಶೆಡ್ಡಿಗೆ ಹೊಡಿಯೋ ಗಾಡಿಗಳು ಕಣೊ."

"ಒಂಥರ ನಮ್ಮ ದ್ವಡಪ್ಪ ಚಿಗಪ್ಪ ಇದ್ದಂಗೆ" ಎಂದ ವಾಟಿಸ್ಸೆ.

"ಹೋಗೊ ನಿನ್ನವುನ್ ಕಂತೆನ್ನಾಡ" ಎಂದ ಸೀರ. ■

ಮಾವರಿಗೆ ಅರ್ಥವಾಗಬೇಕಲ್ಲ... ಅಲ್ಲಿದ್ದ ಪೋಕೇಸ್ ಪುಡಿಪುಡಿ ಮಾಡಿದರು....

ಅತ್ತೆ ಮಾವಂದಿರಿಗೆ ಸೊಸೆಯ ನೋವು ಅರ್ಥ ಆಯಿತು!

'ಹೀಗೇನಾದರೂ ಆದರೆ ನಾನು ವಿಷ ಕುಡೀತೀನಿ' ಅಂದರು ದೊಡ್ಡ ಗೌಡರು. ಶಾಸಕರ ಸಭೆಗೆ ಈ ಸುದ್ದಿ ಹೊತ್ತು ತಂದರು ರೇವಣ್ಣ!

ಕೆಟ್ಟೆನೋ ಬಿಟ್ಟೇನೋ ಎಂದು ಸಭೆಯಿಂದ ಪದ್ಮನಾಭನಗರದ ಮನೆಗೆ ದೌಡಾಯಿಸಿದರು ಮಾಜಿ ಮುಖ್ಯಮಂತ್ರಿಗಳು.

'ನನ್ನ ಮಾಂಗಲ್ಯ ಭಾಗ್ಯ ಉಳಿಸು ಮಗನೆ' ಎನ್ನುತ್ತಾ ತಾಯಿ ಚನ್ನಮ್ಮ ಮಗನ ಮುಂದೆ ಕಣ್ಣಲ್ಲಿ ನೀರು ತುಂಬಿ ಅಂಗಲಾಚಿದರು!

ಪರಿಣಾಮ: ಶಾಸಕರ ಸಭೆ ಮತ್ತೆ ರೆಸಾರ್ಟ್ ದಾರಿ ಹಿಡಿಯಿತು!

ಇದು ಕಾಗಕ್ಕ ಗುಬ್ಬಕ್ಕನ ಕತೆ ತರಹ ಕೇಳಿಸಬಹುದು. ಹಾಗಾದರೆ ಸಂತೋಷವೇ! ಇರಲಿ. ಕುಮಾರಸ್ವಾಮಿ ರೆಸಾರ್ಟ್‌ನಲ್ಲಿ ಸಿಗುತ್ತಾರೆ ಎಂದು ಖಚಿತ ಆಯಿತಲ್ಲ, ಅಲ್ಲಿಗೇ ಹೋದೆ. 'ಜನತಾ ನ್ಯಾಯಾಲಯಕ್ಕೆ ಹೋಗ್ತೀವಿ' ಅಂದರು ಅವರು. 'ಅಲ್ಲ ವಚನ ಭ್ರಷ್ಟತೆ....' ಅಂದದ್ದೇ ತಡ. 'ಬಸವ ಕಲ್ಯಾಣದಿಂದ ಮಲೆಮಹದೇಶ್ವರದವರೆಗೆ ಪಾದಯಾತ್ರೆ ಮಾಡ್ತೀನಿ. ಯಾರು ವಚನಭ್ರಷ್ಟರು ಅಂತ ವಿವರಿಸ್ತೀನಿ' ಅಂದರು. ಶಾಸಕರ ಒಟ್ಟಾರೆ ಅಭಿಪ್ರಾಯ ದೇವೇಗೌಡರ ಅಭಿಪ್ರಾಯಾನೆ ಆಗಿರುವುದು ಖಾತರಿ ಆಯಿತು. ಮುಂದೇನು ಅವರ ಹತ್ತಿರ ಮಾತುಕತೆ ಅಂತ ತೆಪ್ಪಗಾದೆ.

ಯಾಕೋ ಏನೋ ಕಲ್ಕಿ ಭಗವಾನ್ ಅಮ್ಮ ಭಗವಾನ್ ಅಂತ ಹುಚ್ಚುಚ್ಚಾಗಿ ಆಡಿದರೂ, ಮಂತ್ರಿ ಪದವಿ ಸಿಗಲಿಲ್ಲ ಅಂತ ಬಸವ ಕಲ್ಯಾಣದಲ್ಲಿ ಒಂದು ತಿಂಗಳು ಪೆದ್ದುಪೆದ್ದಾಗಿ ಮೌನವ್ರತ ತಾಳಿದ್ದರೂ ಮಹಿಮಾ ಪಟೇಲ ನೆನಪಾದರು. ಕಂಡಕೂಡಲೆ 'ಸುವರ್ಣ ಪಕ್ಷ ಕಟ್ತೀನಿ' ಅಂದರು. ಇನ್ನೂ ಹುಚ್ಚು ಪೂರ್ತಿ ವಾಸಿಯಾಗಿಲ್ಲ ಅನ್ನುಸ್ತು, 'ಪಾದಯಾತ್ರೆ ಮಾಡಿ ಸ್ವಚ್ಛ ರಾಜಕೀಯ ಅಂದರೆ ಹೇಗಿರಬೇಕು ಅಂತ ಜನರಿಗೆ ತಿಳುಸ್ತೀನಿ' ಅಂದರು. ಸ್ವಲ್ಪ ರೆಸ್ಟ್ ತಗೊಳ್ಳೋದು ಉತ್ತಮ ಅನ್ನಿಸಿತು.

ಅಲ್ಲ,
ಭಾರತೀಯ ಜನತಾಪಕ್ಷ ಧರ್ಮಯುದ್ಧ
ಜಾತ್ಯತೀತ ಜನತಾದಳ ಪಾದಯಾತ್ರೆ
ಸುವರ್ಣ ಪಕ್ಷ ವಿಶಾಲಯಾತ್ರೆ

ಹೀಗೆ ಯಾತ್ರೆ ಮಾಡ್ತಾರಂತಲ್ಲ, ನೂರಾರು ವರ್ಷಗಳ ಇತಿಹಾಸ ಇರುವ ಪಕ್ಷ ನಮ್ಮದು ಅಂತ ಬೊಗಳೆ ಹೊಡೆಯುತ್ತಿರುವ ಕಾಂಗ್ರೆಸ್ ಪಕ್ಷ ಯಾಕೆ ಇನ್ನೂ ಮಲಗಿಕೊಂಡೇ ಇದೆ ಅಂದರೆ.... ಪಕ್ಷದ ಚಿಹ್ನೆ, ತಮ್ಮ ಮುಖಾರವಿಂದಗಳೇ ಸಾಕು ಓಟುಗಳನ್ನು ಗೋರಿಗುಡ್ಡೆ ಹಾಕೋಕೆ ಅಂತ ಇರಬಹುದಾ....! ಹಾಗೇನಾದರೂ ಆದರೆ ಮೂರನೆ ಸ್ಥಾನ ಯಾವ ಪಕ್ಷದು ಅಂತ ಹೇಳೋಕೆ ಕಣೇನೇನೂ ಕೇಳಬೇಕಾಗಿಲ್ಲ!

ಇದೇನು ಇದೆಲ್ಲ ರಾಜ್ಯಮಟ್ಟದ್ದೇ ಆಗಿಹೋಯಿತಲ್ಲ ಅಂತ ತಳಮಟ್ಟಕ್ಕೆ ಇಳಿದೆ. ಅವರೆಲ್ಲ ಬಲೇ ಖುಷಿಯಾಗಿದ್ದರು. 'ಇದೇನ್ರಪ್ಪ ಹಿಂಗೆ. ರಾಜ್ಯ ಹೋಗಿ ಬೆಲ್ಲೀಲಿ ಕುಂತಿದೆ. ನಿಮಗೆ ಅದರ ಗ್ಯಾನಾ ಆದರೂ ಬ್ಯಾಡವಾ' ಅಂದದ್ದಕ್ಕೆ, 'ಈ ಶಾಸಕ ನನ್ನ ಮಕ್ಕಳು ಒಳ್ಳೇದಕ್ಕೆ ಕೆಟ್ಟದ್ದಕ್ಕೆಲ್ಲ ಮೂಗು ತೂರುತ್ತಿದ್ದರು. ಈಗ ನೋಡಿ ನಿರಾಳ' ಅಂದರು!

ಇಷ್ಟು ಅಧಿಕಾರಸ್ಥ ಮಹಾಶಯರುಗಳು ಕೇಳುವಂತೆಯೇ ಇರಲಿಲ್ಲ, ಎಷ್ಟೋ ಜನರು ರಾಷ್ಟ್ರಪತಿ ಆಳ್ವಿಕೆ ಹೇರಿತು ಅಂತ ತಿಳಿದಾಗ 'ಪಾರ್ಟಿ' ಮಾಡಿದರಂತೆ!


ಯಾಕಿಷ್ಟು ಸಂತೋಷ ಅವರಿಗೆ?

ಲಂಚದ ಮಧ್ಯದಲ್ಲಿ ಶಾಸಕರ ಕಾಲು ಅಂತ ನೀಡಬೇಕಿಲ್ಲ! ■

ತ್ರಾಣವಿಲ್ಲದವರ ಗುಣ


ನಮ್ಮ ಜನರ ದುಗುಡ ಮತ್ತು ದೌರ್ಬಲ್ಯ ಎಷ್ಟು ಗಾಢವಾಗಿದೆ! ಸುಮ್ಮನೇ ಕೂತು ಅಂಕಿಅಂಶಗಳತ್ತ ನೋಡುತ್ತಿದ್ದೇನೆ. ಭಾರತ ಈಗ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶ, ಭೂತಾನ್, ಬರ್ಮಾಗಳ ಹಿರಿಯಣ್ಣ; ಕೆಲವೊಮ್ಮೆ ದುಷ್ಟ ಗೂಂಡಾ ರೀತಿಯಲ್ಲೂ ವರ್ತಿಸುವುದುಂಟು.

ಹದಿನೈದು ಲಕ್ಷ ಸೈನಿಕರು, ಭೀಕರ ಶಸ್ತ್ರಾಸ್ತ್ರಗಳನ್ನುಳ್ಳ ಭಾರತದ



ಅರ್ಧಭಾಗ ಜನ ತಿನ್ನಲು ಗತಿ ಇಲ್ಲದೆ, ಇರಲು ಮನೆ ಇಲ್ಲದೆ ಬದುಕಿದ್ದಾರೆ; ಕರ್ನಾಟಕದಲ್ಲಿಯೇ ಗ್ರಾಮಾಂತರ ಪ್ರದೇಶಗಳಲ್ಲಿ ಹತ್ತೂವರೆ ಲಕ್ಷ ಕುಟುಂಬಗಳಿಗೆ ಮನೆ ಇಲ್ಲ; ಪಟ್ಟಣಗಳಲ್ಲಿ ಆರೂಕಾಲು ಲಕ್ಷ ಕುಟುಂಬಗಳಿಗೆ ವಸತಿ ಇಲ್ಲ. ಅಲ್ಲದೆ ಊಟ ನೋಡಿ... 'ಕ್ಯಾಲರಿ' ಎಂದರೆ ಮನುಷ್ಯನ ದೇಹದ ಬಳಕೆಗೆ ಬೇಕಾಗುವ ಕಾವು

ಮರೆಯುವ ಮುನ್ನ



ಪಿ. ಲಂಕೇಶ್ -ಮೇ 7, 1989

ಉತ್ಪಾದಿಸುವ ಆಹಾರದ ಶಕ್ತಿ, ಪೌಷ್ಟಿಕವಲ್ಲದ ಬೂಸಾ ತಿಂದರೆ ಕೆಲಸ ಮಾಡಲು ಶಕ್ತಿ ಕೂಡ ಇರುವುದಿಲ್ಲ, ವಿಶ್ವಸಂಸ್ಥೆ ಒಬ್ಬ ಸಾಮಾನ್ಯ ಮನುಷ್ಯ ಆರೋಗ್ಯವಾಗಿರಲು, ಉತ್ಸಾಹದಿಂದ ಕೆಲಸ ಮಾಡಲು ನಿಗದಿ ಮಾಡಿರುವ ಕ್ಯಾಲರಿಗಳು 2269.5. ಬಡ ದೇಶಗಳ ಮನುಷ್ಯ ತಿನ್ನುವ ಆಹಾರದಲ್ಲಿ ಕೇವಲ 1000 ಕ್ಯಾಲರಿಗಳಿರಲು ಸಾಧ್ಯ. ಅಮೆರಿಕಾದಂಥ ಶ್ರೀಮಂತ ದೇಶದ ಪ್ರಜೆ 3647 ಕ್ಯಾಲರಿಯಷ್ಟು ಶಕ್ತಿಯುತ ಆಹಾರ ಸ್ವೀಕರಿಸುತ್ತಾನೆ. ಇದು ವಿಶ್ವಸಂಸ್ಥೆ ನಿಗದಿಪಡಿಸುವುದರ ಶೇಕಡ 138 ಭಾಗ; ಅಂದರೆ ಒಂದೂಕಾಲು ಭಾಗಕ್ಕಿಂತ ಹೆಚ್ಚು.

ಈಗ ಭಾರತೀಯ ತಿನ್ನುವ ಪರಿಸ್ಥಿತಿ ನೋಡಿ. ಭಾರತೀಯ ಜೋಭದ್ರಗೇಡಿಯಾಗಿರಲು, ಚೈತನ್ಯಹೀನನಾಗಿರಲು ಇಲ್ಲಿ ಕಾರಣ ದೊರೆಯಬಹುದು. ಈ ಭಾರತವೆಂಬ 'ಅಣ್ಣ' 2088 ಕ್ಯಾಲರಿ ಆಹಾರ ತಿನ್ನುತ್ತಾನೆ, ಇದು ವಿಶ್ವಸಂಸ್ಥೆ ನಿಗದಿಪಡಿಸಿರುವುದರ ಶೇ.92. ಪಾಕಿಸ್ತಾನಿ 2232 ಕ್ಯಾಲರಿಯಷ್ಟು ತಿನ್ನುತ್ತಾನೆ (ಶೇ.103); ಶ್ರೀಲಂಕಾದವನು 2331 ಕ್ಯಾಲರಿ (ಶೇ. 105); ಬರ್ಮಾ ಪ್ರಜೆ 2360 ಕ್ಯಾಲರಿ (ಶೇ. 109). ನಾವು ಯಾರ ಜೊತೆಗೆ ಇದ್ದೇವೆ ಗೊತ್ತೆ? ನೇಪಾಳದವನು 2008 (ಶೇ.91); ಬಾಂಗ್ಲಾದೇಶದವನು 1869 (ಶೇ.85) ಭೂತಾನಿಗ 2058 (ಶೇ.89).

ಇಲ್ಲಿಯ ನೀಚನತಕ್ಕೆ ಈ ಅಂಕಿಅಂಶ ಕೂಡ ಕಾರಣ ಒದಗಿಸಬಹುದು.

ಬಸವನಾಳರು

ಸುಮಾರು ಅರ್ಧ ಶತಮಾನದ ಹಿಂದೆ ಬದುಕಿದ್ದ ಬಸವನಾಳ ಎಂಬ ಪ್ರಾಧ್ಯಾಪಕರ ಬಗ್ಗೆ ನೀವು ಕೇಳಿರಬಹುದು. ಇವರು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಗಣ್ಯರಾಗಿದ್ದರು. ದೊಡ್ಡ ವಿದ್ವಾಂಸರಾಗಿದ್ದರು, ಸಂಶೋಧಕರಾಗಿದ್ದರು. ಲಿಂಗಾಯತರಾಗಿದ್ದ ಬಸವನಾಳರ ಬಗ್ಗೆ ಲಿಂಗಾಯತರೆಲ್ಲ ಒಣ ಹೆಮ್ಮೆ ಇಟ್ಟುಕೊಂಡಿದ್ದರು. ಆದರೆ ಬಸವನಾಳರು ಸಂಶೋಧಕನಿಗೆ, ಸತ್ಯಶೋಧಕನಿಗೆ ಬೇಕಾದ ಸ್ಪಷ್ಟತೆ ಮತ್ತು ಪ್ರಾಮಾಣಿಕತೆ ಪಡೆದಿದ್ದರು. ಲಿಂಗಾಯತ ಕೋಮನ್ನು ಬಲ್ಲ ಬಸವನಾಳರು ಇತರೆ ಜಾತಿಗಳ ಸ್ಥಿತಿಗತಿ ಅರಿತಿದ್ದರು. ಆ ಕಾಲದಲ್ಲಿ ಲಿಂಗಾಯತರನ್ನ ಹಿಂದುಳಿದವರೆಂದು ಸರ್ಕಾರ ಪರಿಗಣಿಸಿದಾಗ ಬಸವನಾಳರು ಹೇಳಿದರು: "ನಮ್ಮ ಜನರ ಕಷ್ಟಕಾರ್ಪಣ್ಯಗಳನ್ನು, ಜೀವನಮಟ್ಟವನ್ನು ಬಲ್ಲ ಯಾರೂ ಲಿಂಗಾಯತರನ್ನು ಹಿಂದುಳಿದವರು ಎಂದು ಪರಿಗಣಿಸಲಾಗುವುದಿಲ್ಲ, ಸುಳ್ಳಾಗಿ ಹಿಂದುಳಿದವರು ಎಂದು ಕರೆದುಕೊಂಡು ಸವಲತ್ತು ಬಯಸಲು ಸ್ವಾಭಿಮಾನಿಗಳಾದ ಲಿಂಗಾಯತರು ನಿರಾಕರಿಸಬೇಕು."

ಆತ ನಿಜವಾದ ಬಸವಣ್ಣನ ಶಿಷ್ಯ.

ಕನ್ಯೆಯರು



ಪಂಚಮಹಾಕನ್ಯೆಯರ ಬಗ್ಗೆ ಆಧುನಿಕ ಪತಿವ್ರತೆಯರು ಯೋಚಿಸಬೇಕು. ದ್ರೌಪದಿ, ಅಹಲ್ಯಾ, ತಾರಾ, ಮಂಡೋದರಿ, ಸೀತಾ- ಇವರನ್ನು 'ಪಂಚ ಕನ್ಯೆಯರು' ಎಂದು ಕರೆಯುತ್ತಾರೆ; ಇವರಲ್ಲಿ ಯಾರೂ ಕನ್ಯೆಯರಲ್ಲ. ಕನ್ಯೆ ಎನ್ನುವುದನ್ನು ಇಲ್ಲಿ ಹೆಂಗಸು ಎನ್ನುವ ಅರ್ಥದಲ್ಲಿ ಬಳಸಿರಬೇಕು. ಆದ್ದರಿಂದಲೇ ಇವರನ್ನು ಪಂಚಮಹಾ ಪತಿವ್ರತೆಯರು ಎಂದೂ ಕರೆಯುತ್ತಾರೆ. ಹಾಗೆ ನೋಡಿದರೆ ಸೀತೆಯೊಬ್ಬಳನ್ನು ಬಿಟ್ಟರೆ ಮಿಕ್ಕವರೆಲ್ಲ ಅಂಥ ಪತಿವ್ರತೆಯರೂ ಅಲ್ಲ. ಅಹಲ್ಯೆ ಕಲ್ಲಾದದ್ದು, ದ್ರೌಪದಿ ಐದು ಜನರ ಹೆಂಡತಿಯಾಗಿದ್ದು ಆರನೆಯವನಿಗೆ ಸ್ಪಂದಿಸಿದ್ದು, ತಾರಾ ವಾಲಿಯನ್ನು ಬಿಟ್ಟು ಸುಗ್ರೀವನನ್ನು ವರಿಸಿದ್ದು, ಮಂಡೋದರಿ ಕೂಡಾ ರಾವಣ ಸತ್ತ ಮೇಲೆ ವಿಭೀಷಣನನ್ನು ವರಿಸಿದ್ದು-ಇದೆಲ್ಲ ಇಲ್ಲಿ ಮುಖ್ಯವಲ್ಲ.

ನಮ್ಮ ಪೂರ್ವಿಕರು ಮನುಷ್ಯರನ್ನು ಮನುಷ್ಯರಾಗಿ ನೋಡುತ್ತಿದ್ದುದು ಮುಖ್ಯ; ಮನುಷ್ಯನ ಒಳತೋಟಿಯನ್ನು ಸಂದರ್ಭ ಮತ್ತು ಸಂಪ್ರದಾಯವನ್ನು ಪರಿಗಣಿಸಿಯೇ ಅರ್ಥಮಾಡಿಕೊಳ್ಳುತ್ತಿದ್ದರು. ಮೇಲಿನ ಎಲ್ಲ ಸ್ತ್ರೀಯರ ಸಂಕೀರ್ಣತೆ ನೋಡಿ. ತಾರಾ ವಾಲಿಯ ಜೊತೆಗಿದ್ದು ಸುಗ್ರೀವನಿಗಾಗಿ ಆಶೆ ಪಟ್ಟಳೆ? ದ್ರೌಪದಿಯ ಮನಸ್ಸು ಹೇಗಿತ್ತು? ಸೀತೆಯನ್ನು ರಾಮ ಸಂಶಯಕ್ಕೀಡುಮಾಡಿದ್ದು ಏಕೆ? ಇಂಥ ಪ್ರಶ್ನೆಗಳ ಆಳದಲ್ಲಿ ಈ ಪಂಚಮಹಾ ಕನ್ಯೆಯರಲ್ಲಿ ದಿಟ್ಟವಾದ, ಸಾಂದ್ರವಾದ ವ್ಯಕ್ತಿತ್ವವಿರುವುದು ಗೊತ್ತಾಗುತ್ತದೆ. ಇವರೆಲ್ಲ ಹೊಣೆಯರಿತು ನಡೆವ ಹೆಂಗಸರು; ತಮ್ಮ ತೀವ್ರತೆಯನ್ನು ಕಾಪಾಡಿಕೊಂಡು ವ್ಯಕ್ತಿತ್ವಕ್ಕೆ ಏಕಮುಖತೆ ಪಡೆದುಕೊಂಡ ಹೆಂಗಸರು. ಆದ್ದರಿಂದ ಈ ವರ್ಣರಂಜಿತ ಹೆಂಗಸರನ್ನು ಪೋಲಿಗಳು ಅನ್ನಲಾಗುವುದಿಲ್ಲ- ಅದೇ ಪಾತಿವ್ರತ್ಯದ ಗುಣ. ಇವರು ಪೋಲಿಗಳಲ್ಲ ಎನ್ನುವುದರ ಮೂಲಕವೇ ಪಾತಿವ್ರತ್ಯ ಗುರುತಿಸಬೇಕಾದ ಈ ಹೆಂಗಸರ ವ್ಯಕ್ತಿತ್ವ ಸಂಕೀರ್ಣವೂ ಅರ್ಥಪೂರ್ಣವೂ ಆದದ್ದು.

ಅಂಧಕಾರ

"ನಾವು ಬರುವಾಗ ಹೂವಿನಿಂದ ಕಂಗೊಳಿಸುತ್ತಿದ್ದ ಗುಲ್‌ಮೊಹರ್ ಮರ ನೋಡಿದಿರಾ?"


"ಇಲ್ಲ."

"ರಸ್ತೆಯಲ್ಲಿ ನಿಂತಿದ್ದ ಮಗು ನೋಡಿದಿರಾ?"

"ಇಲ್ಲ."

-ಕಣ್ಣಿದ್ದರೂ ಕುರುಡು.


ವೇಳೆ ಉಳಿಸುವುದಕ್ಕಾಗಿ, ಶ್ರಮ ಕಡಿಮೆ ಮಾಡಿಕೊಳ್ಳುವುದಕ್ಕಾಗಿ ಎಲ್ಲವೂ... ಕಾರು, ವ್ಯಾಕ್ಯೂಂ ಕ್ಲೀನರ್, ಮಿಕ್ಸಿ, ವಾಶಿಂಗ್ ಮೆಶೀನ್. ಆಫೀಸಿನಲ್ಲಿ ಎಲ್ಲವೂ ಸುಗಮ. ಡಿಕ್ಟೋಫೋನ್, ಫೋನ್, ಟೆಲೆಕ್ಸ್ ಇತ್ಯಾದಿ. ಆದರೆ ಇವತ್ತು ಅಮೆರಿಕಾದಲ್ಲಿ ಎಲ್ಲೆಲ್ಲೂ ಹತಾಶೆ. ಇಷ್ಟೆಲ್ಲ ಸಂಪತ್ತು, ಸವಲತ್ತುಗಳೆಲ್ಲ ಇದ್ದರೂ ಅವರಿಗೆ ವೇಳೆ ಇಲ್ಲ. ವಾಕ್ ಮಾಡುವಾಗ ತಿಂಡಿಯ ಚಿಂತೆ, ತಿಂಡಿ ತಿನ್ನುವಾಗ ಆಫೀಸಿನ ಚಿಂತೆ, ಮಾತಿಗೆ ಮೀರಿದ ಪ್ರಕ್ಷುಬ್ಧತೆ. ಮೊನ್ನೆ ನಡೆಸಿದ ಒಂದು ತನಿಖಾವರದಿಯ ಪ್ರಕಾರ ಅಮೆರಿಕಾ ಬಹಳ ವರ್ಷದ ಹಿಂದೆ ಕನಸಿದ್ದ ಆರಾಮದ ಜೀವನ, ನೆಮ್ಮದಿಯ ಜೀವನ ಸಾಧ್ಯವಾಗಿಲ್ಲ. ಯಾವುದಕ್ಕೂ ವೇಳೆ ಇಲ್ಲ.



ತನಿಖೆ ನಡೆಸಿ ವಿಸ್ಮಯಗೊಂಡವರು ಒಂದು ಮುಖ್ಯ ವಿಷಯ ಮರೆತಿದ್ದಾರೆ. ಮನಸ್ಸಿನ ಬಿಗಿತ ಎನ್ನುವುದು ಒಂದು ಸ್ಥಿತಿ. ಒಬ್ಬ ವ್ಯಕ್ತಿ ಈ ಬಗೆಯ ಪ್ರಕ್ಷುಬ್ಧ ಮನಃಸ್ಥಿತಿ ತಲುಪಿದರೆ ಆತನಿಗೆ ಅನೇಕ ಗಂಟೆ ವಿರಾಮವಿದ್ದರೂ ಅದಕ್ಕೆ ಬೆಲೆ ಇಲ್ಲ; ಯಾಕೆಂದರೆ ಆ ಗಂಟೆಗಳನ್ನು ಬದುಕುವ ಶಕ್ತಿ ಆತನಿಗಿಲ್ಲ. ಇದನ್ನು ಕುರಿತೇ ಡಿ.ಎಚ್. ಲಾರೆನ್ಸ್ ಮುಂತಾದವರು ಚಿಂತಿಸಿದರು: ಇದೊಂದು ಅನಾರೋಗ್ಯದ ಮನಃಸ್ಥಿತಿ ಎಂದು ಹೇಳಿದರು. ಹೊಸ ಜಗತ್ತಿನೊಂದಿಗೆ ಸಾಮರಸ್ಯ ಕಂಡುಕೊಳ್ಳದ ಮನುಷ್ಯ ಅಂತರಾಳದ ಬಾವಿಯಲ್ಲಿ ಸಿಕ್ಕಿಹಾಕಿಕೊಂಡು [illegible] ಚಡಪಡಿಸುತ್ತಾನೆ. ಆತನಿಗೆ ಕಣ್ಣೆದುರಿಗೆ ಹೂವರಳಿಸಿದ ಮರ ಕಾಣಿಸುವುದಿಲ್ಲ, ಆತನಿಗೆ ತನ್ನ ಸುತ್ತಣ ಬದುಕಿನ ಕಷ್ಟಸುಖ ಗೋಚರಿಸುವುದಿಲ್ಲ.

ಕಳ್ಳರ ಗ್ಯಾಂಗುಗಳ ಸುಳ್ಳುಗಳು!

ಶ್ರೀಮಾನ್ ದೇವರ ಮಗ, ಧರ್ಮ ಬೀರು ಯಡಿಯೂರಪ್ಪನವರು ಮೈತ್ರಿ ಸರ್ಕಾರದ ಬಗ್ಗೆ ಮಾತನಾಡುತ್ತಾ "ನಾವು ಜೆಡಿ(ಎಸ್)ನವರಿಗೆ-ಅವರ 20 ತಿಂಗಳು ಮುಖ್ಯಮಂತ್ರಿ ಸ್ಥಾನವನ್ನು ಪೂರ್ತಿ ಮಾಡಲಿಕ್ಕೆ ಸಂಪೂರ್ಣ ಸಹಕಾರವನ್ನು ಕೊಟ್ಟಿದ್ದೇವೆ ಎಂದು ಪದೇಪದೇ ಹೇಳುತ್ತಿರುತ್ತಾರೆ. ಆದರೆ ಇವರ ಈ ಹೇಳಿಕೆ ಹೇಗಿದೆ ಎಂದರೆ ಒಂದು ಸಾರಿ ಕಳ್ಳರು ಕಳ್ಳರು ಸಂತೆಗೆ ಹೋದರಂತೆ. ಅಲ್ಲಿಗೆ ಹೋದಮೇಲೆ ಯಥಾಪ್ರಕಾರ ಅವರ ಮಧ್ಯೆ ಒಂದು ಒಪ್ಪಂದವಾಯಿತಂತೆ. ಅದೇನೆಂದರೆ "ನೀವು ಕದ್ದದ್ದನ್ನು ನಾವು ಬಹಿರಂಗಪಡಿಸುವುದಿಲ್ಲ. ಹಾಗೆಯೇ ನೀವು ಸಹಾ ನಾವು ಕದ್ದದ್ದನ್ನು ಬಹಿರಂಗಪಡಿಸಬಾರದು. ಕೊನೆಯಲ್ಲಿ ಕದ್ದ ವಸ್ತುಗಳನ್ನು ಸಮಾನವಾಗಿ ಇಬ್ಬರೂ ಹಂಚಿಕೊಳ್ಳೋಣ."



ಇಂತಹ ಒಂದು ಒಪ್ಪಂದವನ್ನೇ ಇವರು 'ರಾಜಧರ್ಮ, ವಚನ ಪಾಲನೆ' ಎಂದು ಹೇಳಿಕೊಂಡು ಜನಗಳಿಗೂ ಹಾಗೂ ಮಾಧ್ಯಮದವರಿಗೂ ಕಿವಿಯ ಮೇಲೆ ಹೂ ಇಡಲು ಪ್ರಯತ್ನಿಸು ತ್ತಿದ್ದಾರೆ. ಆದರಂತೆ ನಮ್ಮ ಪೂರ್ವಗ್ರಹಿ ಜನತೆ ಹಾಗೂ ಚಿಡ್ಡಿ ಸಂಸತಿಯ ಮಾಧ್ಯಮದವರು ಕಿವಿಯ ಮೇಲೆ ಹೂ ಇಟ್ಟಿಸಿಕೊಳ್ಳುತ್ತಿದ್ದಾರೆ. ದುರದೃಷ್ಟವಶಾತ್ ಈ ಕಳ್ಳರು ಕದ್ದಮಾಲನ್ನು ಸಮಾನವಾಗಿ ಹಂಚಿಕೊಳ್ಳುವು ದರಲ್ಲಿ ತಕರಾರು ಮಾಡಿ ಕೊಂಡಿದ್ದಾರೆ. ಹಾಗಾಗಿ ಬೀದಿಗೆ ಬಿದ್ದಿದ್ದಾರೆ.



ಯಡಿಯೂರಪ್ಪ ಕುಮಾರಸ್ವಾಮಿಯವರಿಗೆ:

"ನೋಡಿ ನೀವು ಗಣಿಧಣಿಗಳಿಂದ ಪಡೆದ 150 ಕೋಟಿ ರೂ. ಲಂಚ ಪ್ರಕರಣವನ್ನು ಆ ಜನಾರ್ದನ ರೆಡ್ಡಿ ಬಾಯಿಮುಚ್ಚಿಸಿ, ಅದೊಂದು ಹಗರಣವಾಗದಂತೆ ನೋಡಿಕೊಂಡು ರಾಜಧರ್ಮ ಪಾಲಿಸಿದ್ದೇವೆ."

ಕುಮಾರಸ್ವಾಮಿ ಯಡಿಯೂರಪ್ಪನವರಿಗೆ

"ನಾವು ನಿಮ್ಮ ಹಾಗೆ ನಿಮ್ಮ ಪಾರ್ಟಿಯವರಾದ ಕಟ್ಟಾ ಸುಬ್ರಮಣ್ಯ ಮತ್ತು ಅಶೋಕ್ ಅಕ್ರಮವಾಗಿ ಮಾಡಿಕೊಂಡಿರುವ ನೂರಾರು ಎಕರೆ ಬೆಲೆಬಾಳುವ ಜಮೀನಿನ ವಿಚಾರವನ್ನಾಗಲಿ ಹಾಗೂ ನೀವು ಮಠಗಳಿಗೆ ಕೊಟ್ಟ ಕೋಟ್ಯಾನು ಕೋಟಿ ರೂಪಾಯಿಗಳ ವಿಚಾರವನ್ನಾಗಲಿ ಒಂದು ಹಗರಣ ಮಾಡದೆ ನಮ್ಮ ರಾಜಧರ್ಮ ಪಾಲಿಸಿದ್ದೇವೆ."

-ಸಂಗಮೇಶ್, ಮಾನವಿ

ಹೊಗಳಿಕೆ ತೆಗಳಿಕೆ

'ಪ್ರಜಾತಂತ್ರಕ್ಕಾಗಿ ಬೀದಿಗಿಳಿದ ಧರ್ಮ'ವನ್ನು ಕಂದಹಾಗೆಯಲ್ಲಿ ಓದಿದಾಗ ಕಳೆದ 60 ವರ್ಷಗಳಲ್ಲಿ ನಮ್ಮ "ಸ್ವಾತಂತ್ರ್ಯ ದಿನಾಚರಣೆ"ಯೆಂದರೆ ಪ್ರತಿ ಆಗಸ್ಟ್ 15 ರಂದು ಪ್ರಾಥಮಿಕ-ಮಾಧ್ಯಮಿಕ ಶಾಲೆಗಳಲ್ಲಿ ತ್ರಿವರ್ಣ ಧ್ವಜವನ್ನು ಒಂದು ಗಣೆಗೇರಿಸಿ ಮಕ್ಕಳಿಂದ ರಾಷ್ಟ್ರಗೀತೆಯನ್ನು ಹಾಡಿಸುವುದಕ್ಕೆ ಸೀಮಿತವಾಗಿರುವುದರ ದಟ್ಟವಾದ ಚಿತ್ರಣ ಎದುರಾಯಿತು. ಅವ್ಯಕ್ತ ದುಗುಡವೊಂದು ಕಾಡಿತು.

ಜನಸಾಮಾನ್ಯರಲ್ಲಿ ಪ್ರಜಾತಂತ್ರ ವ್ಯವಸ್ಥೆಯ ಸ್ಪಷ್ಟ ಪರಿಕಲ್ಪನೆಗೆ ಶೈಕ್ಷಣಿಕ ವ್ಯವಸ್ಥೆಯಿಲ್ಲದಿರುವುದು ನಮ್ಮ ಜನ-ಪ್ರತಿನಿಧಿಗಳಿಗೆ ತಮ್ಮ ಅಧಿಕಾರವನ್ನುಳಿಸಿಕೊಳ್ಳಲು ವರದಾನವಾಗಿದೆ. ಒಂದೊಮ್ಮೆ ಅವರ ಅಧಿಕಾರದಾಹಕ್ಕೆ ಪ್ರತಿರೋಧದ ದನಿಯೆದ್ದರೆ ಜಾತಿ, ಮತ, ಧರ್ಮಗಳ ಆವರಣದೊಳಗಿಕ್ಕಿ ಅವುಗಳ ರಕ್ಷಣೆಗೆ ಉದ್ರೇಕಿಸುವುದು ಅವರಿಗೆ ರಾಜಧರ್ಮ(?)ವೆನಿಸುತ್ತದೆ!

ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಮಠ, ಮಠಗಳ ಭದ್ರತೆಗೆ ಅಜ್ಞಾನ, ಅಸ್ಪೃಶ್ಯತೆ, ಅಂಧಶ್ರದ್ಧೆಗಳು ಧರ್ಮಾಚರಣೆಯ ಸಲ್ಲಕ್ಷಣಗಳು! ಅಲ್ಲವೆ?

ಮ್ಯಾನ್ಮಾರ್‌ನಲ್ಲಿ ಬೌದ್ಧ ಧರ್ಮವೊಂದೇ, ತಾನೇ?

ಅಲ್ಲಿ ಬೌದ್ಧ ಬಿಕ್ಕುಗಳು ಜನಹಿತಕ್ಕಾಗಿ ಪ್ರಜಾತಂತ್ರ ಸ್ಥಾಪನೆಯಾಗಲೆಂದು ಮಿಲಿಟರಿ ವ್ಯವಸ್ಥೆಯನ್ನು ಪ್ರತಿಭಟಿಸಲು ಬೀದಿಗಿಳಿದಿದ್ದಾರೆ; ಜನರ ಸಂಕಷ್ಟಗಳಿಗೆ ಸ್ಪಂದಿಸಿ ತಮ್ಮ ಜೀವವನ್ನೇ ಬಲಿ ಕೊಡುತ್ತಿದ್ದಾರೆ.

ಭಾರತದಲ್ಲಿ ಎಷ್ಟು ಧರ್ಮಗಳಿವೆ? ಎಷ್ಟು ಜಾತಿಗಳಿವೆ? 60 ವರ್ಷಗಳ ಪ್ರಜಾಪ್ರಭುತ್ವ(?)ದಲ್ಲಿ ದಲಿತರ ದಹನ, ಮಹಿಳೆಯರ ಅತ್ಯಾಚಾರ, ಅನ್ಯ ಧರ್ಮೀಯರ ಹತ್ಯೆ.... ಇತ್ಯಾದಿ ಧರ್ಮ ರಕ್ಷಣೆಗಾಗಿ! ಪ್ರಜಾತಂತ್ರ ಪಾಲನೆಗಾಗಿ!

ಸಂಪಾದಕರ ಸಂತಾಪ ಸಂದೇಶವು ಸಮಯೋಚಿತ. ಸಂವೇದನೆ ಶೂನ್ಯವಿರಲಾರದು.

-ಪಿ. ಗೋಕುಲ್‌ದಾಸ್, ಮಂಗಳೂರು

ತಮ್ಮ ಸಂಚಿಕೆ 27 ರಲ್ಲಿ ಪ್ರಕಟವಾದ 'ಕ್ರಿಕೆಟ್ ವಿಶ್ವಕಪ್ ಅಮೆರಿಕಾಕ್ಕೆ' ಎಂಬ ಲೇಖನದಲ್ಲಿ ಕೆ.ಆರ್. ವಿದ್ಯಾಧರರವರು ತೆರೆದ ಅಭಿಪ್ರಾಯಗಳು ಮತ್ತು ದೂರದೃಷ್ಟಿಯು ವೈಚಾರಿಕ ನೆಲೆಯಿಂದ ಬಹು ಮುಖ್ಯವೆನಿಸುತ್ತವೆ.

ಭೂಮಂಡಲೀಕರಣದ ತೆಕ್ಕೆಯಲ್ಲಿರುವ ಈ ಜಗತ್ತಿನಲ್ಲಿ ಎಲ್ಲವೂ ವ್ಯಾಪಾರೀಕರಣಗೊಳ್ಳುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಪ್ರಮುಖವಾಗಿ ಅಮೆರಿಕೀಕರಣವು ಒಂದಲ್ಲ ಒಂದು ವಿಧದಲ್ಲಿ ಜಗತ್ತಿನ ಚಿತ್ರಣವನ್ನು ತನಗೆ ಲಾಭವಾಗುವಂತೆ ಪರಿವರ್ತಿಸಲು ಸಂಚು ರೂಪಿಸುತ್ತಲೇ ಮುಂದುವರಿದಿದೆ. ಕೋಕೋ ಕೋಲಾ, ಪೆಪ್ಸಿ ಮುಂತಾದ ಬಹುರಾಷ್ಟ್ರೀಯ ಕಂಪನಿಗಳ ಪಾನೀಯಗಳಿಗೆ ಜಾಹೀರಾತು ನೀಡಲು ನಮ್ಮ ದೇಶದ ಸಿನಿಮಾ ತಾರೆಗಳು, ಕ್ರಿಕೆಟ್ ಕಲಿಗಳು ಮುಂತಾದವರು ತಾಮುಂದು ನಾಮುಂದು ಎಂದು ಹಣದ ಆಮಿಷಕ್ಕೆ ಸ್ವಂತಿಕೆಯನ್ನು ಕಳೆದುಕೊಂಡು ಸೃಷ್ಟಿಸುವ ಮೌಲ್ಯಗಳೇನು? ದೇಶೀಯ ಉತ್ಪನ್ನಗಳ ಅವನತಿ ಮತ್ತು ಸ್ವರಾಜ್ಯ ಕಲ್ಪನೆಯ ಅಪಮೌಲ್ಯ. ದೇಶವನ್ನು ಪ್ರತಿನಿಧಿಸುವವರು ನಾವು ಎಂಬ ಲೇಬಲ್ ನೊಂದಿಗೆ ಈ ದೇಶದ ಸ್ವಂತಿಕೆಯನ್ನು, ಸ್ವರಾಜ್ಯವನ್ನು ಮತ್ತು ಆತ್ಮಘನತೆಯನ್ನು ಮಾರುಕಟ್ಟೆಯಲ್ಲಿ ವ್ಯಾಪಾರಕ್ಕಿಟ್ಟಿರುವುದು ದೇಶದ ಘನತೆಗೆ ಅವಮಾನ. ಪರೋಕ್ಷವಾಗಿ ಪ್ರಜಾಪ್ರಭುತ್ವ, ಮಾನವ ಹಕ್ಕುಗಳು ಮತ್ತು ವಿಶ್ವಶಾಂತಿಯ ರಕ್ಷಕನೆಂದು ಪೋಸು ಕೊಡುತ್ತಿರುವ ಅಮೆರಿಕಾದ ಯುದ್ಧದಾಹಿ, ನವಸಾಮ್ರಾಜ್ಯಶಾಹಿಗೆ ಅನೈತಿಕ ಬೆಂಬಲ. ಪ್ರಸ್ತುತ ದಿನಗಳಲ್ಲಿ ಅಮೆರಿಕಾ ಆರ್ಥಿಕ ಉದ್ದೇಶಗಳಿಂದ ಇರಾನ್‌ನ ಮೇಲೆ ಯುದ್ಧ ಸಾರಲು ತಂತ್ರ ರೂಪಿಸುತ್ತಿದೆ. ಆದ್ದರಿಂದ ಅಮೆರಿಕಾ ಪ್ರಾಯೋಜಿತ ಅಥವಾ ನಿರ್ದೇಶಿತ ಯಾವುದೇ ವ್ಯವಹಾರಗಳನ್ನು ವೈಚಾರಿಕವಾಗಿ ತೂಗಿ ನೋಡದೆ ಬೆಂಬಲಿಸುವುದೆಂದರೆ ಅದು ಮಾನವಕೋಟಿಗೆ ದ್ರೋಹಬಗೆಯಲು ಒಪ್ಪಂದ ಮಾಡಿಕೊಂಡಂತೆ. ಈ ನೆಲೆಯಲ್ಲಿ ಲೇಖಕರ ಶೀರ್ಷಿಕೆ ಸಮಯೋಚಿತ ಮತ್ತು ಸೂಕ್ಷ್ಮತೆಯಿಂದ ಕೂಡಿದೆ.




ಕ್ರಿಕೆಟ್ ಎಂಬ ಕ್ರೀಡೆಯು ಸದರಿ ದಿನಗಳಲ್ಲಿ ಒಂದು ಉದ್ಯಮವಾಗಿ ಜಾಗತಿಕ ಮಟ್ಟದಲ್ಲಿ ಪ್ರಭಾವ ಹೊಂದುತ್ತಿರುವುದು ವಾಸ್ತವಿಕ. ಆದರೆ ಈ ಕ್ರೀಡೆ ಪ್ರತಿನಿಧಿಸುವ ಮೌಲ್ಯಗಳೇನು? ಎಂಬುದು ವಿಚಾರಾರ್ಹ. ಪ್ರಮುಖವಾಗಿ ಇದು colonial legacy. ಎರಡನೆಯದಾಗಿ ವರ್ಣ ತಾರತಮ್ಯದ ಸಂಕೇತ ಮತ್ತು ಸಾಮ್ರಾಜ್ಯಶಾಹಿಯ ಸ್ವಭಾವವನ್ನು ಸ್ಥಿರೀಕರಿಸಲು ಬಳಸಿಕೊಳ್ಳಲಾದ ಮತ್ತು ಬಳಸಿಕೊಳ್ಳಲಾಗುತ್ತಿರುವ ಸಾಧನವೂ ಹೌದು. ಒಟ್ಟಿನಲ್ಲಿ ಜಗತ್ತಿನ ಚಿತ್ರಣದಲ್ಲಿ ಕ್ರಿಕೆಟ್ ಬೇರೆಬೇರೆ ಆಯಾಮಗಳಲ್ಲಿ ಚರ್ಚಿಸಲ್ಪಡುತ್ತದೆ.

ಭಾರತದ ನೆಲೆಯಲ್ಲಿ ಚರ್ಚಿಸಲ್ಪಟ್ಟರೆ ಈ ನೆಲದಲ್ಲಿ ದೇಶಿಯ ಕ್ರೀಡೆಗಳು ತಮ್ಮ ಪ್ರಗತಿಯನ್ನು ಕಳೆದುಕೊಳ್ಳಲು ಪ್ರಮುಖ ಕಾರಣ ಎಂದರೆ ಕ್ರಿಕೆಟಿಗೆ ನೀಡುವ ಅತೀಹೆಚ್ಚಿನ ಪ್ರೋತ್ಸಾಹ ಮತ್ತು ಆದ್ಯತೆ. ಭಾರತ ಏಕೆ ಒಲಂಪಿಕ್ಸ್‌ನಲ್ಲಿ ಸಾಧನೆ ಇಲ್ಲ ಎಂದರೆ ಇಲ್ಲಿ ಬೇರೆ ಬೇರೆ ಕ್ರೀಡೆಗಳಿಗೆ ಪ್ರೋತ್ಸಾಹ, ಪ್ರಾಯೋಜಕತ್ವದ ಮತ್ತು ಮೂಲಭೂತ ಸೌಕರ್ಯಗಳ ಕೊರತೆ. ಇದಕ್ಕೆ ಪೂರಕವಾಗಿ ಪ್ರಭುತ್ವದ ಹೊಣೆಗೇಡಿ ನಿರ್ಧಾರಗಳು. ಟ್ವೆಂಟಿ- 20 ಯಲ್ಲಿ ಭಾರತ ವಿಜೇತ ತಂಡವಾಗಿ ಪರಿಣಮಿಸಿದಾಗ ಟೀಮಿನ ಕ್ರಿಕೆಟ್ ಕಲಿಗಳಿಗೆ ಕೋಟಿ ಗಟ್ಟಲೆ ಹಣವನ್ನು ಸರ್ಕಾರದ ವತಿಯಿಂದ ಘೋಷಿಸಲಾಯಿತು. ಇದಕ್ಕೆ ಕಾರಣಗಳು ಹಲವು. ಏಕೆಂದರೆ ಭಾರತ ಎದುರಿಗೆ ಜಯಿಸಿದ್ದ ತಂಡ ಸಾಂಪ್ರದಾಯಿಕ ಎದುರಾಳಿ ಬದ್ಧವೈರಿ ಪಾಕಿಸ್ತಾನ. ಈ ತಂಡವನ್ನು ವರ್ಣಿಸಲು ನಮ್ಮ ಮಾಧ್ಯಮಗಳು ಬಳಸುವ ಭಾಷೆ ಅಂದರೆ ಸಾಂಪ್ರದಾಯಿಕ ಪ್ರತಿಸ್ಪರ್ಧಿ (Arch rival), ಬದ್ಧವೈರಿಗಳ ಸೆಣಸಾಟ. ಇವೆಲ್ಲವು ಏನನ್ನು ಧ್ವನಿಸುತ್ತವೆ ಅಂದರೆ ವಿಕೃತ ಮನೋಸ್ಥಿತಿಯನ್ನು. ಏಕೆಂದರೆ ಕ್ರೀಡೆಯನ್ನು ಕ್ರೀಡಾ ಮನೋಭಾವನೆ (sport spirit) ಯಿಂದ ನೋಡಬೇಕೆ ಹೊರತು ಭಾವುಕತೆಯಿಂದ, ಸಂಕುಚಿತತೆಯಿಂದ ಮತ್ತು ದ್ವೇಷಭಾವನೆಯಿಂದಲ್ಲ.

ಭಾರತ ರಾಜಕೀಯ ನೆಲೆಯಲ್ಲಿ ಸ್ವಾತಂತ್ರ್ಯ ಪಡೆದಿದ್ದರೂ, ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ ಮತ್ತು ಇತರ ನೆಲೆಗಳಲ್ಲಿ ಸ್ವಾತಂತ್ರ್ಯವನ್ನು ಇನ್ನೂ ಪಡೆಯಲಿಲ್ಲ. ವಸಾಹತುಶಾಹಿ ಪ್ರತಿನಿಧಿಸಿದ ಮೌಲ್ಯಗಳ ದಾಸ್ಯದಿಂದ ಮುಕ್ತಿ ಪಡೆಯದಿರುವುದು ಈ ದೇಶದ ದುರಂತ. ಅಮೆರಿಕೀರಣವನ್ನು ರತ್ನಗಂಬಳಿಯ ಸ್ವಾಗತದೊಂದಿಗೆ ಸ್ವಾಗತಿಸುವ ಈ ದೇಶದ ಪ್ರಭುತ್ವ ಮತ್ತು ಅಂಧಾನುಕರಣೆಯಿಂದ ವೈಚಾರಿಕವಾಗಿ ತನ್ನತನವನ್ನು ಕಳೆದುಕೊಳ್ಳುತ್ತಿರುವ ನಮ್ಮ ಜನತೆಯನ್ನು ಅವಲೋಕಿಸುವಾಗ ಈ ದೇಶದ ಭವಿಷ್ಯದ ನಿರ್ಧಾರದಲ್ಲಿ ಪ್ರಜ್ಞಾವಂತ ನಾಗರಿಕ ಸಮಾಜ ಮತ್ತಷ್ಟೂ ತೀವ್ರಗೊಳ್ಳಬೇಕಾಗಿದೆ. ದೇಶಪ್ರೇಮ, ಸ್ವರಾಜ್ಯ ಮತ್ತು ತನ್ನತನಗಳ ಬಗ್ಗೆ ಹರಿತವಾದ ಪುನರ್ ವ್ಯಾಖ್ಯಾನವಾಗಬೇಕಿದೆ. ಇಲ್ಲದಿದ್ದಲ್ಲಿ ಇವೆಲ್ಲವೂ ಸ್ವಾರ್ಥ ಸಾಧಿಸುವ, ಲಾಭತರುವ ಮತ್ತು ಹೃದಯಹೀನ ಸರಕುಗಳಾಗಬಹುದು ಅಲ್ಲವೇ?

-ವಿದ್ಯಾಧರ ರೈ.ಎಂ.ಆರ್.
ಮಡಿಕೇರಿ

ಹೀಗೊಂದು ತಿದ್ದುಪಡಿ



ರಮೇಶ್ ಬಾಬು

ಸಂಪಂಗಿರಾಮನಗರದ ಪೊಲೀಸ್ ಪೇದೆ ಮಾದಯ್ಯನ ಹತ್ಯೆ ಕುರಿತಂತೆ ಕಳೆದ ಸಂಚಿಕೆಯ 8 ನೇ ಪುಟದಲ್ಲಿ ಬ್ಯಾಟರಾಯನಪುರದ ಎಸಿಪಿ ರಮೇಶ್ ಬಾಬುರವರ ಫೋಟೋ ಬದಲಿಗೆ ಪ್ರಮಾದವಶಾತ್ ಮತ್ತೊಬ್ಬ ಪೊಲೀಸ್ ಅಧಿಕಾರಿ ಎಂ.ಕೆ. ಉತ್ತಪ್ಪನವರ ಫೋಟೋ ಅಚ್ಚಾಗಿದೆ. ಇದು ಕಣ್ತಪ್ಪಿನಿಂದಾದ ಅಚಾತುರ್ಯವೇ ಹೊರತು ಉದ್ದೇಶಪೂರ್ವಕ ಕೃತ್ಯವಲ್ಲ. ಈ ಹಿಂದೆ ಜೇಜೆ ನಗರಕ್ಕೆ ಇನ್ಸ್‌ಪೆಕ್ಟರ್ ಆಗಿದ್ದು ಸದ್ಯ ಎಸಿಪಿಯಾಗಿ ಬಡ್ತಿ ಹೊಂದಿರುವ ಎಂ.ಕೆ. ಉತ್ತಪ್ಪ ಬೆಂಗಳೂರು ಕಂಡ ಜನಾನುರಾಗಿ ಪೊಲೀಸ್ ಅಧಿಕಾರಿಗಳಲ್ಲೊಬ್ಬರೆಂಬ ಬಗ್ಗೆ ಎರಡು ಮಾತಿಲ್ಲ.

ಇಂಥಾ ವಿವೇಕಿ ಅಧಿಕಾರಿಯ [illegible]ಸಿಪಿ ಸೆಕ್ಯೂರಿಟಿಯಂಥ ನಿಷ್ಪ್ರಯೋಜಕ ಹುದ್ದೆಗೆ ವರ್ಗಾಯಿಸಿರುವುದು ವ್ಯ[illegible]ಂತವಲ್ಲದೇ ಮತ್ತೇನಲ್ಲ. ಬ್ಯಾಟರಾಯನ ಪುರದ ಎಸಿಪಿ ರಮೇಶ್‌ಬಾಬು [illegible] ಅವರ ಫೋಟೋ ಅಚ್ಚಾಗಿರುವುದಕ್ಕೆ ವಿಷಾದಿಸುತ್ತಾ ಇಲ್ಲಿ ಎಸಿಪಿ ರಮೇ[illegible]ತ್ರವನ್ನು ಮತ್ತೊಮ್ಮೆ ಪ್ರಕಟಿಸುತ್ತಿದ್ದೇವೆ. ಅಚಾತುರ್ಯಕ್ಕೆ ಕ್ಷಮೆಯಿರಲಿ.

-ಸಂ



ಉತ್ತಪ್ಪ


ರೇಖೆ

ಹಸ್ತರೇಖೆಯ ಬಗ್ಗೆ
ಲೇವಡಿ ಮಾಡುತ್ತಿದ್ದ
ನಾನು
ಮೊನ್ನೆ
ಕಣ್ಣಂಚಿನಲ್ಲಿ ಕಂಡ
ನಗೆಯ ಸುಕ್ಕಿನಲ್ಲಿ
ಸಾವಿನ ರೇಖೆಯನ್ನು
ಕಂಡೆ.

-ಸಾವಂತ್ರಿ



ತೆರೆಯಲ್ಲಿ ಸೂಪರ್ ಸ್ಟಾರ್ ಮನೆಯಲ್ಲಿ ದುರಂತ ನಾಯಕ



ತೆಲುಗು ಸೂಪರ್ ಸ್ಟಾರ್ ಚಿರಂಜೀವಿಯವರ ಎರಡನೇ ಪುತ್ರಿ ಶ್ರಿಜಾ ಮೊನ್ನೆ ಯಾರಿಗೂ ಹೇಳದೇ ಕೇಳದೆ ಮನೆಯಿಂದ ಓಡಿಹೋಗಿ ತನ್ನ ಪ್ರಿಯತಮನನ್ನು ಮದುವೆಯಾಗಿದ್ದು ಸಹಜವಾಗಿಯೇ ಆಕೆಯ ತಂದೆಗೆ ನಿರಾಶೆ ಮತ್ತು ನೋವನ್ನುಂಟು ಮಾಡಿದೆ.

ಆಮತ್ತು ಓಡಿ ಹೋಗಿ ತನ್ನ ಹಲವು ಸ್ನೇಹಿತರು ಮತ್ತು ಮಾಧ್ಯಮದವರ ಸಮ್ಮುಖದಲ್ಲಿ ಮದುವೆಯಾದ ಶ್ರಿಜಾ ಸಂಜೆಹೊತ್ತಿಗೆ ಮನೆಗೆ ಹಿಂದಿರುಗಿ ಅಪ್ಪ ಮತ್ತು ಅಮ್ಮನ ಆಶೀರ್ವಾದ ಪಡೆಯುವುದಾಗಿ ಹೇಳಿದ್ದರೂ ಆಕೆ ರಾತ್ರಿಯಾದರೂ ಮನೆಯ ಹತ್ತಿರ ಸುಳಿಯಲೇ ಇಲ್ಲ.

ಈ ಇಡೀ ಪ್ರಕರಣವನ್ನು ಆಂಧ್ರದ ಟಿವಿ 9 ಚಾನೆಲ್ ನೇರ ಪ್ರಸಾರ ಮಾಡಿದ್ದರಿಂದ ಸುದ್ದಿ ಕಾಡ್ಗಿಚ್ಚಿನಂತೆ ಹರಡಿ ಚಿರಂಜೀವಿಯವರ ಮನೆ ಮುಂದೆ ಅಭಿಮಾನಿಗಳು ಮತ್ತು ಮಾಧ್ಯಮದವರು ಗುಂಪುಗೂಡಿದರು. ಮಗಳ ಮದುವೆಯನ್ನು ಟಿವಿಯ ಪರದೆಯ ಮೇಲೆ ಮನೆಯಲ್ಲೇ ನೋಡುತ್ತಿದ್ದ ಚಿರಂಜೀವಿ ಎಲ್ಲ ಸಂಪರ್ಕವನ್ನು ಕಡಿತಗೊಳಿಸಿ ಕೂತಿದ್ದರು. ಕೊನೆಗೆ ಚಿರಂಜೀವಿಯವರ ಮೈದುನ - ಶ್ರಿಜಾಳ ತಾಯಿಯ ಸಹೋದರ — ಅಲ್ಲು ಅರವಿಂದ್ ಮನೆಯಿಂದ ಹೊರಗೆ ಬಂದು ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಬೇಕಾಯಿತು. ಯಾಕೆಂದರೆ ಮಗಳ ವರ್ತನೆಯಿಂದ ದಂಗಾಗಿಹೋಗಿದ್ದ ಚಿರಂಜೀವಿ ಯಾರನ್ನೂ ಮಾತನಾಡಿಸುವ ಸ್ಥಿತಿಯಲ್ಲಿರಲಿಲ್ಲ.



ತಮ್ಮ ಹೆಣ್ಣು ಮಕ್ಕಳಿಂದ ಇದೇ ಮೊದಲ ಬಾರಿಗೆ ಚಿರಂಜೀವಿಯವರಿಗೆ ನೋವಾದದ್ದಲ್ಲ. ಅವರ ದೊಡ್ಡ ಪುತ್ರಿ ಸುಶ್ಮಿತಾಳ ವಿವಾಹ ಕುರಿತಂತೆಯೂ ಗೊಂದಲಗಳಾಗಿದ್ದವು. ಆಕೆ ಉದಯರವಿ ಎಂಬ ಉದಯೋನ್ಮುಖ ನಟನೊಬ್ಬನನ್ನು ಪ್ರೀತಿಸುತ್ತಿದ್ದಳು. ಇದರ ಬಗ್ಗೆ ಹಲವಾರು ಪತ್ರಿಕೆಗಳು ವರದಿ ಮಾಡಿದ್ದವಲ್ಲದೆ ಸದ್ಯದಲ್ಲೇ ಅವರಿಬ್ಬರ ಮದುವೆಯಾಗಲಿದೆ ಎಂದೂ ಭವಿಷ್ಯ ನುಡಿದಿದ್ದವು. ಆದರೆ ಉದಯರವಿ ಮಾತ್ರ "ಇದೆಲ್ಲ ಕೇವಲ ರೂಮರ್‌ಗಳು. ನಾನು ಚಿರಂಜೀವಿಯವರ ಕಟ್ಟಾ ಅಭಿಮಾನಿ. ನನ್ನ ಯಶಸ್ಸನ್ನು ಕಂಡರಾಗದವರು ಇಂತಹ ಸುದ್ದಿಗಳಿಗೆ ಚಾಲನೆ ನೀಡುತ್ತಿದ್ದಾರೆ" ಎಂದೇ ಹೇಳುತ್ತಾ ಬಂದಿದ್ದ. ಕೊನೆಗೆ, 2003 ರ ಎಪ್ರಿಲ್ ತಿಂಗಳಲ್ಲಿ ಸುಶ್ಮಿತಾ ಮತ್ತು ಉದಯರವಿ ನಡುವಿನ ಮದುವೆಯನ್ನು ಅವರಿಬ್ಬರ ಮನೆಯವರೇ ನಿಂತು ಮಾಡಿಸಲಿದ್ದಾರೆ ಎಂದು ಎಲ್ಲರಿಗೂ ಗೊತ್ತಾಗಿತ್ತು ಮಾತ್ರವಲ್ಲ ಅದರ ನಿಶ್ಚಿತಾರ್ಥ ಸಮಾರಂಭವನ್ನೂ ಚಿರಂಜೀವಿಯವರ ಮನೆಯಲ್ಲೇ ಏರ್ಪಡಿಸಲಾಗಿತ್ತು.

ಆದರೆ ಮದುವೆಗೆ ಕೆಲವೇ ಕೆಲವು ದಿನಗಳಿವೆ ಎಂದಾಗ ಅದು ಇದ್ದಕ್ಕಿದ್ದಂತೆ ರದ್ದಾಗಿತ್ತು. ಇದಕ್ಕೆ ಕಾರಣ ಉದಯರವಿಯು ಮಂಗಳೂರಿನ ನಿವೇದಿತಾ ಬೆನೆಡಿಕ್ಟ್ ಎಂಬಾಕೆಯನ್ನು ಪ್ರೀತಿಸುತ್ತಿದ್ದಾನೆ, ಸುಶ್ಮಿತಾಳೊಂದಿಗೆ ಮದುವೆಯಾದ ನಂತರವೂ ನಿವೇದಿತಾಳೊಂದಿಗಿನ ಸಂಬಂಧವನ್ನು ಆತ ಕಳೆದುಕೊಳ್ಳಲಾರ, ಇದರಿಂದ ತನ್ನ ಮಗಳ ಜೀವನವೇ ಹಾಳಾಗುತ್ತದೆಂದು ಕೊನೆಕ್ಷಣ ಚಿರಂಜೀವಿಗೆ ಗೊತ್ತಾಗಿದ್ದು.



ದೊಡ್ಡ ಪುತ್ರಿ ಸುಶ್ಮಿತಾಳ ವಿವಾಹ

ಆಗ ಮಾಧ್ಯಮಗಳಿಗೆ ಚಿರಂಜೀವಿ ಒಂದು ಪತ್ರವನ್ನು ಫ್ಯಾಕ್ಸ್ ಮಾಡಿದ್ದರು. ಅದರಲ್ಲಿ "ಹುಡುಗ ಮತ್ತು ಹುಡುಗಿಯ ನಡುವೆ ಹಲವಾರು ಭಿನ್ನಾಭಿಪ್ರಾಯಗಳಿವೆ. ಅವರಿಬ್ಬರ ಆಶಯಗಳೂ ಬೇರೆ ಬೇರೆಯದ್ದಾಗಿದೆ. ಇದರಿಂದ ಭವಿಷ್ಯದಲ್ಲಿ ತೊಂದರೆಗಳಾಗಬಹುದು ಎಂಬ ಕಾರಣಕ್ಕೆ ಸುಶ್ಮಿತಾ ಮತ್ತು ಉದಯರವಿ ನಡುವಿನ ಮದುವೆಯ ಯೋಜನೆಯನ್ನು ರದ್ದು ಮಾಡಲಾಗಿದೆ" ಎಂದು ಹೇಳಲಾಗಿತ್ತು. ಆಗಲೂ ನಿವೇದಿತಾಳೊಂದಿಗಿನ ಸಂಬಂಧವನ್ನು ನಿರಾಕರಿಸಿದ್ದ ಉದಯರವಿ "ಸುಶ್ಮಿತಾ ಮತ್ತು ನನ್ನ ವ್ಯಕ್ತಿತ್ವಗಳ ನಡುವೆ ಆಪ್ತತೆ ಉಂಟಾಗಲಿಲ್ಲ, ಎಂಬ ಕಾರಣಕ್ಕೆ ನಮ್ಮಿಬ್ಬರ ಮನೆಯವರು ಸೇರಿ ಮದುವೆಯನ್ನು ರದ್ದುಮಾಡಿದರು. ಉಳಿದಿದ್ದೆಲ್ಲ ರೂಮರ್" ಎಂದೇ ಹೇಳಿದ್ದ.

ಇದು ನಡೆದದ್ದು 2003 ರ ಎಪ್ರಿಲ್ ತಿಂಗಳಲ್ಲಿ, ಆದರೆ ಇದಾದ ನಾಲ್ಕು ತಿಂಗಳ ನಂತರ ಉದಯರವಿ ನಿವೇದಿತಾಳನ್ನು ಮದುವೆಯಾದ!

ಇತ್ತ ಚಿರಂಜೀವಿ ಕೂಡ ತಮ್ಮ ಮಗಳು ಸುಶ್ಮಿತಾಳ ಮದುವೆಯನ್ನು ಚೆನ್ನೈನ ಉದ್ಯಮಿಯೊಬ್ಬರ ಮಗನೊಂದಿಗೆ ಅದ್ದೂರಿಯಾಗಿ ನಡೆಸಿದರು. ಇದು ಅವರ ಇಬ್ಬರು ಪುತ್ರಿಯರ ಕತೆಯಾದರೆ, ಅವರ ಒಡಹುಟ್ಟಿದ ಸಹೋದರ ಪವನ್ ಕಲ್ಯಾಣ್‌ನದ್ದು ಮತ್ತೊಂದು ಕತೆ.

ಈ ಪವನ್ ಕಲ್ಯಾಣನೂ ನಟನೇ. ಈತ ವಿಶಾಕಪಟ್ನಂ ನಗರದ ಉದ್ಯಮಿಯೊಬ್ಬರ ಮಗಳಾದ ನಂದಿನಿ ಎಂಬಾಕೆಯನ್ನು ಮದುವೆಯಾಗಿದ್ದ. ಆದರೆ ಚಿತ್ರರಂಗಕ್ಕೆ ಬಂದನಂತರ ಆತನೊಂದಿಗೆ ಚಿತ್ರವೊಂದರಲ್ಲಿ ನಾಯಕಿಯಾಗಿ ನಟಿಸಿದ್ದ ರೇನು ದೇಸಾಯಿ ಎಂಬಾಕೆಯೊಂದಿಗೆ ಪ್ರೇಮಾಂಕುರವಾಗಿತ್ತು. ಕೊನೆಗೆ ಇದು ಯಾವ ಹಂತ ತಲುಪಿತೆಂದರೆ ನಂದಿನಿಯನ್ನು ಮನೆಯಿಂದ ಒದ್ದೋಡಿಸಿದ ಪವನ್ ಕಲ್ಯಾಣ್ ರೇನುಳೊಂದಿಗೆ ರಹಸ್ಯವಾಗಿ ಮದುವೆಯಾಗಿ ದಾಂಪತ್ಯ ಜೀವನ ನಡೆಸಲಾರಂಭಿಸಿದ.

ಸಹಜವಾಗಿಯೇ ನಂದಿನಿ ಕೆಂಡಮಂಡಳವಾದಳು. ಆಕೆ ವಿಶಾಖಪಟ್ನಂ ನ್ಯಾಯಾಲಯದಲ್ಲಿ ಕೇಸೊಂದನ್ನು ಹೂಡಿ ತನ್ನ ಗಂಡ ಪವನ್ ಕಲ್ಯಾಣ್ ಮತ್ತೊಬ್ಬಳನ್ನು ಮದುವೆ ಆಗುವ ಮೂಲಕ ದ್ವಿಪತ್ನಿತ್ವದ ದ್ರೋಹ ಎಸಗಿದ್ದಾನೆ, ವರದಕ್ಷಿಣೆ ಕುರಿತಂತೆ ತನಗೆ ಮತ್ತು ತನ್ನ ಮನೆಯವರಿಗೆ ಕಿರುಕುಳ ನೀಡಿದ್ದಾನೆ, ಆದ್ದರಿಂದ ಆತನನ್ನು ಬಂಧಿಸಬೇಕು ಎಂದು ಮನವಿ ಮಾಡಿಕೊಂಡಿದ್ದಳು.

ಪವನ್ ಕಲ್ಯಾಣ್ ಈ ಮೊಕದ್ದಮೆಯ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ, ನ್ಯಾಯಾಲಯದ ಮುಂದೆ ಹಾಜರಾಗಲಿಲ್ಲ. ಕೊನೆಗೆ ಆತನನ್ನು ಬಂಧಿಸಿ ವಿಶಾಖಪಟ್ನಂಗೆ ಕರೆದೊಯ್ಯಲು ಪೊಲೀಸರೇ ಮನೆ ಬಾಗಿಲಿಗೆ ಬಂದಾಗ ಪವನ್ ಕಣ್ಮರೆಯಾದ. ಇದೇ ಹೊತ್ತಿಗೆ ರೇನು ದೇಸಾಯಿ ಕೂಡ "ನನಗೂ ಪವನ್ ಕಲ್ಯಾಣ್‌ಗೂ ಯಾವುದೇ ಸಂಬಂಧವಿಲ್ಲ. ನಾವಿಬ್ಬರು ಜೊತೆಯಾಗಿ ನಟಿಸಿದ್ದೇವಷ್ಟೆ. ಬೇಕಂತಲೇ ಆತನ ಹೆಂಡತಿ ನನ್ನ ಹೆಸರನ್ನು ನ್ಯಾಯಾಲಯದ ಮುಂದೆ ಎಳೆತಂದಿದ್ದಾಳೆ" ಎಂದು ಆರೋಪಿಸಿದ್ದಳು.

ಈ ಪ್ರಕರಣ ಬಹಳ ದಿನ ನ್ಯಾಯಾಲಯದ ಮುಂದೆ ನಡೆದು ಕೊನೆಗೆ ಇದ್ಯಾಕೋ ಕುತ್ತಿಗೆಗೆ ಬಂತು ಎಂದು ತಿಳಿದ ಪವನ್ ತನಗೆ ಪರಿಚಯವಿದ್ದ ರಾಜಕಾರಣಿಯೊಬ್ಬರ ಮೂಲಕ ನಂದಿನಿಯ ತಂದೆಗೆ ಒಂದು ಪ್ರಸ್ತಾವನೆಯನ್ನು ಕಳುಹಿಸಿದ. ಅದರ ಪ್ರಕಾರ ತಾನು ನಂದಿನಿಗೆ ಹತ್ತು ಕೋಟಿ ರೂಪಾಯಿ ನೀಡುವುದಾಗಿಯೂ, ಆಕೆ ತನ್ನ ಮೊಕದ್ದಮೆಯನ್ನು ಹಿಂದೆ ಪಡೆಯಬೇಕೆಂದೂ, ಇಬ್ಬರೂ ವಿಚ್ಛೇದನೆ ಪಡೆಯುವುದೆಂದೂ ಹೇಳಿ ಕಳುಹಿಸಿದ್ದ.



ಇದಕ್ಕೆ ನಂದಿನಿಯ ತಂದೆ ನೀಡಿದ ಉತ್ತರವೇನು ಗೊತ್ತೆ: "ಅವನ ಹತ್ತು ಕೋಟಿ ರೂಪಾಯಿ ಬೇಕಿಲ್ಲ, ಬದಲಾಗಿ ನಾನೇ ಇಪ್ಪತ್ತು ಕೋಟಿ ರೂಪಾಯಿ ನೀಡುತ್ತೇನೆ ಆ ರೇನು ದೇಸಾಯಿ ಎಂಬಾಕೆ ಪವನ್‌ನ ಜೀವನದಿಂದ ತೊಲಗುವುದಾದರೆ." ಈ ಉತ್ತರವನ್ನು ಕೇಳಿ ಆ ರಾಜಕಾರಣಿಯು ಬಂದ ದಾರಿಗೆ ಸುಂಕವಿಲ್ಲ ಎಂದು ಹಿಂದಿರುಗಿದ್ದ.

ಕೊನೆಗೆ ಇದೆಲ್ಲ ಅದು ಹೇಗೋ ಅಂತ್ಯಗೊಂಡಿತು. ಅಂದಹಾಗೆ, ತನಗೂ ಪವನ್ ಕಲ್ಯಾಣ್‌ಗೂ ಯಾವುದೇ ಸಂಬಂಧವಿಲ್ಲ ಎಂದು ಆಣೆ ಪ್ರಮಾಣ ಮಾಡಿದ್ದ ರೇನು ದೇಸಾಯಿ ಇಂದು ಪವನ್ ಕಲ್ಯಾಣ್‌ನೊಂದಿಗೆ ಜೀವನ ಸಾಗಿಸುತ್ತಿದ್ದಾಳಲ್ಲದೆ ಅವರಿಬ್ಬರಿಗೂ ಒಂದು ಮಗುವೂ ಇದೆ.

ಹೀಗೆ ತಮ್ಮನ ದ್ವಿಪತ್ನಿತ್ವ ಕೇಸು, ಮಗಳನ್ನು ಮದುವೆಯಾಗಬೇಕಿದ್ದ ನಟನ ಎಕ್ಸ್‌ಟ್ರಾ ಲವ್ ಕೇಸು, ಈಗ ಇನ್ನೊಬ್ಬಳು ಮಗಳು ಓಡಿ ಹೋಗಿ ತನ್ನ ಪ್ರಿಯತಮನನ್ನು ಮದುವೆಯಾಗಿರುವ ಪ್ರಕರಣ.... ಇವೆಲ್ಲ ಚಿರಂಜೀವಿಯವರ ಮನೆಯಲ್ಲಿ ನಡೆದಿವೆ.

ಸೂಪರ್ ಸ್ಟಾರ್ ಆದರೇನು, ಅವರೂ ತಂದೆ, ಸಹೋದರ, ಸಾಮಾನ್ಯ ಮನುಷ್ಯ!

ತೆಲುಗಿನಲ್ಲೂ ಅದೇ ಕತೆ




ಮೊನ್ನೆ ತೆಲುಗು ಚಿತ್ರನಟ ವೆಂಕಟೇಶ್ ಬೆಂಗಳೂರಿನಲ್ಲಿ ದಿಢೀರನೆ ಪತ್ರಿಕಾಗೋಷ್ಠಿ ನಡೆಸಿದರು. ಅವರು ನಿರ್ಮಿಸಿರುವ ಮತ್ತು ನಟಿಸಿರುವ 'ತುಳಸಿ' ಚಿತ್ರದ ಪ್ರಚಾರಕ್ಕಾಗಿ ಅವರನ್ನು ಹಂಚಿಕೆದಾರ ವಿಜಯಕುಮಾರ್ ಇಲ್ಲಿಗೆ ಕರೆಸಿದ್ದರು. ವೆಂಕಟೇಶ್ ಅವರ 22 ವರ್ಷದ ವೃತ್ತಿ ಜೀವನದಲ್ಲಿ ಅವರು ಬೆಂಗಳೂರಿನಲ್ಲಿ ಪತ್ರಕರ್ತರನ್ನುದ್ದೇಶಿಸಿ ಮಾತನಾಡಿದ್ದು ಇದೇ ಮೊದಲ ಬಾರಿ.

ಪತ್ರಿಕಾಗೋಷ್ಠಿಯಲ್ಲಿ ವಿಶೇಷವೇನಿರಲಿಲ್ಲ, ಮತ್ತದೇ ಮಾಮೂಲಿ ಹರಟೆ. ಒಂದೇ ಒಂದು ಸ್ಪೆಷಾಲಿಟಿ ಅಂದರೆ, ಅರ್ಧ ಗಂಟೆ ಮೊದಲೇ ಗೋಷ್ಠಿ ನಡೆಯುವ ಹಾಲಿಗೆ ಬಂದು ಕುಳಿತ ವೆಂಕಟೇಶ್ ಸರಿಯಾದ ಸಮಯಕ್ಕೆ ತಮ್ಮ ಮಾತುಕತೆಯನ್ನು ಆರಂಭಿಸಿದ್ದು, ತೆಲುಗು ಚಿತ್ರೋದ್ಯಮದ ವೃತ್ತಿಪರತೆಯನ್ನು ಇದು ತೋರಿಸುತ್ತಿತ್ತು.

ಅಂದಹಾಗೆ, ವೆಂಕಟೇಶ್ ಕನ್ನಡದವರಿಗೆ ಅಪರಿಚಿತರೇನೂ ಅಲ್ಲ, ಅವರು ನಟಿಸಿದ ಅನೇಕ ಚಿತ್ರಗಳು ಕರ್ನಾಟಕದಲ್ಲಿ ಶತದಿನೋತ್ಸವ ಆಚರಿಸಿವೆ. ಹಾಗೆಯೇ ಅವರ ಹಿಟ್ ಚಿತ್ರಗಳನ್ನು ರವಿಚಂದ್ರನ್ ಮತ್ತು ವಿಷ್ಣು ಕನ್ನಡಕ್ಕೆ ಭಟ್ಟಿ ಇಳಿಸಿ ಜಯಗಳಿಸಿದ್ದುಂಟು. ನಮ್ಮ ಕನ್ನಡದ ಹುಡುಗಿ ಸೌಂದರ್ಯ ಜೊತೆ ವೆಂಕಟೇಶ್ ನಟಿಸಿದ ಅನೇಕ ಚಿತ್ರಗಳೂ ಸೂಪರ್ ಹಿಟ್ ಆಗಿದ್ದವು. ಹಾಗೆಯೇ ಪ್ರೇಮಾಳನ್ನು ತೆಲುಗಿಗೆ ಪರಿಚಯಿಸಿದ್ದೇ ವೆಂಕಟೇಶ್.

ಇತ್ತೀಚೆಗೆ ಚಿತ್ರಗಳ ಪ್ರಚಾರ ಶೈಲಿಯೇ ಬದಲಾಗುತ್ತಿರುವುದಕ್ಕೆ ವೆಂಕಟೇಶ್ ಬೆಂಗಳೂರಿಗೆ ಬಂದಿದ್ದೇ ಸಾಕ್ಷಿ. ಆದರೆ ಗಾಂಧಿನಗರದವರ ವ್ಯಾಖ್ಯಾನವೇ ಬೇರೆ. "ಇಲ್ಲಿಯ ಹಾಗೆ ತೆಲುಗು ಚಿತ್ರರಂಗದಲ್ಲಿ ಕೂಡಾ ಹಿರಿಯ ನಟರ ಸ್ಥಾನ ಅಲ್ಲಾಡುತ್ತಿದೆ. ಹೀಗಾಗಿ ಅವರೂ ಈಗ ಮೈಚಳಿ ಬಿಟ್ಟು ಓಡಾಡಲು ಶುರು ಮಾಡಿದ್ದಾರೆ. ಇಲ್ಲದಿದ್ದರೆ ಡಜನ್‌ಗಟ್ಟಲೆ ಸೂಪರ್ ಹಿಟ್ ಚಿತ್ರಗಳನ್ನು ನೀಡಿ ಕರ್ನಾಟಕದಲ್ಲೂ ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಹೊಂದಿರುವ ವೆಂಕಟೇಶ್ ಎರಡು ದಶಕಗಳ ನಂತರ ಈಗ ತಮ್ಮ ಚಿತ್ರದ ಪ್ರಚಾರಕ್ಕಾಗಿ ಬರುವ ಅಗತ್ಯವಾದರೂ ಏನಿತ್ತು?" ನೀವೂ ಒಮ್ಮೆ ಯೋಚಿಸಿ.

'ಮಂದಾಕಿನಿ'ಯ ಪಾಲಿಸಿ




ಕೆಲವರು ಚಿತ್ರ ಮಾಡುವ ಮೊದಲೇ ತಮ್ಮ ನಡವಳಿಕೆಯಿಂದ ಇಡೀ ಉದ್ಯಮದವರ ಗಮನವನ್ನು ಸೆಳೆಯುತ್ತಾ ತಮ್ಮ ಆಗಮನವನ್ನು ಘೋಷಿಸುತ್ತಾರೆ. ಅಂತಹವರ ಸಾಲಿಗೆ 'ಮಂದಾಕಿನಿ' ಚಿತ್ರದ ನಿರ್ಮಾಪಕ ಶ್ರೀನಿವಾಸ್ ಸೇರುತ್ತಾರೆ.

'ಮಂದಾಕಿನಿ' ಚಿತ್ರ ಆರಂಭವಾಗಿ ಇನ್ನೂ ಒಂದು ತಿಂಗಳೂ ಆಗಿಲ್ಲ, ಚಿತ್ರವಿನ್ನೂ ಮುಗಿದಿಲ್ಲ. ಅದಕ್ಕಿಂತ ಮೊದಲೇ ಮೊನ್ನೆ ಚಿತ್ರದಲ್ಲಿ ದುಡಿಯುವ ಎಲ್ಲರಿಗೂ ವಿಮಾ ಪಾಲಿಸಿಯನ್ನು ನೀಡಿ ಶ್ರೀನಿವಾಸ್ ಬೇರೆ ನಿರ್ಮಾಪಕರಿಗಿಂತ ತಾವು ವಿಭಿನ್ನ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಚಿತ್ರವೊಂದಕ್ಕೆ ತಂತ್ರಜ್ಞರು ಮತ್ತು ಕಲಾವಿದರು ತಮ್ಮ ಜೀವವನ್ನು ಪಣವಿಟ್ಟು ಚಿತ್ರದಲ್ಲಿ ತೊಡಗಿಸಿಕೊಳ್ಳುತ್ತಾರೆ. ನಮ್ಮಲ್ಲಿ 'ಲಾಕಪ್‌ಡೆತ್' ಚಿತ್ರದ ಸಮೇತ ಅನೇಕ ದುರಂತಗಳು ನಡೆದಿವೆ. ಇಂತಹ ದುರಂತಗಳು ನಡೆದಾಗ ಚೇಂಬರ್ ಲಿಪ್ ಸಿಂಪತಿ ತೋರಿಸುತ್ತದೆಯೇ ವಿನಃ ಆರ್ಥಿಕವಾಗಿ ಯಾರಿಗೂ ಏನೂ ಸಹಾಯ ಮಾಡಲ್ಲ. ಈ ಹಿನ್ನೆಲೆಯಲ್ಲಿ ನಿರ್ಮಾಪಕ ಶ್ರೀನಿವಾಸ್ ನಿಜಕ್ಕೂ ಕಲಾವಿದರ ಮತ್ತು ತಂತ್ರಜ್ಞರ ಜೀವದ ಬಗ್ಗೆ ತಮ್ಮ ಕಾಳಜಿಯನ್ನು ತೋರಿಸಿದ್ದಾರೆ. ಇದು ಒಂದು ಶ್ಲಾಘನೀಯ ವಿಷಯ. ಚಿತ್ರರಂಗದಲ್ಲಿ ಕೋಟ್ಯಂತರ ರೂ. ಸುರಿದು ದುಪ್ಪಟ್ಟು ಲಾಭ ಪಡೆದಿರುವ ಕೋಟಿ ವೀರರೆಲ್ಲ ಒಮ್ಮೆ ಶ್ರೀನಿವಾಸ್ ಕಡೆಗೆ ನೋಡಿದರೆ ಒಳ್ಳೆಯದು.

ಚಿಕ್ಕವರ ಗಲಾಟೆಯಲ್ಲಿ ದೊಡ್ಡವ 'ಗಜ' ಗೆಲ್ಲುತ್ತಾನೆಯೇ?



ಒಂದೊಮ್ಮೆ ಇಡೀ ಗಾಂಧಿನಗರವನ್ನು ಆಳುತ್ತಿದ್ದ ಸುರೇಶ್ ಗೌಡ್ರು ನಿರ್ಮಾಣದ 'ಗಜ' ಚಿತ್ರ ಬಿಡುಗಡೆಗೆ ಸಿದ್ಧವಾಗಿ ನಿಂತಿದೆ.

ಈ ಹಿಂದೆ ಸುನಿಲ್ ಕುಮಾರ್ ದೇಸಾಯಿ ನಿರ್ದೇಶನದ 'ಮರ್ಮ' ನಿರ್ಮಿಸಿ ಕೈಸುಟ್ಟುಕೊಂಡಿದ್ದ ಸುರೇಶ್ ಗೌಡ್ರು ಸುಮಾರು ಮೂರು ವರ್ಷಗಳ ನಂತರ 'ಗಜ'ನನ್ನು ಕರೆತಂದಿದ್ದಾರೆ.

ಹೊಸಬರ ಆಗಮನದ ನಂತರ ಹಿರಿಯ ಮತ್ತು ಮಧ್ಯಮ ವರ್ಗದ ನಟರ ಚಿತ್ರಗಳೆಲ್ಲಾ ಬಾಕ್ಸಾಫೀಸಿನಲ್ಲಿ ಉದುರುತ್ತಿರುವ ಇಂದಿನ ನವೋದಯದ ಸಂದರ್ಭದಲ್ಲಿ 'ಗಜ' ಚಿತ್ರ ಖಂಡಿತವಾಗಿಯೂ ಗೆಲ್ಲುತ್ತದೆ ಎಂಬ ವಿಶ್ವಾಸದಲ್ಲಿದ್ದಾರೆ ಸುರೇಶ್ ಗೌಡ್ರು. "ಬಾಕ್ಸಾಫೀಸಿನಲ್ಲಿ ಗೆಲ್ಲಲು ಬೇಕಾದ ಎಲ್ಲಾ ಮಸಾಲೆ ಅಂಶಗಳೂ ಇದರಲ್ಲಿವೆ" ಎಂಬುದು ಅವರ ಮಾತು. ಅವರ ಮಾತಿಗೆ ಪೂರಕವೆಂಬಂತೆ ಈ ಚಿತ್ರದ ಎಲ್ಲಾ ಏರಿಯಾಗಳು ಮಾರಾಟವಾಗಿವೆ. ಈಗ ಎಲ್ಲರ ಮುಂದಿರುವ ಪ್ರಶ್ನೆ ಯಾವುದೆಂದರೆ 'ಮುಂಗಾರು ಮಳೆ' ನಂತರ ಹಳಬರ ಚಿತ್ರಗಳೆಲ್ಲಾ ಸಾಲುಸಾಲಾಗಿ ಬೀಳುತ್ತಿರುವಾಗ ದರ್ಶನ್ ನಟಿಸಿರುವ 'ಗಜ' ಜಯಗಳಿಸುತ್ತದೆಯೇ?

ಎಲ್ಲರೂ ಕುತೂಹಲದಿಂದ ಕಾದಿದ್ದಾರೆ!

'ನಾ'ಗಳಿಗೆ 'ನೋ'





ಗೋವಾದಲ್ಲಿ ಸದ್ಯದಲ್ಲೇ ನಡೆಯಲಿರುವ ಅಂತರರಾಷ್ಟ್ರೀಯ ಚಿತ್ರೋತ್ಸವದ ಪನೋರಮಾ ವಿಭಾಗಕ್ಕೆ ಕನ್ನಡದ ಮೂರು ಸಿನಿಮಾಗಳು ಆಯ್ಕೆಯಾಗಿವೆ. ಅವು ಲಿಂಗದೇವರುರವರ 'ಕಾದಬೆಳದಿಂಗಳು', ಶಿವರುದ್ರಯ್ಯನವರ 'ದಾಟು' ಮತ್ತು ರಾಮದಾಸ್ ನಾಯ್ಡುರವರ 'ಮೊಗ್ಗಿನ ಜಡೆ'.

ಈ ಬಾರಿ ಸುಮಾರು ಹದಿನೆಂಟು ಕನ್ನಡ ಚಿತ್ರಗಳು ಪನೋರಮಾ ಆಯ್ಕೆ ಸಮಿತಿಯ ಮುಂದಿದ್ದವು. ಅವುಗಳಲ್ಲಿ ನಾಗತಿಹಳ್ಳಿ ಚಂದ್ರಶೇಖರ್, ನಂಜುಂಡೇಗೌಡ ಮತ್ತು ನಾಗಾಭರಣ ನಿರ್ದೇಶಿಸಿರುವ ಚಿತ್ರಗಳೂ ಇದ್ದವು. ಆದರೆ ಈ ಮೂರೂ 'ನಾ'ಗಳನ್ನು ಹಿಂದಿಕ್ಕಿ ಈ ಮೂರು ಚಿತ್ರಗಳನ್ನು ಆಯ್ಕೆ ಮಾಡಲಾಯಿತು.

RANJANE BODHANE PRACHODANE LANKESH, Kannada Weekly Price Rs. 10/- 31-10-2007 RNI No. KARKAN2005/14648 Regd.No.KA/RNP/BGS/2036/2008-10



ಅಂದು ಲಾಂಚ್ ಪ್ಯಾಡ್ ಇಂದು ಪುನರ್ವಸತಿ ಕೇಂದ್ರ

ರಾಮ್‌ಗೋಪಾಲ್ ವರ್ಮಾ ಕನ್ನಡ ಚಿತ್ರವೊಂದನ್ನು ನಿರ್ದೇಶಿಸಲಿದ್ದಾರಂತೆ. ಸುದೀಪ್ ಈ ಚಿತ್ರದ ನಾಯಕ. ವರ್ಮಾ ಎಂಬ ತೆಲುಗು ಮತ್ತು ಹಿಂದಿ ಸಿನಿಮಾಗಳ ನಿರ್ದೇಶಕ ಕನ್ನಡಕ್ಕೆ ಬರುತ್ತಿರುವುದೇಕೆ? ಎಂಬ ಪ್ರಶ್ನೆಗೆ ಇಲ್ಲಿದೆ ಉತ್ತರ. ಇತ್ತೀಚೆಗೆ ರಾಮ್‌ಗೋಪಾಲ್ ವರ್ಮಾ ನಿರ್ದೇಶಿಸಿದ್ದ ಚಿತ್ರಗಳೆಲ್ಲಾ ಸಾಲುಸಾಲಾಗಿ ಅಡ್ಡಡ್ಡ ಮಲಗುತ್ತಿವೆ. ಇದನ್ನು ಕಂಡು ಬಾಲಿವುಡ್ಡಿನವರು ವರ್ಮಾನನ್ನು ಫ್ಲಾಪ್ ಡೈರೆಕ್ಟರ್ ಎಂದು ಬ್ರಾಂಡ್ ಮಾಡಲಾರಂಭಿಸಿದ್ದಾರೆ.

ಈ ಮನುಷ್ಯನ ಕೆರಿಯರ್ ಗ್ರಾಫೇ ವಿಚಿತ್ರವಾಗಿದೆ. ತೆಲುಗಿನಲ್ಲಿ ಒಂದೆರಡು ಚಿತ್ರಗಳು ಹಿಟ್ ಆದ ನಂತರ ಈ ಹೈದ್ರಾಬಾದ್ ಬಾಯ್ ಬಾಲಿವುಡ್ಡಿಗೆ ಲಗ್ಗೆ ಹಾಕಿದ. 'ರಂಗೀಲಾ' ಚಿತ್ರ ಹಿಟ್ ಆಗಿದ್ದೇ ತಡ ಬಾಲಿವುಡ್ ಸ್ಟಾರ್‌ಗಳು ಈತನ ಚಿತ್ರಗಳಲ್ಲಿ ನಟಿಸಲು ಮುಗಿಬೀಳಲಾರಂಭಿಸಿದರು. ಬಿಗ್ ಬಿ ಕೂಡ ಈ ವರ್ಮಾನ ಸುಳಿಯಲ್ಲಿ ಸಿಕ್ಕಿಬಿದ್ದಿದ್ದರು ಅಂದರೆ ಈತನ ವರ್ಚಸ್ಸು ಎಂತಹದ್ದಾಗಿತ್ತು ಎಂದು ಅರ್ಥವಾಗುತ್ತದೆ. ಕೊನೆಗೆ ಇದೆಲ್ಲ ಯಾವ



ಮಟ್ಟಕ್ಕೆ ಹೋಯಿತೆಂದರೆ ಈತ 'ವರ್ಮಾ ಫ್ಯಾಕ್ಟರಿ' ಎಂಬ ಸಂಸ್ಥೆಯನ್ನೇ ತೆರೆದು ಕಾರ್ಖಾನೆಯಂತೆ ಚಿತ್ರಗಳನ್ನು ನಿರ್ಮಿಸಲು, ನಿರ್ದೇಶಿಸಲು ಆರಂಭಿಸಿದ. ಸಹಜವಾಗಿಯೇ ಅವೆಲ್ಲ ತೋಪು ಹೊಡೆಯಲಾರಂಭಿಸಿದವು. ಅಷ್ಟೇ ಅಲ್ಲ, ಇತ್ತೀಚೆಗೆ ಐತಿಹಾಸಿಕ 'ಶೋಲೆ' ಚಿತ್ರವನ್ನು ಆಧುನಿಕ ಶೈಲಿಯಲ್ಲಿ ಹೇಳಲು ಹೋಗಿ ದೊಡ್ಡ ಫ್ಲಾಪ್ ಆದ ವರ್ಮಾ.

ಇದೆಲ್ಲದರಿಂದ ಈಗ ವರ್ಮಾ ಬಗ್ಗೆ ಮಾತಾಡುವವರೇ ಬಾಲಿವುಡ್ಡಿನಲ್ಲಿ ಇಲ್ಲದಂತಾಗಿದೆ. ಆದ್ದರಿಂದಲೇ ಆತ ಕನ್ನಡಕ್ಕೆ ಬರುತ್ತಿದ್ದಾರೆ.

ಇಪ್ಪತ್ತು ವರ್ಷಗಳ ಹಿಂದೆ ಮಣಿರತ್ನಂ ಎಂಬ ತಮಿಳುನಾಡಿನ ಯುವಕ ತನ್ನ ಮೊದಲ ಚಿತ್ರ 'ಪಲ್ಲವಿ ಅನುಪಲ್ಲವಿ'ಯನ್ನು ನಿರ್ದೇಶಿಸಲು ಕನ್ನಡ ಚಿತ್ರರಂಗವನ್ನೇ ಆಯ್ಕೆ ಮಾಡಿಕೊಂಡಿದ್ದರು. ಆನಂತರ ತಮಿಳು, ತೆಲುಗು ಮತ್ತು ಹಿಂದಿಗೆ ಹೈಜಂಪ್ ಮಾಡಿದ್ದರು.

ಈಗ ವರ್ಮಾ ಅದನ್ನೇ ರಿವರ್ಸ್ ಗೇರ್‌ನಲ್ಲಿ ಮಾಡಲು ಹೊರಟಿದ್ದಾರೆ. ಅಂದು ಮಣಿರತ್ನಂಗೆ ಲಾಂಚ್ ಪ್ಯಾಡ್ ಆಗಿದ್ದ ಕನ್ನಡ ಚಿತ್ರರಂಗ ಇಂದು ರಾಮ್ ಗೋಪಾಲ್ ವರ್ಮಾನಿಗೆ ಪುನರ್ವಸತಿ ಕೇಂದ್ರದಂತೆ ಕಂಡಿದೆ.


ಇದು ಕನ್ನಡ ಚಿತ್ರರಂಗದ ದುರಂತ!



ಕೊನೆಗೂ ಸೂರಪ್ಪನಿಗೆ ಬಂತು ಲಕ್ಕು

ಶಿವರಾಜ್‌ಕುಮಾರ್ ಹೊಸಮನೆ 'ಶ್ರೀ ಮುತ್ತು'ವಿನ ಗೃಹ ಪ್ರವೇಶದ ದಿನದಂದೇ ಅವರ ಹೊಸ ಚಿತ್ರ 'ಬಂಧು-ಬಳಗ'ದ ಹಾಡುಗಳ ಧ್ವನಿಮುದ್ರಣವೂ ನಡೆಯಿತು. ಆ ಮೂಲಕ ಕಳೆದ ಮೂರ್‍ನಾಲ್ಕು ವರ್ಷಗಳಿಂದ ಚಿತ್ರವೊಂದನ್ನು ನಿರ್ಮಿಸಬೇಕೆಂಬ ಹಂಬಲದಿಂದ ಓಡಾಡುತ್ತಿದ್ದ ಸೂರಪ್ಪ ಬಾಬುಗೆ ಕೊನೆಗೂ ಒಂದು ನೆಲೆ ಸಿಕ್ಕಿದಂತಾಗಿದೆ.

ಈ ಚಿತ್ರದ ಕಥೆಯನ್ನು ಜನಾರ್ದನ ಮಹರ್ಷಿ ಬರೆದಿದ್ದಾರೆ. ಒಂದೇ ಒಂದು ರೀಡಿಂಗ್‌ಗೆ ಈ ಕಥೆಯನ್ನು ಶಿವರಾಜ್‌ಕುಮಾರ್ ಓಕೆ ಮಾಡಿದರಂತೆ. ವಾಸ್ತವವಾಗಿ ರಾಕ್‌ಲೈನ್ ವೆಂಕಟೇಶ್ ಮಹರ್ಷಿಯವರ ಬಳಿ ರಾಜ್‌ಕುಮಾರ್‌ಗಾಗಿ ಈ ಕಥೆಯನ್ನು ಬರೆಸಿದ್ದರು. ಈಗ ಸೂರಪ್ಪ ಬಾಬುಗಾಗಿ ಈ ಕಥೆಯನ್ನು ಹಸ್ತಾಂತರ ಮಾಡಿದ್ದಾರೆ.



ಈ ರೀತಿ ಹಸ್ತಾಂತರ ಮಾಡುತ್ತೇನೆ ಎಂದು ಮಾತು ಕೊಟ್ಟಿರಲಿಲ್ಲ. ಬಾಬು ಅವಸ್ಥೆಯನ್ನು ನೋಡಿ ರಾಕ್ ಹೀಗೆ ಮಾಡಿದರಂತೆ.

ಈ ಮಹರ್ಷಿ ಸದ್ಯಕ್ಕೆ ಅತ್ಯಂತ ಬೇಡಿಕೆಯಲ್ಲಿರುವ ಕಥೆಗಾರ. ಕನ್ನಡದ ನಿರ್ದೇಶಕರಿಗಿಂತಲೂ ಇವರ ಸಂಭಾವನೆ ದುಬಾರಿ. ಸದ್ಯಕ್ಕೆ ಕಥೆಯೊಂದಕ್ಕೆ 10 ಲಕ್ಷ ರೂಪಾಯಿಗಳನ್ನು ಪಡೆಯುತ್ತಾರೆ. ಇವರ ಕಥೆಯನ್ನಾಧರಿಸಿಯೇ 'ಆಕಾಶ್', 'ಅರಸು' ಚಿತ್ರಗಳನ್ನು ನಿರ್ಮಿಸಲಾಗಿತ್ತು. ಈಗ ಚಿತ್ರೀಕರಣದಲ್ಲಿರುವ 'ಬಿಂದಾಸ್', 'ಮೆರವಣಿಗೆ' ಕೂಡ ಇವರದ್ದೇ ಕಥೆಯಾಗಿದೆ.

ಹೀಗಾಗಿ ಕನ್ನಡದಲ್ಲಿ ಈ ಕಥೆಗಾರನ ಕಾಲ್‌ಶೀಟ್‌ಗಾಗಿ ನಿರ್ಮಾಪಕರು ಸಾಲುಗಟ್ಟಿ ನಿಂತಿದ್ದಾರೆ.



'ಮೊಗ್ಗಿನ ಮನಸ್ಸು' ಶುಭಾ ಪೂಂಜ



ಹೊಸಬರ ಆಗಮನ


ಈ ವಾರ ಇಬ್ಬರು ಯುವ ನಿರ್ದೇಶಕರ ಚಿತ್ರಗಳು ತೆರೆ ಕಂಡಿವೆ. ಒಬ್ಬ 'ಗೆಳೆಯ' ಚಿತ್ರದ ಹರ್ಷ ಮತ್ತೊಬ್ಬ 'ಆ ದಿನಗಳು' ಚಿತ್ರದ ಚೈತನ್ಯ. ಇಬ್ಬರ ಬಗ್ಗೆಯೂ ಒಳ್ಳೆಯ ಮಾತು ಮತ್ತು ಒಪೀನಿಯನ್ ಕೇಳಿಬರುತ್ತಿದೆ.

ಒಂದು ಕಾಲದಲ್ಲಿ ವರ್ಷಕ್ಕೊಬ್ಬ ಯುವಕ ನಿರ್ದೇಶಕನಾಗುವುದೇ ಅಪರೂಪವಾಗಿತ್ತು ಈಗ ಪ್ರತಿ ವಾರ ಹೊಸಬರ ಚಿತ್ರಗಳು ಬಿಡುಗಡೆಯಾಗುತ್ತಿವೆ ಆದರೆ ಅವರ್‍ಯಾರೂ




ಗಮನ ಸೆಳೆಯದೆ ಪ್ರವಾಹದಲ್ಲಿ ಮುಳುಗಿಹೋಗಿದ್ದಾರೆ. ಆದರೆ ಚೈತನ್ಯ ಮತ್ತು ಹರ್ಷ ಬಗ್ಗೆ ಚಿತ್ರರಂಗದಲ್ಲಿ ಉತ್ಸಾಹದ ಮಾತು ಕೇಳಿಬರುತ್ತಿದೆ.

ಹಲವಾರು ವರ್ಷಗಳಿಂದ ನೃತ್ಯ ನಿರ್ದೇಶಕನಾಗಿ ಕನ್ನಡ ಚಿತ್ರರಂಗದಲ್ಲಿ ಚಾಲ್ತಿಯಲ್ಲಿದ್ದ ಹುಡುಗ ಹರ್ಷ. ಹಾಗೆಯೇ ಚೈತನ್ಯ ಸಾಹಿತಿ ಮರುಳಸಿದ್ದಪ್ಪನವರ ಪುತ್ರ ಮಾತ್ರವಲ್ಲ ಗಿರೀಶ್ ಕಾರ್ನಾಡರ ಸಹಾಯಕನಾಗಿ ಅನೇಕ ವರ್ಷಗಳಿಂದ ತೆರೆಮರೆಯಲ್ಲಿ ಕೆಲಸ ಮಾಡಿದ ಅನುಭವಿ. ಇವರಿಬ್ಬರು ಚಿತ್ರರಂಗಕ್ಕೆ ಹೊಸ ಹುರುಪನ್ನು ತರಲಿ.



ಪುನೀತ್‌ನನ್ನು ನಿರ್ದೇಶಿಸಲಿದ್ದಾರೆ ಪ್ರೇಮ್

2008ರಲ್ಲಿ ಇಬ್ಬರು ಯುವ ಪ್ರತಿಭೆಗಳ ಸಮಾಗಮವಾಗಲಿದೆ. ಅದು ಪವರ್‌ಸ್ಟಾರ್ ಪುನೀತ್‌ರಾಜ್‌ಕುಮಾರ್ ಮತ್ತು 'ಜೋಗಿ' ಖ್ಯಾತಿಯ ನಿರ್ದೇಶಕ ಪ್ರೇಮ್. ಇವರಿಬ್ಬರನ್ನು ಒಟ್ಟಿಗೆ ಸೇರಿಸಿರುವುದು ನಿರ್ಮಾಪಕ ಸುರೇಶ್ ಗೌಡ್ರು. 'ಗಜ' ಚಿತ್ರಕ್ಕಿಂತ ಮೊದಲೇ ಪುನೀತ್-ಪ್ರೇಮ್ ಕಾಂಬಿನೇಷನ್ ಚಿತ್ರ ಸೆಟ್ಟೇರಬೇಕಿತ್ತು, ಆದರೆ ಪ್ರೇಮ್ 'ಪ್ರೀತಿಯೇಕೆ ಭೂಮಿ ಮೇಲಿದೆ' ಚಿತ್ರವನ್ನು ವರ್ಷಾನುಗಟ್ಟಲೆ ಎಳೆಯುತ್ತಿರುವುದರಿಂದ ಇವರಿಬ್ಬರ ಮಿಲನ ತಡವಾಗಿದೆ.




ಈ ಹೊಸ ಚಿತ್ರದಿಂದಾಗಿ ಎರಡು ವಿಷಯಗಳು ಸ್ಪಷ್ಟವಾದವು. ಒಂದು 'ಪ್ರೀಭೂಮೇ' ಚಿತ್ರ ಈ ವರ್ಷವೇ ಬಿಡುಗಡೆಯಾಗುತ್ತದೆ ಎಂಬುದು. ಎರಡನೆಯದು ಆ ಚಿತ್ರವಾದ ನಂತರ ಪ್ರೇಮ್ ನಾಯಕನಾಗಿಯೇ ಉಳಿಯುವ ಬದಲಾಗಿ ನಿರ್ದೇಶನ ಮಾಡುತ್ತಾರೆಂಬುದು.

ಅಲ್ಲಿಗೆ ಪ್ರೇಮ್ 2007ರಲ್ಲಿ ಪ್ರೇಮ, ಮದುವೆ, ಪ್ರಚಾರ ಮತ್ತು ನಟನೆ... ಇವೆಲ್ಲ ಗೊಂದಲಗಳ ನಂತರ 2008ಲ್ಲಿ ಮತ್ತೆ ನಿರ್ದೇಶನದ ಕಡೆಗೆ ಬರುತ್ತಾರೆ.



ಕುಳ್ಳ ಮಳ್ಳ

ದ್ವಾರಕೀಶ್ ಮೊನ್ನೆ 'ಚೆಲುವಿನ ಚಿತ್ತಾರ' ಶತದಿನೋತ್ಸವ ಸಂಭ್ರಮದಲ್ಲಿ ತುಂಬಾ ಭಾವೋದ್ವೇಗಕ್ಕೊಳಗಾಗಿ ಮಾತನಾಡಿದರು. "ಇಂಥ ಸಮಾರಂಭಗಳು ನಡೀತಾ ಇರ್‍ಬೇಕು, ಕಲಾವಿದರು ಪರಸ್ಪರ ಅರಿತು ಸ್ನೇಹದಿಂದಿರಬೇಕು..." ಎಂಬಿತ್ಯಾದಿ ಉಪದೇಶಗಳನ್ನು ನೀಡಿದ ದ್ವಾರಕೀಶ್ ಅಲ್ಲಿ ನೆರೆದಿದ್ದವರಿಂದ ಧಾರಾಳವಾಗಿ ಚಪ್ಪಾಳೆ ಗಿಟ್ಟಿಸಿದರು. ದ್ವಾರಕೀಶ್ ಹೇಳಿದ್ದು ನೂರಕ್ಕೆ ನೂರು ಸತ್ಯ ಎಂಬುದರಲ್ಲಿ ದೂಸರಾ ಮಾತೇ ಇಲ್ಲ.



ಆದರೆ ಎರಡು ವರ್ಷಗಳ ಹಿಂದೆ ಇವರೇ ನಿರ್ಮಿಸಿದ ಚಿತ್ರ 'ಆಪ್ತಮಿತ್ರ' ಚಿತ್ರರಂಗದ ದಾಖಲೆಗಳನ್ನೆಲ್ಲ ಮುರಿದು ಇತಿಹಾಸ ನಿರ್ಮಿಸಿತ್ತು. ಅದಕ್ಕೆ ಸಂಬಂಧಪಟ್ಟ ಒಂದೇ ಒಂದು ಸಂತೋಷ ಸಮಾರಂಭ ಕೂಡಾ ಈ ಕುಳ್ಳ ಮಾಡಿರಲಿಲ್ಲ. ಅಷ್ಟೇ ಅಲ್ಲ, ಆ ಚಿತ್ರದ ನಾಯಕ ವಿಷ್ಣು ಮತ್ತು ದ್ವಾರಕೀಶ್ ಈಗ ಮತ್ತೆ ಒಬ್ಬರನ್ನೊಬ್ಬರು ಮುಖಕೊಟ್ಟು ಮಾತನಾಡದ ಸ್ಥಿತಿ ತಲುಪಿದ್ದಾರೆ.

ಇದನ್ನು ನೋಡಿದರೆ ಕುಳ್ಳನಿಗೊಂದು ನ್ಯಾಯ, ಮಳ್ಳನಿಗೊಂದು ನ್ಯಾಯ ಎಂಬ ಮಾತು ನಿಮಗೆ ನೆನಪಾಗುವುದಿಲ್ಲವೇ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : [illegible]
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, [illegible]